ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 4 ಮಂಗಳವಾರ 2023

ಸಂಪುಟ: 44 | ಸಂಚಿಕೆ: 79 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಕರ್ನಾಟಕ ಇನ್ನು ಸರ್ವ ಜನಾಂಗದ ಶಾಂತಿಯ ತೋಟ

● ಶಾಂತಿ, ಸಮೃದ್ಧ, ಸೌಹಾರ್ದಯುತ ನಾಡು ನಿರ್ಮಾಣಕ್ಕೆ ಬದ್ಧ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಘೋಷಣೆ ● ಹೊಸ ಸರ್ಕಾರದ ವಿಧಾನಮಂಡಲ ಮೊದಲ ಅಧಿವೇಶನದ ಜಂಟಿ ಸದನ ಉದ್ದೇಶಿಸಿ ಭಾಷಣ ● ಭ್ರಷ್ಟಾಚಾರ ನಿರ್ಮೂಲನೆ, ಆರ್ಥಿಕ ಅಸಮಾನತೆ ಅಂತರ ತಗ್ಗಿಸುವುದು, ಹಸಿವು ಮುಕ್ತ ರಾಜ್ಯ ನಿರ್ಮಾಣದ ಗುರಿ ● ಜನರಿಂದ ಸಂಗ್ರಹವಾದ ಸಂಪತ್ತಿನ ಒಂದು ಭಾಗ ಜನರಿಗೆ ನೀಡುವ ಕೆಲಸ ● 2013ರಲ್ಲಿ ಜಾರಿಯಲ್ಲಿದ್ದ ಹಲವು ಯೋಜನೆ ಮರು ಜಾರಿ

ಬೆಂಗಳೂರು, ಜುಲೈ 3(ಕೆಎಂಶಿ)– ಭ್ರಷ್ಟಾಚಾರ ನಿರ್ಮೂಲನೆ, ಉಳ್ಳವರು ಮತ್ತು ಉಳ್ಳದವರ ನಡುವಿನ ಅಂತರ ಕಡಿಮೆ ಮಾಡುವುದು, ಹಸಿವು ಮುಕ್ತ ರಾಜ್ಯ ಮಾಡುವುದೇ ನನ್ನ ಸರ್ಕಾರದ ಪರಮ ಗುರಿ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ತಿಳಿಸಿದ್ದಾರೆ.

ನೂತನ ಸರ್ಕಾರ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ವಿಧಾನಮಂಡಲದ ಉಭಯ ಸದನಗಳ ಜಂಟಿ ಅಧಿವೇಶನ ದಲ್ಲಿ ಸದಸ್ಯರನ್ನುದ್ದೇಶಿಸಿ ಮಾತನಾಡಿದ ಅವರು, ಮುಂದಿನ 5 ವರ್ಷಗಳಲ್ಲಿ ರಾಷ್ಟ್ರಕ್ಕೆ ಕರ್ನಾಟಕವನ್ನು ಮಾದರಿಯಾಗಿ ತೋರ್ಪಡಿಸುವ ಗುರಿಯೊಂದಿಗೆ ತಮ್ಮ ಸರ್ಕಾರ ಕೆಲಸ ಮಾಡಲಿದೆ ಎಂದರು. ಭ್ರಷ್ಟಾಚಾರವನ್ನು ಮೂಲೋಚ್ಚಾಟನೆ ಮಾಡಲು ಆಡಳಿತಾತ್ಮಕ, ಶಾಸನಾತ್ಮಕ ಕಾನೂನು ತರುವುದಾಗಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರಾಜ್ಯಪಾಲರ ಭಾಷಣದ ಮೂಲಕ ಘೋಷಣೆ ಮಾಡಿಸಿದೆ. ಉಳ್ಳವರು ಮತ್ತು ಉಳ್ಳದವರ ನಡುವಿನ ಅಂತರವನ್ನು ತುಸುವಾದರೂ ● 9ನೇ ಪುಟಕ್ಕೆ



ಹಸಿದವರಿಗೆ ಅನ್ನ ನೀಡದ ಸರ್ಕಾರ ಜನದ್ರೋಹಿ ಸರ್ಕಾರವೆಂದು ಕರೆಸಿಕೊಳ್ಳುತ್ತದೆ: ಥಾವರ್‌ಚಂದ್

ಬೆಂಗಳೂರು: ಹಸಿದವರಿಗೆ ಅನ್ನ ನೀಡದ ಸರ್ಕಾರ ಜನದ್ರೋಹಿ ಸರ್ಕಾರವೆಂದು ಕರೆಸಿಕೊಳ್ಳುತ್ತದೆ ಎಂದು ರಾಜಪಾಲ ಥಾವರ್ ಚಂದ್ ಗೆಹ್ಲೋಟ್, ಪರೋಕ್ಷವಾಗಿ ಕೇಂದ್ರ ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ. ಕರ್ನಾಟಕದಲ್ಲಿ ನೂತನ ಕಾಂಗ್ರೆಸ್ ಸರ್ಕಾರದ ವಿಧಾನಮಂಡಲ ಅಧಿವೇಶನ ಆರಂಭವಾಗಿದ್ದು, ಜಂಟಿ ಸದನವನ್ನುದ್ದೇಶಿಸಿ ರಾಜ್ಯಪಾಲರು ಮಾತನಾಡಿದರು.

ಹಸಿದವರಿಗೆ ಅನ್ನ ನೀಡಿ: ಕಳೆದ 34 ವರ್ಷಗಳಲ್ಲಿ ಯಾರಿಗೂ ಇಷ್ಟು ದೊಡ್ಡ ಬಹುಮತ ಸಿಕ್ಕಿರಲಿಲ್ಲ. ಯಾರಿಗೂ ನೀಡದ ಬಹುಮತದೊಂದಿಗೆ ಜನ ಕಾಂಗ್ರೆಸ್ ಸರ್ಕಾರವನ್ನು ಆಯ್ಕೆ ಮಾಡಿ ಅಧಿಕಾರಕ್ಕೆ ತಂದಿದ್ದಾರೆ. ಹಾಗಾಗಿ ಜನಕೇಂದ್ರಿತ ಅರ್ಥ ವ್ಯವಸ್ಥೆ, ಜನಕೇಂದ್ರಿತ ಶಾಸನಗಳನ್ನು ಈ ಸರ್ಕಾರ ಜಾರಿಗೊಳಿಸುತ್ತದೆ. ಎಲ್ಲ ಸಮುದಾಯಗಳ ಜೊತೆಗೆ ಅಭಿವೃದ್ಧಿ ಹಾದಿಯಲ್ಲಿ ಕೊಂಡೊಯ್ಯುವ ಮೂಲಕ ಸೌಹಾರ್ದಯುತ ಸಂದೇಶವನ್ನು ಸರ್ಕಾರ ನೀಡಲಿದೆ ಎಂದು ರಾಜ್ಯಪಾಲರು ಹೇಳಿದರು.

ಜುಲೈ 18ರಿಂದ ಸಿಇಟಿ ದಾಖಲಾತಿ ಪರಿಶೀಲನೆ

ಬೆಂಗಳೂರು, ಜು. 3– ರಾಜ್ಯದಲ್ಲಿ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಇಂಜಿನಿಯರಿಂಗ್ ಪದವಿಗೆ ಸೇರಬಯಸುವ ವಿದ್ಯಾರ್ಥಿಗಳಿಗೆ ಈಗಾಗಲೇ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಿ, ಫಲಿತಾಂಶವನ್ನೂ ಬಿಡುಗಡೆ ಮಾಡಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಈಗ ಜು.18ರಿಂದ ಜು.21ರವರೆಗೆ ದಾಖಲಾತಿಗಳ ಪರಿಶೀಲನೆ ದಿನಾಂಕ ಘೋಷಣೆ ಮಾಡಿದೆ.

ರಾಜ್ಯದಲ್ಲಿ 2022–23ನೇ ಸಾಲಿನಲ್ಲಿ ಪಿಯುಸಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಾಗೂ ಇಂಜಿನಿಯರಿಂಗ್ ಪ್ರವೇಶಾತಿ ಸೇರ ಬಯಸುವ ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ● 9ನೇ ಪುಟಕ್ಕೆ

ಸಿಎಂ ಕಚೇರಿಯಲ್ಲಿ ಕೆಲಸ ಆಗಬೇಕಾದ್ರೆ 30 ಲಕ್ಷ ಲಂಚ ಕೊಡಬೇಕು: ಹೆಚ್‌ಡಿಕೆ

■ ನಮ್ಮ ರಾಜ್ಯದಲ್ಲಿ ಯಾವ ಅಜಿತ್‌ಪವಾರ್ ಹುಟ್ಟಿಕೊಳ್ಳುತ್ತಾರೋ ಗೊತ್ತಿಲ್ಲ
■ ಯಾವ ಲಕ್ಷ ಅದು ಕೋಟಿಯಾಗಿದೆ: ಮಾಜಿ ಸಿಎಂ ಬೊಮ್ಮಾಯಿ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಕಚೇರಿಯಲ್ಲಿ ಲಂಚ ಕೊಡದೇ ಕೆಲಸ ಆಗೋದಿಲ್ಲ ಎಂದು ಮಾಜಿ ಸಿಎಂ ಹೆಚ್‌ಡಿ ಕುಮಾರಸ್ವಾಮಿ ಹೊಸ ಬಾಂಬ್ ಸಿಡಿಸಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಕುಮಾರಸ್ವಾಮಿ, ಸಿಎಂ ಕಚೇರಿಯಲ್ಲಿ ಲಂಚ ಕೊಡದೇ ಯಾವುದೇ ಕೆಲಸ ಆಗಲ್ಲ. ಶಾಸಕರು ಕೊಟ್ಟ ಪತ್ರ ತೆಗೆದುಕೊಂಡು ಹೋದರೂ ಕೆಲಸ ಮಾಡಿಕೊಡದೇ ಲಂಚಕ್ಕೆ ಡಿಮ್ಯಾಂಡ್ ಮಾಡುತ್ತಾರೆ ಎಂದು ಆರೋಪಿಸಿದರು. ಕೇವಲ ಶಾಸಕರ ಪತ್ರ ತೆಗೆದುಕೊಂಡು ಬಂದರೆ ಆಗಲ್ಲ. ಅದರ ಜೊತೆಗೆ 30 ಲಕ್ಷ ಹಣ ತರಬೇಕು ಎಂದು ಮುಖ್ಯಮಂತ್ರಿ ● 9ನೇ ಪುಟಕ್ಕೆ

ಪ್ರಧಾನಿ ಮೋದಿ ನಿವಾಸದ ಮೇಲೆ ಶಂಕಾಸ್ಪದ ಡ್ರೋಣ್ ಹಾರಾಟ

ಸಂಚಿನ ಶಂಕೆ; ದೆಹಲಿ ಪೊಲೀಸರಿಂದ ತೀವ್ರ ತನಿಖೆ



ನವದೆಹಲಿ: ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಿವಾಸದ ಮೇಲೆ ಶಂಕಾಸ್ಪದವಾಗಿ ಡ್ರೋಣ್ ಹಾರಾಟ ನಡೆಸಿದ್ದು, ಈ ಸಂಬಂಧ ದೆಹಲಿ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಬೆಳಗಿನ ಜಾವ 5 ಗಂಟೆ ಸುಮಾರಿಗೆ ಲೋಕ ಕಲ್ಯಾಣ ಮಾರ್ಗದಲ್ಲಿರುವ ಪ್ರಧಾನಮಂತ್ರಿಗಳ ನಿವಾಸದ ಮೇಲೆ ಡ್ರೋಣ್ ಹಾರಾಟ ನಡೆಸಿರುವುದನ್ನು ಮೋದಿ ಭದ್ರತೆಗಾಗಿ ನಿಯೋಜನೆಗೊಂಡಿರುವ ವಿಶೇಷ ರಕ್ಷಣಾ ದಳದ ಅಧಿಕಾರಿಗಳು ಗಮನಿಸಿದ್ದಾರೆ.

ಕೂಡಲೇ ದೆಹಲಿ ಪೊಲೀಸರು ಶೋಧಕ್ಕೆ ಕಾರ್ಯಾಚರಣೆ ಆರಂಭಿಸಿದ್ದಾರೆ. ಆದರೆ, ಇದುವರೆಗೆ ಯಾವುದೇ ಡ್ರೋಣ್ ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನಿವಾಸವು ನೋ ಫ್ಲೈ ಝೋನ್ ಅಥವಾ ಡ್ರೋಣ್ ಝೋನ್ ಅಡಿಯಲ್ಲಿ ಬರುತ್ತದೆ.

ಮೈಸೂರು ಮಿತ್ರ

ಬಿಎಸ್‌ವೈ ಪುತ್ರ ರಾಘವೇಂದ್ರರಿಗೆ ಕೇಂದ್ರ ಸಚಿವ ಸ್ಥಾನ: ಶೋಭಾ ಕರಂದ್ಲಾಜೆಗೆ ಕೊಕ್?

ಲೋಕ ಸಮರ ಹಿನ್ನೆಲೆಯಲ್ಲಿ ಕೇಂದ್ರ ಸಂಪುಟ ಸರ್ಜರಿ; ಪಿಯೂಷ್, ಪ್ರಧಾನ್‌ಗೆ ಬೇರೆ ಉಸ್ತುವಾರಿ

ನವದೆಹಲಿ: ಲೋಕಸಭಾ ಚುನಾವಣೆಗೆ ಹತ್ತು ತಿಂಗಳು ಬಾಕಿ ಇದೆ. ಈ ನಿಟ್ಟಿನಲ್ಲಿ ಕೇಂದ್ರ ಸಚಿವ ಸಂಪುಟದಲ್ಲಿ ಮಹತ್ವದ ಬದಲಾವಣೆ ಮಾಡಲು ಕಸರತ್ತು ನಡೆಯುತ್ತಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಈ ತಿಂಗಳ 2ನೇ ವಾರ ಅಥವಾ 3ನೇ ವಾರದಲ್ಲಿ ಕೇಂದ್ರ ಸಚಿವ ಸಂಪುಟ ಪುನಾರಚನೆ ಮಾಡಲು ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಜೆ.ಪಿ. ನಡ್ಡಾ ಮುಂದಾಗಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ. ರಾಘವೇಂದ್ರಗೆ ಸಚಿವ ಸ್ಥಾನ ಒಲಿಯುವ ಸಾಧ್ಯತೆ ಇದೆ. ಕರ್ನಾಟಕದವರೇ ಆದ ಶೋಭಾ ಕರಂದ್ಲಾಜೆಗೆ ಕೊಕ್ ನೀಡಿ ಬಿ.ವೈ. ರಾಘವೇಂದ್ರಗೆ ಸಚಿವ ಸ್ಥಾನ ನೀಡುವ ಮೂಲಕ ಲಿಂಗಾಯತ ಸಮುದಾಯ ಮನವೊಲಿಸುವ ಕಾರ್ಯಕ್ಕೆ ಬಿಜೆಪಿ ಮುಂದಾಗಿದೆ.

ಶೋಭಾ ಕರಂದ್ಲಾಜೆಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಪಟ್ಟ ಕಟ್ಟುವ ಮೂಲಕ ಒಕ್ಕಲಿಗ ಸಮುದಾಯವನ್ನು ಹಾಗೂ ಮಹಿಳೆಯರನ್ನು ಸೆಳೆಯಲು ಕೇಸರಿ ಪಡೆ ತಂತ್ರ ಹೆಣೆಯುತ್ತಿದೆ ಎಂಬ ಗುಸುಗುಸು ಕೇಳಿಬರುತ್ತಿದೆ. ಕರ್ನಾಟಕ ಚುನಾವಣೆಯಲ್ಲಿ ಹೀನಾಯ ಸೋಲು ಕಂಡಿರುವ ಹಿನ್ನೆಲೆಯಲ್ಲಿ ಮತ್ತೆ ಬಿಎಸ್ ಯಡಿಯೂರಪ್ಪ ಹಾಗೂ ಲಿಂಗಾಯತರ ಮನವೊಲಿಸಲು ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ. ಲಿಂಗಾಯತ ಸಮುದಾಯದ ರಾಘವೇಂದ್ರರಿಗೆ ಕೇಂದ್ರ ಸಚಿವ ಸ್ಥಾನ, ಶೋಭಾ ಕರಂದ್ಲಾಜೆಗೆ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟ, ಮತ್ತೊಂದು ಪ್ರಮುಖ ಸಮುದಾಯದ ನಾಯಕನಿಗೆ ವಿರೋಧ ಪಕ್ಷದ ನಾಯಕನ ಪಟ್ಟ ಕಟ್ಟಲು ತಯಾರಿ ನಡೆದಿದೆ. ಈ ನಡುವೆ ಪಿಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್ ಅವರಿಗೂ ಕೊಕ್ ನೀಡುವ ನಿರೀಕ್ಷೆ ಇದೆ. ಉಭಯರಿಗೂ ಪಕ್ಷದ ಹೊಣೆ ನೀಡುವ ಸಾಧ್ಯತೆ ಇದೆ. ಪಿಯೂಷ್ ಗೋಯಲ್ ಅವರಿಗೆ ರಾಜಸ್ಥಾನ ಚುನಾವಣೆ ಉಸ್ತುವಾರಿ ನೀಡಲು ಪಕ್ಷ ತಯಾರಿ ನಡೆಸಿದೆ.

ಇದೇ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿ ಸೋಮವಾರ ನವದೆಹಲಿಯ ಪ್ರಗತಿಯ ಮೈದಾನ ಕೇಂದ್ರದಲ್ಲಿ ಕೇಂದ್ರ ಮಂತ್ರಿಮಂಡಲ ಸದಸ್ಯರ ಸಭೆ ನಡೆಸಿದರು. ಮುಂಬರುವ ಲೋಕಸಭಾ ಚುನಾವಣೆಗೆ ಈಗಿನಿಂದಲೇ ತಯಾರಿ ನಡೆಸಬೇಕು. ಕೇಂದ್ರ ಸರ್ಕಾರದ ಎಲ್ಲ ಯೋಜನೆಗಳ ಬಗ್ಗೆ ಜನರಿಗೆ ತಲುಪಿಸುವ ಕೆಲಸ ಆಗಬೇಕು. ಯಾವುದೇ ಕಾರಣಕ್ಕೂ ಮೈ ಮರೆಯಬಾರದು. ಪ್ರತಿಪಕ್ಷಗಳು ಈಗ ಎಲ್ಲ ರೀತಿಯಿಂದಲೂ ಹೋರಾಟ ನಡೆಸಲು ಸಿದ್ಧತೆ ನಡೆಸುತ್ತಿವೆ. ಈ ನಿಟ್ಟಿನಲ್ಲಿ ಪಕ್ಷ ತಂತ್ರ–ಪ್ರತಿತಂತ್ರ–ರಣ ತಂತ್ರಗಳನ್ನು ರೂಪಿಸಬೇಕು ಎಂದು ಕರೆ ನೀಡಿದರು.

ಬುದ್ಧನ ಮಾರ್ಗದಲ್ಲಿ ದುಃಖ ನಿವಾರಣೆ

ಭಂತೆ ಡಾ.ಕಲ್ಯಾಣ ಸಿರಿ ಅಭಿಮತ



ಮೈಸೂರು, ಜು.3 (ಎಂಟಿವೈ)– ಗೌತಮ ಬುದ್ಧರ ಧಮ್ಮವು ಜಗತ್ತಿನ ಎಲ್ಲಾ ಮಾನವ ಜೀವಿಗಳನ್ನು ತನ್ನೊಳಗೆ ಅಪ್ಪಿಕೊಳ್ಳುತ್ತದೆ. ಸಾಮಾನ್ಯರು ಭೋದಿ ತತ್ವವನ್ನು ಸ್ವೀಕರಿಸಬಹುದಾಗಿದೆ ಎಂದು ಭಂತೆ ಡಾ.ಕಲ್ಯಾಣಸಿರಿ ತಿಳಿಸಿದರು.


ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರವು ಸೋಮವಾರ 'ಧಮ್ಮಚಕ್ಕಪವತ್ತನದ ಮಹತ್ವ ಮತ್ತು ಸಮಕಾಲೀನ ಸಮಾಜ' ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭೋದಿತತ್ವ ಪಡೆಯಲು ಬಿಕ್ಕುಗಳೇ ಆಗಬೇಕೆಂದಿಲ್ಲ. ಅಲ್ಲದೇ, ಚೀವರ (ಬಿಕ್ಕುಗಳ ಧಿರಿಸು)ವನ್ನೇ ತೊಡಲೇಬೇಕೆಂಬ ನಿಯಮವಿಲ್ಲ. ಜನಸಾಮಾನ್ಯರೂ ಭೋದಿತ್ವವನ್ನು ಪಡೆಯಬಹುದು. ಧಮ್ಮ ಎಂದರೇ ಸತ್ಯವಾದದ್ದು, ಧಮ್ಮವು ಕೇವಲ ಧಾರ್ಮಿಕ ಚೌಕಟ್ಟಿಗೆ ಸೀಮಿತವಾಗಿಲ್ಲ. ಧಮ್ಮವನ್ನು ಸೀಮಿತಗೊಳಿಸಿದರೆ ಅದು ಧರ್ಮವಾಗುತ್ತದೆ. ಧಾರ್ಮಿಕ ಆಚರಣೆಗಳನ್ನು ಮೀರಿದ್ದು ಧಮ್ಮ. ಅದು ಜೀವನ, ನಿಬ್ಬಾಣ, ಜ್ಞಾನೋದಯ ಹಾಗೂ ಸನ್ಮಾರ್ಗದ ಮಾರ್ಗವಾಗಿದೆ. ಧಮ್ಮವು ಸಧಮ್ಮವಾದಾಗ ಮಾತ್ರ ಅದಕ್ಕೆ ಅರ್ಥ ಬರುತ್ತದೆ. ಈ ದೃಷ್ಟಿಯಲ್ಲಿ ಧಮ್ಮವನ್ನು ಅರಿಯಬೇಕು ಎಂದು ಬುದ್ಧರು ಭೋದಿಸಿದ್ದರು. ಧಮ್ಮಚಕ್ಕಪವತ್ತನ ದಿನವು ಬುದ್ಧರು ತಮಗೆ ಪ್ರಾಪ್ತವಾದ ಜ್ಞಾನೋದಯದ ಸಾರವನ್ನು ಐದು ಜನರಿಗೆ ಪ್ರಥಮವಾಗಿ ಭೋದಿಸಿದ ದಿನವಾಗಿ ಆಚರಿಸಲಾಗುತ್ತದೆ. ಧಮ್ಮ ಭೋದನೆಯು ಅಥವ ಚಕ್ರವು ಉರುಳಲು ಪ್ರಾರಂಭವಾದ ದಿನವಾಗಿ ಆಚರಿಸಲಾಗುತ್ತದೆ ಎಂದರು.

ಬುದ್ಧರು ಜಗತ್ತಿನ ದುಃಖಕ್ಕೆ ಪರಿಹಾರೋಪಾಯವಾಗಿ ಎರಡು ಅತಿರೇಖಗಳು, ನಾಲ್ಕು ಅರಿಯ ಸತ್ಯಗಳು, ಅಷ್ಟಾಂಗ ಮಾರ್ಗಗಳು ಮತ್ತು ಪಂಚಶೀಲಗಳನ್ನು ಐದು ಶಿಷ್ಯರಿಗೆ ಭೋದಿಸಿದರು. ಅವರು ಭೋದಿಸಿದ ಈ ಮಾರ್ಗದಲ್ಲಿ ನಡೆದರೆ ಜಗತ್ತಿನ ದುಃಖವನ್ನು ನಿವಾರಿಸಬಹುದು. ದುಃಖವು ಮಾನವನಲ್ಲಿರುವ ದುರಾಸೆಯಿಂದ ಉಂಟಾಗುತ್ತದೆ. ಬಯಕೆ, ಹಂಬಲ, ದುರಾಸೆಗಳಿಂದ ದೂರವಾದರೆ ದುಃಖದ ನಿವಾರಣೆ ಸಾಧ್ಯ. ಬುದ್ಧರು ಅನಾಥತೆಯನ್ನು ಭೋದಿಸಿದರು. ಎಲ್ಲಾ ದಾನಕ್ಕಿಂತ ಧಮ್ಮದಾನವೇ ಶ್ರೇಷ್ಠವಾದದ್ದು, ಎಲ್ಲ ರುಚಿಗಳಿಗಿಂತ ಧಮ್ಮದ ರುಚಿಯೇ ಮಿಗಿಲಾದದ್ದು, ಎಲ್ಲಾ ಸುಖಗಳಿಗಿಂತ ಧಮ್ಮದ ಸಂತೋಷವೇ ಅಪೂರ್ವವಾದುದ್ದಾಗಿದೆ ಎಂದು ಅಭಿಪ್ರಾಯಪಟ್ಟರು. ಈ ವೇಳೆ ಕೇಂದ್ರದ ನಿರ್ದೇಶಕ ಪ್ರೊ.ಎಸ್. ನರೇಂದ್ರಕುಮಾರ್, ಕೇಂದ್ರದ ಪ್ರಾಧ್ಯಾಪಕ ಪ್ರೊ.ಜೆ. ಸೋಮಶೇಖರ್, ಕೇಂದ್ರದ ಬೋಧಕರು, ಬೋಧಕೇತರರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಭಗವದ್ಗೀತೆ ಮನುಕುಲದ ಜೀವನದ ಪರಿವರ್ತನಾ ಕೈಪಿಡಿ

ಅಮೆರಿಕಾದ ಟೆಕ್ಸಾಸ್‌ನಲ್ಲಿ ನಡೆದ ಗುರುಪೂರ್ಣಿಮಾದಲ್ಲಿ ಗಣಪತಿ ಸಚ್ಚಿದಾನಂದ ಶ್ರೀಗಳ ಭಕ್ತಿ ನುಡಿ



ಮೈಸೂರು,ಜು.3(ಬಿಎಲ್‌ಯು)– ಅನಾದಿ ಕಾಲದಿಂದಲೂ ಭಗವದ್ಗೀತೆಯು ಮನುಕುಲದ ಜೀವನದ ಪರಿವರ್ತನಾ ಕೈಪಿಡಿಯಾಗಿದೆ ಎಂದು ಮೈಸೂರಿನ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಅಮೆರಿಕಾದ ಟೆಕ್ಸಾಸ್‌ನಲ್ಲಿರುವ ಅಲೆನ್ ಈವೆಂಟ್ ಸೆಂಟರ್‌ನಲ್ಲಿ ನಡೆದ ಗುರು ಪೂರ್ಣಿಮಾ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ಭಗವಾನ್ ಶ್ರೀ ಕೃಷ್ಣನು ಅರ್ಜುನನಿಗೆ ಯುದ್ಧ ಭೂಮಿಯಲ್ಲಿ ಒದಗಿಸಿದ ದಿವ್ಯ ಮಾರ್ಗದರ್ಶನವೇ ಭಗವದ್ಗೀತೆಯಾಗಿದೆ. ಈ ಅಮೂಲ್ಯ ಬೋಧನೆಯನ್ನು ಅಳವಡಿಸಿಕೊಳ್ಳಲು ಸಿದ್ಧರಿರುವ ಯಾರಿಗೆ ಆದರೂ ಇದರಿಂದ ಉಪಯೋಗವಾಗುತ್ತದೆ ಎಂದರು.

ಗುರು ಪೂರ್ಣಿಮಾ ಹಿನ್ನೆಲೆ 8 ಸಾವಿರಕ್ಕೂ ಹೆಚ್ಚು ಭಕ್ತರು ತಮ್ಮ ಒಂದು ವರ್ಷದ ಕಲಿಕೆಯನ್ನು ಪ್ರಸ್ತುತಪಡಿಸಿ ಶ್ರೀಗಳಿಗೆ ಗೌರವ ವಂದನೆ ಸಲ್ಲಿಸಿದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು 2015ರಲ್ಲಿ ಅಮೇರಿಕಾಗೆ ಭೇಟಿ ನೀಡಿದ ಸಂದರ್ಭದಲ್ಲಿ ಶ್ರೀಮದ್ ಭಗವದ್ಗೀತೆಯನ್ನು ಕಂಠ ಪಾಠ ಮಾಡುವಂತೆ ಅಲ್ಲಿನ ಯುವಕರಿಗೆ ಕರೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಕಳೆದ 8 ವರ್ಷದ ಅವಧಿಯಲ್ಲಿ 4ರಿಂದ 84 ವರ್ಷ ವಯೋಮಾನದವರು ಭಗವದ್ಗೀತೆಯನ್ನು ಕಂಠ ಪಾಠ ಮಾಡಿದ್ದಾರೆ. ಕಳೆದ ಬೇಸಿಗೆ ಅವಧಿಯಲ್ಲಿ ಇದೇ ರೀತಿ 3 ಸಾವಿರಕ್ಕೂ ಹೆಚ್ಚು ಜನರು ಭಗವದ್ಗೀತೆಯನ್ನು ಕಂಠ ಪಾಠ ಮಾಡಿ ಗಿನ್ನೆಸ್ ದಾಖಲೆಯಲ್ಲಿ ಸೇರಿದ್ದರು. ಇದೇ ವೇಳೆ ಯೋಗ ಸಂಗೀತ ಮತ್ತು ಎಸ್‌ಜಿಎಸ್ ಗೀತಾ ಫೌಂಡೇಶನ್‌ನವರು ಶ್ರೀಗಳ ಮುಂದೆ ಸಂಕಲ್ಪ ಮಾಡಿದರು. ಮುಂದಿನ ವರ್ಷ ಒಂದು ಲಕ್ಷಕ್ಕೂ ಹೆಚ್ಚು ಅನ್ವೇಷಕರೊಂದಿಗೆ ಭಗವದ್ಗೀತೆಯ ಸಂದೇಶವನ್ನು ಬೃಹತ್ ಪ್ರಮಾಣದಲ್ಲಿ ಹರಡಲು ಯೋಜನೆ ರೂಪಿಸಿರುವುದಾಗಿ ತಿಳಿಸಿದರು.

ಜುಲೈನಲ್ಲಿ ಉತ್ತಮ ಮಳೆಯಾದರೂ ಇಳುವರಿ ಇಳಿಕೆ

ಮುಗಿಲಿನತ್ತ ಮುಖ ಮಾಡಿರುವ ಆತಂಕಿತ ಅನ್ನದಾತ!





ಮೈಸೂರು,ಜು.3(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ವಾಡಿಕೆಗಿಂತ ಮಳೆ ಕಡಿಮೆಯಾಗಿದೆ. ಇದರಿಂದ ರೈತರು ಮಾಡಿದ ಬಿತ್ತನೆ ಬಾಡುತ್ತಿದೆ. ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಜುಲೈ ತಿಂಗಳಲ್ಲಿ ಉತ್ತಮ ಮಳೆಯಾದರೂ ಈಗಾಗಲೇ ಬಿತ್ತನೆಯಾಗಿರುವ ಬೆಳೆಯ ಇಳುವರಿ ಪ್ರಮಾಣ ಭಾರೀ ಇಳಿಕೆಯಾಗಲಿದೆ ಎಂಬುದು ಕೃಷಿ ತಜ್ಞರ ಅಭಿಪ್ರಾಯ. ರೈತನಿಗೆ ನಷ್ಟ ಕಟ್ಟಿಟ್ಟ ಬುತ್ತಿ.

ಮುಂಗಾರು ಮಳೆ ಉತ್ತಮವಾಗಿದ್ದರೆ ಹಸನಾದ ಬೆಳೆ ಬರುವ ಆಶಾಭಾವವಿತ್ತು. ಆದರೆ ಜೂನ್ ತಿಂಗಳು ಕಳೆದು, ಜುಲೈ ತಿಂಗಳ ಮೊದಲ ವಾರಕ್ಕೆ ಕಾಲಿಟ್ಟರೂ ಮಳೆಯ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಇದರಿಂದ ರೈತರು ಕಂಗಾಲಾಗಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಒಟ್ಟು 3.97 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಇದೆ. ಇದರಲ್ಲಿ 1.90 ಲಕ್ಷ ಹೆಕ್ಟೇರ್‌ನಲ್ಲಿ ಅಲಸಂದೆ, ಉದ್ದು, ಹೆಸರು, ಹತ್ತಿ, ಸೂರ್ಯಕಾಂತಿ, ಮುಸುಕಿನ ಜೋಳ ಬಿತ್ತನೆ ಮಾಡಿದ್ದಾರೆ. ಆದರೆ ವಾಡಿಕೆಯಷ್ಟು ಮಳೆಯಾಗಿಲ್ಲ. ಈಗಾಗಲೇ ಸೂರ್ಯಕಾಂತಿ ಕಾಳು ಕಟ್ಟಬೇಕಿತ್ತು. ಆದರೆ ಮಳೆಯ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆ ಕುಂಠಿತಗೊಂಡಿದೆ. ಜುಲೈ ತಿಂಗಳಲ್ಲಿ ಉತ್ತಮ ಮಳೆಯಾದರೆ ಈಗ ಬೆಳೆದಿರುವ ಬೆಳೆ ಅಲ್ಪ ಸ್ವಲ್ಪವಾದರೂ ಕೈಗೆ ಬರುತ್ತದೆ. ದಿನಕ್ಕೆ 2.50 ಮಿಲಿ ಮೀಟರ್‌ನಿಂದ 7.50 ಮಿಲಿ ಮೀಟರ್ ಮಳೆ ಬಂದರೆ ಸಾಕು, ಬೆಳೆ ಒಣಗದೆ ಸ್ವಲ್ಪ ಪ್ರಮಾಣದಲ್ಲಿ ಕೈಗೆ ಬರುತ್ತದೆ.

ಜೂನ್ ತಿಂಗಳಲ್ಲಿ ವಾಡಿಕೆಯ ಮಳೆಯಾಗಿಲ್ಲ. ಹಾಗಾಗಿ ಹಾಕಿದ ಬೆಳೆ ಒಣಗುತ್ತಿದೆ. ಜುಲೈ ತಿಂಗಳಲ್ಲಿ ಉತ್ತಮ ಮಳೆಯಾದರೂ ಇಳುವರಿ ಪ್ರಮಾಣ ಶೇ.20 ರಿಂದ 30ರಷ್ಟು ಕಡಿಮೆ ಆಗಲಿದೆ. ಇದರಿಂದ ರೈತರಿಗೆ ನಷ್ಟವಾಗಲಿದೆ. ಜುಲೈ ತಿಂಗಳಲ್ಲಿ ವಾಡಿಕೆಯಷ್ಟು ಮಳೆಯಾದರೆ ಅಷ್ಟೋ ಇಷ್ಟೋ ಫಲ ಕೈ ಸೇರುತ್ತದೆ. ಜುಲೈ ತಿಂಗಳಲ್ಲೂ ಮಳೆಯಾಗದೆ ಹೋದರೆ ರೈತನಿಗೆ ಪೂರ್ಣ ಪ್ರಮಾಣದಲ್ಲಿ ನಷ್ಟವಾಗುತ್ತದೆ. ಇನ್ನು ಜುಲೈ ತಿಂಗಳ ಮಳೆಯಲ್ಲಿ ರಾಗಿ, ಅಲಸಂದೆ ಹಾಗೂ ತೊಗರಿ ಬಿತ್ತನೆ ಮಾಡಲು ರೈತರು ಭೂಮಿ ಹಸನು ಮಾಡಿಕೊಂಡಿದ್ದಾರೆ. ಆದರೆ ಇನ್ನೂ ವರುಣ ಕರುಣೆ ತೋರಿಲ್ಲ. ಇದರಿಂದ ರೈತರು ಬಿತ್ತನೆ ಕಾರ್ಯವನ್ನು ಆರಂಭಿಸಿಲ್ಲ. ಈಗ ಮಳೆಯಾದರೆ ರೈತರಿಗೆ ಸಮರ್ಪಕ ರೀತಿಯಲ್ಲಿ ಬಿತ್ತನೆ ಬೀಜ ಪೂರೈಕೆಗೆ ಕೃಷಿ ಇಲಾಖೆ ಸಿದ್ಧವಾಗಿದೆ. ಈಗಾಗಲೇ 32 ಸಾವಿರ ಕ್ವಿಂಟಾಲ್ ವಿವಿಧ ಬಿತ್ತನೆ ಬೀಜ ಸ್ಟಾಕ್ ಇಟ್ಟಿದ್ದೇವೆ ಎಂದು ಮೈಸೂರು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ 1.6 ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ಬೆಳೆಯಲಾಗುತ್ತದೆ. ಕಾವೇರಿ ಜಲಾಯನ ಪ್ರದೇಶದ ಅಣೆಕಟ್ಟುಗಳಲ್ಲಿ ಸಮರ್ಪಕ ನೀರಿನ ಸೌಕರ್ಯವಾದರೆ ಜುಲೈ ಮೊದಲ ವಾರದಲ್ಲಿ ನೀರು ಬಿಡುಗಡೆ ಮಾಡಬೇಕಿತ್ತು. ಇದರಿಂದ ಜುಲೈ 2ನೇ ವಾರದ ವೇಳೆ ರೈತರು ಭತ್ತ ನಾಟಿ ಆರಂಭಿಸಬೇಕಿತ್ತು. ಆದರೆ ಇನ್ನು ಕೂಡ ವರುಣ ಕೃಪೆ ತೋರಿಲ್ಲ. ಇದರಿಂದ ಕೆಆರ್‌ಎಸ್, ಕಬಿನಿ ಸೇರಿದಂತೆ ಇತರೆ ಅಣೆಕಟ್ಟುಗಳು ಬತ್ತಿ ಹೋಗಿವೆ.

ಜುಲೈ ತಿಂಗಳಲ್ಲಿ ಮಳೆಯಾಗಿ ಜಲಾಶಯ ಭರ್ತಿಯಾದರೆ ಭತ್ತದ ಬೆಳೆಗೆ ನೀರು ಬಿಡಲಾಗುತ್ತದೆ. ಒಂದು ವೇಳೆ ಮುಂಗಾರು ಮಳೆ ಕೈಕೊಟ್ಟು ಅಣೆಕಟ್ಟುಗಳು ತುಂಬದಿದ್ದರೆ ರೈತರು ಭತ್ತ ಬೆಳೆಯಲಾಗದೆ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ.

ಜೆಎಸ್‌ಎಸ್ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ನಿವೃತ್ತ ಪ್ರಾಂಶುಪಾಲ ಬಿ.ಸಿ.ರಾಜಗೋಪಾಲ್‌ರಿಗೆ ಶ್ರದ್ಧಾಂಜಲಿ



ಮೈಸೂರು, ಜು.3– ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸುಮಾರು ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿ ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದ ಬಿ.ಸಿ.ರಾಜಗೋಪಾಲ್ ನಿಧನರಾದ ಹಿನ್ನೆಲೆಯಲ್ಲಿ ಸೋಮವಾರ ಸುತ್ತೂರಿನ ಜೆಎಸ್‌ಎಸ್ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು.

ಸಭೆಯಲ್ಲಿ ಸಂಸ್ಥೆಯ ಹೆಚ್ಚುವರಿ ಸಂಯೋಜನಾಧಿಕಾರಿ ಸಂಪತ್ತು ಮಾತನಾಡಿ, ದಿವಂಗತರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಹಾಗೂ ಜೆಎಸ್‌ಎಸ್ ಸಂಗೀತ ಸಭಾಗೆ ಸಲ್ಲಿಸಿದ ಅನನ್ಯ ಸೇವೆಯನ್ನು ಸ್ಮರಿಸಿ, ಮೃತರ ಕುಟುಂಬವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಶ್ರೀ ಶಿವರಾತ್ರೀಶ್ವರರು ಕರುಣಿಸಲಿ ಎಂದು ಪ್ರಾರ್ಥಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಎಸ್.ಶಿವಸ್ವಾಮಿ ಮಾತನಾಡಿ, ಬಿ.ಸಿ.ರಾಜಗೋಪಾಲ್ ಅವರು ತಮ್ಮ ಸಹೋದ್ಯೋಗಿಗಳು ಹಾಗೂ ಯುವಕರಿಗೆ ನೀಡುತ್ತಿದ್ದ ಮಾರ್ಗದರ್ಶನ, ಸಲಹೆ ಹಾಗೂ ಸಹಕಾರವನ್ನು ಮುಕ್ತ ಕಂಠದಿಂದ ಸ್ಮರಿಸಿದರು. ಸಭೆಯಲ್ಲಿ ಕಾಲೇಜಿನ ಉಪನ್ಯಾಸಕರು, ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.



ಮೈಸೂರಿನ ಬಸವ ಯೋಗ ಪ್ರತಿಷ್ಠಾನವು ಪೈಲ್ವಾನ್ ಬಸವರಾಜು ಸ್ಮರಣಾರ್ಥ ಮೈಸೂರಿನ ವಿ.ವಿ. ಸ್ಪೋರ್ಟ್ಸ್ ಪೆವಿಲಿಯನ್ ಯೋಗ ಭವನದಲ್ಲಿ ನಡೆದ ರಾಜ್ಯ ಮಟ್ಟದ ಮುಕ್ತ ಯೋಗಾಸನ ಕ್ರೀಡಾ ಸ್ಪರ್ಧೆಯಲ್ಲಿ ಕು. ಎಸ್.ಕೆ. ರಕ್ಷಿತಾ ಚಾಂಪಿಯನ್ ಆಫ್ ಚಾಂಪಿಯನ್ ಚಿನ್ನದ ಪದಕ ಪಡೆದುಕೊಂಡರು. ಈಕೆ ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಸತೀಶ್‌ರಾಜು ಹಾಗೂ ಕವಿತಾ ದಂಪತಿ ಪುತ್ರಿ.

ನುಡಿದಂತೆ ನಡೆದ ರಾಜ್ಯ ಕಾಂಗ್ರೆಸ್ ಸರ್ಕಾರ

● ರಾಜ್ಯ ವಿಧಾನಮಂಡಲ ಜಂಟಿ ಅಧಿವೇಶನದ ರಾಜ್ಯಪಾಲರ ಭಾಷಣದ ಕುರಿತು ಶಾಸಕ ದಿನೇಶ ಗೂಳಿಗೌಡ ಪ್ರತಿಕ್ರಿಯೆ ● ಭಾಷಣವು ರಾಜ್ಯದ ಸಮಗ್ರ ಅಭಿವೃದ್ಧಿಯ ಮುನ್ನೋಟವನ್ನು ತೆರೆದಿಟ್ಟಿದೆ



ಬೆಂಗಳೂರು, ಜು.3– ನುಡಿದಂತೆ ನಡೆಯುವುದು ಕಾಂಗ್ರೆಸ್ ಸರ್ಕಾರದ ಧ್ಯೇಯವಾಗಿದೆ. ಆ ನಿಟ್ಟಿನಲ್ಲಿ ಹಲವಾರು ಕೆಲಸಗಳನ್ನು ಈಗಾಗಲೇ ಮಾಡಿದೆ. ಗ್ಯಾರಂಟಿಗಳ ಅನುಷ್ಠಾನದ ಜತೆಗೆ ರೈತರ ಬಗ್ಗೆಯೂ ಸರ್ಕಾರ ಕಾಳಜಿ ವಹಿಸಿದೆ ಎಂದು ವಿಧಾನಪರಿಷತ್ ಸದಸ್ಯ ಶಾಸಕ ದಿನೇಶ ಗೂಳಿಗೌಡ ಹೇಳಿದರು.

ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು ಸೋಮವಾರ ಮಾಡಿದ ಭಾಷಣಕ್ಕೆ ಅವರು ಪ್ರತಿಕ್ರಿಯೆ ನೀಡಿದರು. ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ಅಭಿವೃದ್ಧಿಯ ಮುನ್ನೋಟವನ್ನು ತೆರೆದಿಡಲಾಗಿದೆ. ಸರ್ಕಾರದ ಸಮಗ್ರ ಅಭಿವೃದ್ಧಿಯ ದೃಷ್ಟಿಕೋನವನ್ನು ನೋಡಬಹುದಾಗಿದೆ. ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ರಾಜ್ಯದ 6.5 ಕೋಟಿ ಜನರಿಗೆ ನೀಡಿದ್ದ ಐದು ಗ್ಯಾರಂಟಿಗಳ ಅನುಷ್ಠಾನ ಮಾಡುತ್ತಿದೆ. ಜತೆಗೆ, ಕೃಷಿಕರ ಪರವಾದ ಯೋಜನೆಗಳ ಬಗ್ಗೆ ಹೇಳಲಾಗಿದೆ. ಅದನ್ನು ನೋಡಿದರೆ, ಗ್ರಾಮೀಣ ರೈತರ ಬಗ್ಗೆ ಸರ್ಕಾರಕ್ಕೆ ಇರುವ ಕಾಳಜಿಯನ್ನು ಕಾಣಬಹುದಾಗಿದೆ ಎಂದು ಶಾಸಕರು ಹೇಳಿದ್ದಾರೆ.

ಹಸಿದವರಿಗೆ ಅನ್ನ ನೀಡುವುದು ಹಾಲಿ ಸರ್ಕಾರದ ಸಂಕಲ್ಪವಾಗಿದೆ. ಸಮ ಸಮಾಜದ ಧ್ಯೇಯವನ್ನು ಸರ್ಕಾರ ಹೊಂದಿದೆ. ಸಮಾಜದ ಬದಲಾವಣೆಗೆ ಹಾಗೂ ಆರ್ಥಿಕತೆಯ ಚೈತನ್ಯಕ್ಕೆ ಈಗ ನೀಡುತ್ತಿರುವ ಸೌಲಭ್ಯವಳು ಅಗತ್ಯವಾಗಿವೆ ಎಂದು ಶಾಸಕ ದಿನೇಶ್ ಗೂಳಿಗೌಡ ಪ್ರತಿಕ್ರಿಯಿಸಿದ್ದಾರೆ.

ಪರಿಹಾರ ನೀಡಿ: ಕಳೆದ ವರ್ಷ ಗಂಟು ರೋಗದಿಂದ ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಇದುವರೆಗೂ ಪರಿಹಾರ ದೊರತಿಲ್ಲ. ಸರ್ಕಾರ ಆದಷ್ಟು ಬೇಗ ಮೃತಪಟ್ಟಂತಹ 5851 ಜಾನುವಾರುಗಳ ಬಾಕಿ ಇರುವ 12 ಕೋಟಿ ಪರಿಹಾರ ನೀಡಬೇಕು. ರೈತರಿಗೆ ಕೃಷಿ ಹೊಂಡಾ, ಪಾಲಿ ಹೌಸ್, ಜತೆಗೆ ರೈತರು, ರೈತ ಮಹಿಳೆಯರಿಗೆ ದಿನ ನಿತ್ಯದ ಖರ್ಚುಗಳಿಗೆ ಅನುಕೂಲವಾಗುವಂತೆ ಗೃಹಲಕ್ಷ್ಮಿ ಯೋಜನೆ ಜಾರಿಗೆ ತರಲಾಗಿದೆ. ರೈತರ ಮಕ್ಕಳ ವಿದ್ಯಾಭ್ಯಾಸಕ್ಕೂ ಇದು ಅನುಕೂಲವಾಗಲಿದೆ. ಒಟ್ಟಾರೆ ರಾಜ್ಯಪಾಲರ ಭಾಷಣವು ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ನೀಲನಕ್ಷೆ ತೋರಿಸುತ್ತದೆ ಎಂದು ತಿಳಿಸಿದ್ದಾರೆ.

ರೈತರ ಹಿತ ಕಾಪಾಡಿದ ಸರ್ಕಾರ: ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ರೈತರಿಗೆ ಒಟ್ಟು 669 ಕೋಟಿ ರೂ. ಹಾಲಿನ ಪ್ರೋತ್ಸಾಹ ಧನವನ್ನು ಉಳಿಸಿಕೊಂಡಿತ್ತು. ಒಟ್ಟು 7 ತಿಂಗಳು ಬಾಕಿ ಉಳಿಸಿಕೊಂಡಿತ್ತು ಅದರಲ್ಲಿ ಈ ಬಾರಿ ರಾಜ್ಯ ಸರ್ಕಾರ 421 ಕೋಟಿ ರೂ. ಬಿಡುಗಡೆ ಮಾಡಿದೆ. ರಾಜ್ಯದಲ್ಲಿ 26 ಲಕ್ಷ ಹಾಲು ಉತ್ಪಾದಕರಿದ್ದಾರೆ. ಅವರಿಗೆ ಬಾಕಿ ಇರುವ ಪ್ರೋತ್ಸಾಹ ಧನವನ್ನು ನೀಡುವ ಮೂಲಕ ರೈತರ ಹಿತವನ್ನು ಸರ್ಕಾರ ಕಾಪಾಡಿದೆ ಎಂದು ಹೇಳಿದ್ದಾರೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.3– 2023–24ನೇ ಸಾಲಿನ ಮೈಸೂರು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹಿಂದುಳಿದ ವರ್ಗಗಳ ಪ್ರವರ್ಗ 1, 2(ಎ), 2(ಬಿ), 3(ಎ) ಮತ್ತು 3(ಬಿ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ವೆಬ್‌ಸೈಟ್ https://shp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಜುಲೈ 15 ಅರ್ಜಿ ಸಲ್ಲಿಸಲು ಕಡೆಯ ದಿನಾಂಕವಾಗಿರುತ್ತದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು




ಮೈಸೂರು,ಜು.3(ಆರ್‌ಕೆ)– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಬೆಳಗೊಳ ಪೇಪರ್ ಮಿಲ್ ಬಳಿ ಭಾನುವಾರ ಸಂಜೆ ಸಂಭವಿಸಿದೆ.

ಪಾಂಡವಪುರ ತಾಲೂಕು, ಕ್ಯಾತನಹಳ್ಳಿ ಗ್ರಾಮದ ಕರ್ಪಾ ಅವರ ಮಗ ಕೆ.ಹರೀಶ್ (29) ಸಾವನ್ನಪ್ಪಿದ್ದು, ಕೂರ್ಗಳ್ಳಿ ಬಳಿ ಬೆಮೆಲ್‌ನಲ್ಲಿ ಹಂಗಾಮಿ ವಾಹನ ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದ ಅವರು ಭಾನುವಾರ ರಾತ್ರಿ ಪಾಳಿ ಕೆಲಸಕ್ಕೆ ಯಮಹಾ ಕ್ರಿಕ್ ಬೈಕ್‌ನಲ್ಲಿ ಹೋಗುತ್ತಿದ್ದಾಗ ಎದುರಿನಿಂದ ಬಂದ ವಾಹನ ಡಿಕ್ಕಿ ಹೊಡೆದಿದೆ. ವಾಹನ ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸಮೇತ ಹರೀಶ್ ರಸ್ತೆಬದಿಯ ಹುಲ್ಲಿನ ಪೊದೆಯೊಳಗೆ ಎಗರಿ ಬಿದ್ದು ಸ್ಥಳದಲ್ಲೇ ಅಸುನೀಗಿದ್ದಾರೆ. ಆ ಮಾರ್ಗ ಸಂಚರಿಸುತ್ತಿದ್ದ ವಾಹನ ಸವಾರರು ಅದನ್ನು ಕಂಡು ಪೊಲೀಸರಿಗೆ ಮಾಹಿತಿ ನೀಡಿದ್ದರು. ಕೆಆರ್.ಎಸ್. ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದ ಬಳಿಕ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿ, ಇಂದು ಬೆಳಗ್ಗೆ ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಸಿಸಿಟಿವಿ ಫುಟೇಜ್‌ಗಳನ್ನು ಕಲೆ ಹಾಕಿ ಹಿಟ್ ಅಂಡ್ ರನ್ ಮಾಡಿರುವ ವಾಹನ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ನಿಧನ

ಅಲ್‌ಹಾಜ್ ರಫೀಖ್ ಅಹಮದ್ ಖಾನ್



ಮೈಸೂರು, ಜು. 3– ಮೈಸೂರಿನ ಉದಯಗಿರಿಯಲ್ಲಿರುವ ಆರ್.ಕೆ. ಪ್ಯಾಲೇಸ್ ಫಂಕ್ಷನ್ ಹಾಲ್ ಮಾಲೀಕರು ಹಾಗೂ ಬನ್ನಿಮಂಟಪ ಎ ಬಡಾವಣೆ, ಸಿ.ವಿ. ರೋಡ್, 3ನೇ ಮುಖ್ಯ ರಸ್ತೆಯಲ್ಲಿರುವ ಎಆರ್‌ಕೆ ಮಂಜಿಲ್ ನಿವಾಸಿ ಅಲ್‌ಹಾಜ್ ರಫೀಖ್ ಅಹಮದ್ ಖಾನ್ (58) ಸೋಮವಾರ ಬೆಳಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಶೋಕ ರಸ್ತೆಯಲ್ಲಿರುವ ಮಸೀದಿ ಇ–ಅಜಾಮ್‌ನಲ್ಲಿ ನಮಾಜ್–ಇ–ಜನಾಜ ನಡೆದ ನಂತರ ಟಿಪ್ಪು ವೃತ್ತದಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.7.2023 ಮಂಗಳವಾರ, ಮಳೆ ನಕ್ಷತ್ರ: ಆರಿದ್ರಾ 22.06.2023ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು ನೋವು, ಸೊಂಟ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಶ್ರೀ ಶ್ರೀ ಸೋಮೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿ :** 48ನೇ ದಿನದ ಮಂಡಲ ಪೂಜೆ ಅಂಗವಾಗಿ ಹೋಮ, ಪ್ರಸಾದ ವಿನಿಯೋಗ, ಸ್ಥಳ: ದೇವಾಲಯದ ಆವರಣ, ಬನ್ನಿಮಂಟಪ.

■ **ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ :** ವ್ಯಾಸಪೂರ್ಣಿಮಾ, ಗುರುಪೂರ್ಣಿಮಾ ಕಾರ್ಯಕ್ರಮ, ಸಂಜೆ 6.30ರಿಂದ ಗುರುನಾಮ ಸ್ಮರಣೆ, ಬೆಳಗ್ಗೆ 8ಕ್ಕೆ ಕೆ.ಆರ್.ಆಸ್ಪತ್ರೆಯ ರೋಗಿಗಳಿಗೆ ಹಣ್ಣು, ಔಷಧ ಹಾಗೂ ಬಟ್ಟೆ ವಿತರಣೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ನೆಗಡಿ, ಶೀನು ಬರುವಿಕೆ, ಮೂಗು ಸೋರುವಿಕೆ, ತಲೆನೋವು/ತಲೆ ಬ್ಲಾಕ್ ಮತ್ತು ಬೆನ್ನುಮೂಳೆಯ ಅಸ್ವಸ್ಥತೆಗಳಿಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬೇ.ನಾ.ವಿಜಯೇಂದ್ರಾಚಾರ್ ಅವರಿಂದ ಮಹಾಭಾರತ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

ಯಶೋಧಪುರದಲ್ಲಿಂದು

ಹುಣಸೂರು ತಾಲೂಕು

■ **ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆ:** ಆರೋಗ್ಯಕರ ಸಮಾಜಕ್ಕಾಗಿ ಆರೋಗ್ಯಕರ ಯುವಜನತೆ ಮತ್ತು ಗಾಂಧಿ–ಯಶೋಧರಮ್ಮ ದಾಸಪ್ಪದಕವತ್ತ ವಿಚಾರಗಳ ಪ್ರಸ್ತುತತೆ ಕುರಿತು ರಾಸೇಯೋ ವಾರ್ಷಿಕ ವಿಶೇಷ ಶಿಬಿರ, ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ ಅವರಿಂದ ಗ್ರಾಮೀಣ ಪುನರ್‌ನಿರ್ಮಾಣದಲ್ಲಿ ಯುವಜನತೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ, ಮುಖ್ಯ ಅತಿಥಿಗಳು : ಡಾ. ಬಿ.ಕೆ. ಚಂದ್ರಶೇಖರಗೌಡ, ಹೆಚ್.ಬಿ. ದಿನೇಶ್, ಕೃಷ್ಣಪ್ಪ, ಡಿ. ಬಸವರಾಜು, ಸ್ಥಳ: ಯಶೋಧರಪುರ, ಹುಣಸೂರು ತಾಲೂಕು ಸಂಜೆ 5 ಗಂಟೆಗೆ.

ಎಂ.ಸಿ. ತಳಲು ಗ್ರಾಮದಲ್ಲಿಂದು, ಸರಗೂರು ತಾಲೂಕು

■ **ಸರ್ಕಾರಿ ಪ್ರೌಢಶಾಲೆ ಎಂ.ಸಿ. ತಳಲು, ಸರಗೂರು ತಾಲೂಕು, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ:** ಮೆರಿಕ್ಯೂರಿ ಪುಣ್ಯಸ್ಮರಣೆ ಮತ್ತು ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ಪ್ರೌಢಶಾಲಾ ಮುಖ್ಯ ಶಿಕ್ಷಕ ಎ.ರಾಜು, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಪ್ರಧಾನ ಭಾಷಣ: ಸಂಖ್ಯಾಶಾಸ್ತ್ರಜ್ಞ ಎಸ್.ಜಿ.ಸೀತಾರಾಂ, ಮುಖ್ಯ ಅತಿಥಿಗಳು: ಕಲಾವಿದೆ ಡಾ.ಜಮುನಾರಾಣಿ ಮಿರ್ಲೆ, ಪ್ರಾಸ್ತಾವಿಕ ನುಡಿ: ಪ್ರೌಢಶಾಲಾ ಶಿಕ್ಷಕರಾದ ಶ್ರೀಮತಿ ಶಾರದಾ, ಸ್ಥಳ: ಎಂ.ಸಿ. ತಳಲು ಗ್ರಾಮ, ಸರಗೂರು ತಾಲೂಕು, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ, ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ. ಹೆಚ್.ವಿ.ನಾಗರಾಜರಾವ್, 7.15 ಕಾದಂಬರಿ ವಿಹಾರ–ನಾ ಕಸ್ತೂರಿಯವರ ರಂಗನಾಯಕಿ ಕಾಂದಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್.ಎಸ್.ಎಸ್., 8.30 ಮಾನ್ಯ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಚಿಕ್ಕಬಳ್ಳಾಪುರಕ್ಕೆ ನೀಡಿದ ಭೇಟಿ ಕುರಿತು ಬಾನುಲಿ ವರದಿ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಪ್ರೊ.ಬಿ.ಎಸ್. ವಿಜಯರಾಘವನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.00 ವನಿತಾ ವಿಹಾರ, 12.30 ದೇವರನಾಮ–ಮೈಸೂರಿನ ಮಾಲತಿ ಹೆಗಡೆ, 12.45 ಗಿಡ ನೆಡುವ ಮೊದಲು–ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಬಸವರಾಜ್ ಅವರೊಡನೆ ಸಂವಾದ. ನಡೆಸಿಕೊಡುವವರು ದಿವಾಕರ ಹೆಗಡೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಅಜಯ್ ಜಿ.ಪ್ರಸಾದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಬಿ.ಡಿ.ವೇಣುಗೋಪಾಲ್–ಜಲತರಂಗ್, 4.00 ಕಥಾಕಾಲಕ್ಷೇಪ–ಭಕ್ತ ಮಾರ್ಕಾಂಡೇಯ –ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ, ಮೈಸೂರು ಜಿಲ್ಲಾ ಕೃಷಿ ಇಲಾಖೆಯ ಕಾರ್ಯ ಚಟುವಟಿಕೆಗಳನ್ನು ಕುರಿತು ಜಂಟಿ ಕೃಷಿ ನಿರ್ದೇಶಕರಾದ ಬಿ.ಎಸ್.ಚಂದ್ರಶೇಖರ್ ಅವರೊಂದಿಗೆ ಸಂದರ್ಶನ, 9.30 ವೃಂದಗಾನದಲ್ಲಿ ಹಾಡುಗಾರಿಕೆ, ನಿರ್ದೇಶನ ಹೆಚ್.ಎಸ್. ಮಹಾಲಕ್ಷ್ಮಿ, 10.00 ಗಮಕ ವ್ಯಾಖ್ಯಾನ, ವಾಚನ–ಎನ್.ಇಂದಿರಾ, ವ್ಯಾಖ್ಯಾನ–ಶಿವಾಜಿ ಜೋಯಿಸ್, 10.30 ಸವಿನೆನಪು

ಬೆಂಗಳೂರಿಗೆ ಆಗಮಿಸಿದ ರಾಷ್ಟ್ರಪತಿ ಮುರ್ಮು; ಸಿಎಂ ಸಿದ್ದರಾಮಯ್ಯ, ರಾಜ್ಯಪಾಲರಿಂದ ಸ್ವಾಗತ



ಬೆಂಗಳೂರು: ಎರಡು ದಿನಗಳ ರಾಜ್ಯ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಬೆಂಗಳೂರಿಗೆ ಆಗಮಿಸಿದ್ದು, ಎಚ್.ಎ.ಎಲ್ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯಪಾಲ ಥಾವರ ಚಂದ್ ಗೆಹ್ಲೋಟ್ ಅವರು ಆತ್ಮೀಯವಾಗಿ ಸ್ವಾಗತಿಸಿದರು. ಎಚ್‌ಎಎಲ್ ವಿಮಾನ ನಿಲ್ದಾಣದಿಂದ ನೇರವಾಗಿ ಚಿಕ್ಕಬಳ್ಳಾಪುರಕ್ಕೆ ತೆರಳಿರುವ ಮುರ್ಮು ಅವರು, ಮುದ್ದೇನಹಳ್ಳಿಯಲ್ಲಿ ಶ್ರೀ ಸತ್ಯಸಾಯಿ ವಿಶ್ವವಿದ್ಯಾಲಯದ 2ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಬಳಿಕ ರಾಜಭವನದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಆಯೋಜಿಸಿರುವ ಬುಡಕಟ್ಟು ಸಮುದಾಯದ ಜನತೆಯೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳು ಭಾಗವಹಿಸಿದರು.

ಪಿಎಸ್‌ಐ ನೇಮಕಾತಿ ಹಗರಣ: ಎಡಿಜಿಪಿ ಅಮೃತ್ ಪೌಲ್‌ಗೆ ಮತ್ತೊಂದು ಸಂಕಷ್ಟ



ಬೆಂಗಳೂರು: ಪಿಎಸ್‌ಐ ನೇಮಕಾತಿ ಹಗರಣ ಸಂಬಂಧ ಎಡಿಜಿಪಿ ಅಮೃತ್ ಪೌಲ್ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿ ಸಿಕ್ಕಿದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ಮಾಡಲು ಅವಕಾಶ ಇದೆ. ಆರೋಪಿ ವಿರುದ್ಧ ಚಾರ್ಜ್ ಫ್ರೇಮ್ ಮಾಡಲು ಅನುಮತಿ ನೀಡಲಾಗಿದೆ. ಈಗಾಗಲೇ ಅಮೃತ್ ಪೌಲ್ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿತ್ತು. ಅಮೃತ್ ಪೌಲ್ ಐಪಿಎಸ್ ಅಧಿಕಾರಿ ಆಗಿದ್ದ ಹಿನ್ನೆಲೆಯಲ್ಲಿ ಪ್ರಾಸಿಕ್ಯೂಷನ್ ಅನುಮತಿ ಕಡ್ಡಾಯವಾಗಿತ್ತು. ಈಗ ಅನುಮತಿ ದೊರೆತಿದ್ದು, ಪಿಎಸ್‌ಐ ಹಗರಣದ ತನಿಖೆಯಲ್ಲಿ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಂತಾಗಿದೆ. ಈ ಮೂಲಕ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಬಿಟ್‌ಕಾಯಿನ್ ಹಾಗೂ ಪಿಎಸ್‌ಐ ಹಗರಣಕ್ಕೆ ಒಂದೇ ದಿನ ಮರು ಜೀವ ಬಂದಂತಾಗಿದೆ.

ಏನಿದು ಪ್ರಕರಣ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಆರೋಪ ಕೇಳಿಬಂದಿತ್ತು. ಬಳಿಕ ತನಿಖೆ ವೇಳೆ ಪರೀಕ್ಷಾ ಕೇಂದ್ರಗಳನ್ನು ಬುಕ್ ಮಾಡಿಕೊಂಡು ಅಕ್ರಮ ಎಸಗಿರುವುದು ಬೆಳಕಿಗೆ ಬಂದಿತ್ತು. ಈ ಸಂಬಂಧ ಆಡಿಯೋ ಸಹ ವೈರಲ್ ಆಗಿತ್ತು. ಇದಾದ ಬಳಿಕ ಈ ನೇಮಕಾತಿಯನ್ನು ರದ್ದು ಮಾಡಲಾಗಿತ್ತು. ಅಲ್ಲದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವರನ್ನು ಬಂಧಿಸಿ ವಿಚಾರಣೆ ನಡೆಸಲಾಗಿತ್ತು. ಈಗಲೂ ಪ್ರಕರಣ ವಿಚಾರಣೆ ಹಂತದಲ್ಲಿದೆ. ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿ ಹಲವು ಸಚಿವರು ಹಾಗೂ ಅಧಿಕಾರಿಗಳು ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಅಲ್ಲದೇ ಹಗರಣಕ್ಕೆ ಸಂಬಂಧಿಸಿದಂತೆ ಅಕ್ರಮ ಎಸಗಿರುವ 52 ಅಭ್ಯರ್ಥಿಗಳನ್ನು ಪೊಲೀಸ್ ಇಲಾಖೆ ನಡೆಸುವ ಯಾವುದೇ ನೇಮಕಾತಿ ಪರೀಕ್ಷೆಯಲ್ಲಿ ಭಾಗವಹಿಸದಂತೆ ಶಾಶ್ವತವಾಗಿ ಡಿಬಾರ್ ಮಾಡಿ ಇತ್ತೀಚೆಗೆ ಆದೇಶಿಸಲಾಗಿದೆ.

ಜು.17, 18ರಂದು ವಿರೋಧ ಪಕ್ಷಗಳ ಮುಂದಿನ ಸಭೆ

ನವದೆಹಲಿ: ವಿರೋಧ ಪಕ್ಷಗಳ ಮುಂದಿನ ಸಭೆ ಬೆಂಗಳೂರಿನಲ್ಲಿ ಇದೇ 17 ಹಾಗೂ 18ರಂದು ನಡೆಯಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ. ಪಾಟ್ನಾದಲ್ಲಿ ನಡೆದ ಎಲ್ಲ ವಿರೋಧ ಪಕ್ಷಗಳ ಸಭೆಯು ಭಾರೀ ಯಶಸ್ಸು ಗಳಿಸಿದ ಬಳಿಕ, ನಾವು ಮುಂದಿನ ಸಭೆಯನ್ನು ಬೆಂಗಳೂರಿನಲ್ಲಿ ಜುಲೈ 17, 18ರಂದು ನಡೆಸಲಿದ್ದೇವೆ. ಫ್ಯಾಸಿಸ್ಟ್ ಹಾಗೂ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳನ್ನು ಸೋಲಿಸುವ ಮತ್ತು ದೇಶವನ್ನು ಮುಂದಕ್ಕೆ ಕೊಂಡೊಯ್ಯುವ ದಿಟ್ಟ ದೂರದೃಷ್ಟಿಯನ್ನು ಪ್ರಸ್ತುತಪಡಿಸುವ ಸಂಕಲ್ಪದಲ್ಲಿ ಅಚಲರಾಗಿದ್ದೇವೆ ಎಂದು ಟ್ವೀಟ್ ಮಾಡಿದ್ದಾರೆ. ವಿರೋಧ ಪಕ್ಷಗಳ ಮೊದಲ ಸಭೆ ಬಿಹಾರದ ರಾಜಧಾನಿ ಪಟ್ನಾದಲ್ಲಿ ಜೂ.23ರಂದು ನಡೆದಿತ್ತು. ಮುಂದಿನ ಸಭೆ ಜು.12 ಹಾಗೂ 13ರಂದು ನಡೆಯಲಿದೆ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಕಳೆದ ವಾರ ತಿಳಿಸಿದ್ದರು. ಆದರೆ, ಈ ಸಮಯದಲ್ಲಿ ಕೆಲವು ರಾಜ್ಯಗಳ ವಿಧಾನಸಭಾ ಅಧಿವೇಶನ ನಡೆಯಲಿರುವುದರಿಂದ, ದಿನಾಂಕವನ್ನು ಬದಲಿಸಲಾಗಿದೆ.

ನಾಳೆ ಸಮಗ್ರ ಸಾವಯವ ಕೃಷಿ ಬದುಕಿನ ಬೇಸಾಯ ಕುರಿತ ಬಾನುಲಿ ಸರಣಿ ಕಾರ್ಯಕ್ರಮ ಉದ್ಘಾಟನೆ

ಮೈಸೂರು,ಜು.3– ಸಾವಯವ ಸಂಪದ ಸಮಗ್ರ ಸಾವಯವ ಕೃಷಿ ಬದುಕಿನ ಬೇಸಾಯ ಚಿತ್ರಣ ಕುರಿತ ಬಾನುಲಿ ಸರಣಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಜುಲೈ 5ರ ಬೆಳಗ್ಗೆ 10.30 ಗಂಟೆಗೆ ನಾಗನಹಳ್ಳಿಯಲ್ಲಿನ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ಆಕಾಶವಾಣಿ ಮೈಸೂರು, ಕೃಷಿ ಇಲಾಖೆ ಮೈಸೂರು, ಸಾವಯವ ಕೃಷಿ ಸಂಶೋಧನಾ ಕೇಂದ್ರ, ವಿಸ್ತರಣಾ ಶಿಕ್ಷಣ ಘಟಕ ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರ ನಾಗನಹಳ್ಳಿ, ವಲಯ ಕೃಷಿ ಸಂಶೋಧನಾ ಕೇಂದ್ರ, ವಿ.ಸಿ. ಫಾರಂ, ಮಂಡ್ಯ ಮತ್ತು ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲಾ ಸಾವಯವ ಕೃಷಿಕರ ಒಕ್ಕೂಟ (ರಿ) ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಉದ್ಘಾಟನೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ ಸುರೇಶ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಮೈಸೂರಿನ ಆಕಾಶವಾಣಿಯ ಸಹಾಯಕ ನಿರ್ದೇಶಕರು (ಕಾರ್ಯಕ್ರಮ) ಹಾಗೂ ನಿಲಯದ ಮುಖ್ಯಸ್ಥರೂ ಆದ ಎಸ್.ಎಸ್.ಉಮೇಶ್ ವಹಿಸುವರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಂಡ್ಯದಲ್ಲಿನ ವಿ.ಸಿ.ಫಾರಂನ ಸಹ ಸಂಶೋಧನಾ ನಿರ್ದೇಶಕ ಡಾ. ಎನ್.ಶಿವಕುಮಾರ್, ನಗರದ ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ನಗರದ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ನಾಗರಾಜು, ಮೈಸೂರು, ಮಂಡ್ಯ, ಚಾಮರಾಜನಗರದ ಸಾವಯವ ಕೃಷಿಕರ ಒಕ್ಕೂಟದ(ರಂಗಸಮುದ್ರ) ಸಾವಯವ ಕೃಷಿಕ ಪಿ.ರಮೇಶ್ ಭಾಗವಹಿಸುವರು ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ಡಾ.ಜಿ.ಎಚ್ ಯೋಗೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತೀಯ ಸೇನಾ ಅಧಿಕಾರಿಯಾಗಿ ಕೆ.ಜಯಂತ್ ಅಧಿಕಾರ ಸ್ವೀಕಾರ



ಮೈಸೂರು: ಮೈಸೂರಿನ ವಿಜಯನಗರ 4ನೇ ಹಂತದ ನಿವಾಸಿ, ಕೆ.ಧನರಾಜ್ ಹಾಗೂ ಕೆ.ಲಾವಣ್ಯ ದಂಪತಿ ಪುತ್ರ ಲೆಫ್ಟಿನೆಂಟ್ ಕೆ.ಜಯಂತ್ ಅವರು ಜೂ.10ರಂದು ಉತ್ತರಾಖಂಡದ ಡೆಹರಾಡೂನ್‌ನ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ನಡೆದ ನಿರ್ಗಮನ ಪಥ ಸಂಚಲನದಲ್ಲಿ ಭಾರತೀಯ ಸೇನಾ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಅಪ್ರಾಪ್ತರ ಬಡಿದಾಟ; ಓರ್ವನ ಹತ್ಯೆ

ಮಂಡಿಮೊಹಲ್ಲಾದಲ್ಲಿ ಘಟನೆ

ಮೈಸೂರು, ಜು.3 (ಆರ್‌ಕೆ)– ಅಪ್ರಾಪ್ತರ ನಡುವೆ ಆರಂಭವಾದ ಗಲಾಟೆಯು ಓರ್ವನ ಕೊಲೆಯಲ್ಲಿ ಅಂತ್ಯವಾಗಿದೆ. ಈ ಘಟನೆ ಮೈಸೂರಿನ ಮಂಡಿಮೊಹಲ್ಲಾದಲ್ಲಿ ಸೋಮವಾರ ಸಂಜೆ ನಡೆದಿದೆ.

ಅಲ್ಲಿನ ಸುನ್ನಿಚೌಕದ ಬಿಬಿ ಕೇರಿ ನಿವಾಸಿಯಾದ ಬಾಲಕನೋರ್ವ ಆಟವಾಡಲೆಂದು ಸುನ್ನಿಚೌಕದ ಸಂಬಂಧಿಕರ ಮನೆ ಬಳಿ ಬಂದಿದ್ದ ಮಕ್ಕಳೊಂದಿಗೆ ಆಟವಾಡುತ್ತಿದ್ದಾಗ ಇಬ್ಬರು ಅಪ್ರಾಪ್ತರ ನಡುವೆ ಕ್ಷುಲ್ಲಕ ಕಾರಣಕ್ಕೆ ಗಲಾಟೆ ಆರಂಭವಾಯಿತು. ಮನೆಯವರು ಅತ್ತ ಗಮನಹರಿಸದಿದ್ದಾಗ ಸಂಜೆ 6 ಗಂಟೆ ಸಮಯದಲ್ಲಿ ಓರ್ವ ಇನ್ನೊಬ್ಬನಿಗೆ ಚಾಕುವಿನಿಂದ ಇರಿದಿದ್ದಾನೆ. ತೀವ್ರ ರಕ್ತಸ್ರಾವವಾದ ಕಾರಣ, 15 ವರ್ಷದ ಬಾಲಕ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ತೆರಳಿದ ಮಂಡಿ ಠಾಣೆ ಇನ್ಸ್‌ಪೆಕ್ಟರ್ ನಾಗೇಶ್ ಹಾಗೂ ಸಿಬ್ಬಂದಿ ಹತ್ಯೆಗೈದ ಅಪ್ರಾಪ್ತನನ್ನು ವಶಕ್ಕೆ ಪಡೆದು ವಿಚಾರಣೆ ಮಾಡುತ್ತಿದ್ದಾರೆ. ಸ್ಥಳಕ್ಕೆ ಎನ್.ಆರ್. ಉಪವಿಭಾಗದ ಎಸಿಪಿ ಸಿ.ಕೆ. ಅಶ್ವಥನಾರಾಯಣ ಭೇಟಿ ನೀಡಿ ಪರಿಶೀಲಿಸಿದರು. ಮುಂಜಾಗ್ರತಾ ಕ್ರಮವಾಗಿ ಸುನ್ನಿಚೌಕದ ಬಳಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ, ಕಟ್ಟೆಚ್ಚರ ವಹಿಸಲಾಗಿದೆ.

ರಿಂಗ್ ರಸ್ತೆಯಲ್ಲಿ ಅಪಘಾತಗಳ ತಪ್ಪಿಸಲು ಬೋಗಾದಿ, ದಟ್ಟಗಳ್ಳಿ ಕೆಇಬಿ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲು ಚಿಂತನೆ



ಮೈಸೂರು ಬೋಗಾದಿ ರಿಂಗ್ ರೋಡ್ ಸಿಗ್ನಲ್ ಲೈಟ್ ಜಂಕ್ಷನ್.



ದಟ್ಟಗಳ್ಳಿಯ ಕೆಇಬಿ ರಿಂಗ್ ರೋಡ್ ಜಂಕ್ಷನ್

● ಎಸ್.ಟಿ.ರವಿಕುಮಾರ್

ಮೈಸೂರು, ಜು.3– ಮೈಸೂರು ನಗರ ಅತೀ ವೇಗವಾಗಿ ಬೆಳೆಯುತ್ತಿದ್ದಂತೆಯೇ ಜನಸಂಖ್ಯೆಗನುಗುಣವಾಗಿ ವಾಹನಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಆದರೆ, ಹಾಲಿ ಕಿರಿದಾದ ರಸ್ತೆಗಳಲ್ಲಿ ದಟ್ಟ ವಾಹನ ಸಂಚಾರ ಸವಾಲಾಗಿ ಪರಿಣಮಿಸಿದೆ.

ಹುಣಸೂರು ರಸ್ತೆ, ಬೋಗಾದಿ ರಸ್ತೆ, ಕೆಆರ್‌ಎಸ್ ರಸ್ತೆ, ಬಿಎನ್ ರಸ್ತೆ, ಮಹದೇವಪುರ ರಸ್ತೆ, ಬನ್ನೂರು ರಸ್ತೆ, ತಿ.ನರಸೀಪುರ ರಸ್ತೆ, ಮಾನಂದವಾಡಿ ರಸ್ತೆಗಳು ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗಗಳಾಗಿವೆ. ಜೊತೆಗೆ ರಿಂಗ್ ರಸ್ತೆಗೂ ನಗರಾದ್ಯಂತ ಹಲವು ಜನವಸತಿ ಮತ್ತು ಕೈಗಾರಿಕಾ ವಸಾಹತು ರಸ್ತೆಗಳ ಸಂಪರ್ಕ ಕಲ್ಪಿಸುವುದರಿಂದ ಮೈಸೂರಿನ 42 ಕಿಮೀ ರಿಂಗ್ ರಸ್ತೆಯಲ್ಲಿ ಅದರಲ್ಲೂ ಪಶ್ಚಿಮ ಭಾಗದ ಹಿನಕಲ್‌ನಿಂದ ದಟ್ಟಗಳ್ಳಿ–ಹೆಚ್.ಡಿ.ಕೋಟೆ ರಸ್ತೆ ಜಂಕ್ಷನ್‌ವರೆಗೆ ಹಾಗೂ ಹೆಬ್ಬಾಳು– ರಾಯಲ್ ಇನ್ ಜಂಕ್ಷನ್‌ವರೆಗಂತೂ ಅತೀ ಹೆಚ್ಚು ವಾಹನಗಳು ಸಂಚರಿಸುತ್ತಿವೆ.

ಪರಿಣಾಮ ಬೋಗಾದಿ ರಿಂಗ್ ರೋಡ್ ಸಿಗ್ನಲ್ ಲೈಟ್ ಜಂಕ್ಷನ್ ಮತ್ತು ದಟ್ಟಗಳ್ಳಿಯ ಸಾರಾ ಕನ್ವೆನ್ಷನ್ ಹಾಲ್ ಸಮೀಪದ ಕೆಇಬಿ ಜಂಕ್ಷನ್ ತಿರುವಿನಲ್ಲಿ ಅತೀ ಹೆಚ್ಚು ಅಪಘಾತಗಳು ಸಂಭವಿಸಿ, ಭಾರೀ ಸಾವು–ನೋವುಗಳಾಗುತ್ತಿರುವುದರಿಂದ ಈ ಎರಡೂ ಸರ್ಕಲ್‌ಗಳನ್ನು ಬ್ಲಾಕ್ ಸ್ಪಾಟ್ (ಅಪಘಾತ ವಲಯ) ಗಳೆಂದು ಮೈಸೂರು ನಗರ ಸಂಚಾರ ಪೊಲೀಸರು ಗುರ್ತಿಸಿದ್ದಾರೆ.

ಬೋಗಾದಿ ರಿಂಗ್ ರೋಡ್ ಜಂಕ್ಷನ್ ಅಪಘಾತ ವಲಯವಷ್ಟೇ ಅಲ್ಲದೆ, ಮಳೆ ಬಿದ್ದರೆ, ಸಮೀಪದ ಕೆರೆ ತುಂಬಿ ಈ ಸರ್ಕಲ್‌ನಲ್ಲಿ ಸಾಗರದಂತೆ ನೀರು ನಿಂತು ದಿನಗಟ್ಟಲೆ ವಾಹನ ಸಂಚಾರ ಸ್ಥಗಿತಗೊಂಡು ಸಾವಿರಾರು ಮಂದಿಗೆ ತೊಂದರೆಯಾಗುತ್ತದೆ.

ಮುಡಾದಿಂದ ಶೀಘ್ರ ಕ್ರಿಯಾ ಯೋಜನೆ



ಹಾಗೆಯೇ ದಟ್ಟಗಳ್ಳಿಯ ಕೆಇಬಿ ಜಂಕ್ಷನ್ ಸಹ ಅತೀ ಅಪಾಯಕಾರಿಯಾಗಿದ್ದು, ರಿಂಗ್ ರಸ್ತೆ ನಿರ್ಮಿಸುವಾಗ ಪಟ್ಟಭದ್ರ ಹಿತಾಸಕ್ತಿಗಳು ಯಾರದೋ ಜಾಗ ಉಳಿಸುವ ಸಲುವಾಗಿ ನೇರವಾಗಿ ರಸ್ತೆ ವಿನ್ಯಾಸ (Road Alignment) ಮಾಡದೇ ತೀವ್ರ ತಿರುವು ಮಾಡಿರುವುದರಿಂದ ಸುರಕ್ಷಾ ಸಂಚಾರಕ್ಕೆ ಮಾರಕವಾಗಿದ್ದು, ಅದಷ್ಟೋ ಮಂದಿ ಅಪಘಾತದಲ್ಲಿ ಪ್ರಾಣ ಕಳೆದುಕೊಂಡಿದ್ದು, ಹಲವರು ಗಾಯಗೊಂಡು ಶಾಶ್ವತ ಅಂಗವಿಕಲರಾಗಿದ್ದಾರೆ.

42 ಕಿಮೀ ಉದ್ದದ ರಿಂಗ್ ರಸ್ತೆ ನಿರ್ಮಿಸಿದ ಮುಡಾ ಅಧಿಕಾರಿಗಳು ರಸ್ತೆ ಸುರಕ್ಷತೆಗೆ ಆದ್ಯತೆ ನೀಡಿ ವಿನ್ಯಾಸ ಮಾಡಬೇಕಾಗಿತ್ತು. ಆದರೆ ದಟ್ಟಗಳ್ಳಿಯ ಕೆಇಬಿ ಜಂಕ್ಷನ್‌ನಲ್ಲಿ 'ಎಲ್' ಆಕಾರದ ತಿರುವಿರುವುದರಿಂದ ಬೋಗಾದಿ ಕಡೆಯಿಂದ, ಕನಕದಾಸನಗರದ ಕಡೆಯಿಂದ ಹಾಗೂ ರಾಮಕೃಷ್ಣನಗರ ಸರ್ಕಲ್ ಕಡೆಯಿಂದ ಬರುವ ವಾಹನಗಳು ಸರಾಗವಾಗಿ ಸಾಗಲು ಈ ಸರ್ಕಲ್‌ನಲ್ಲಿ ಸಾಧ್ಯವಾಗುವುದಿಲ್ಲ. ಅದರಿಂದಾಗಿಯೇ ಈ ಜಂಕ್ಷನ್ ಬ್ಲಾಕ್ ಸ್ಪಾಟ್ ಎಂದು ಖ್ಯಾತಿಯಾಗಿದೆ.

> ಅತೀ ಹೆಚ್ಚು ಅಪಘಾತಗಳು ಸಂಭವಿಸಿ, ಭಾರೀ ಪ್ರಾಣಹಾನಿ ತಪ್ಪಿಸಲು ನಾವು ಬೋಗಾದಿ ಮತ್ತು ದಟ್ಟಗಳ್ಳಿಯ ಕೆಇಬಿ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲುದ್ದೇಶಿಸಿದ್ದು, ಕ್ರಿಯಾ ಯೋಜನೆ ಸಿದ್ಧಪಡಿಸುತ್ತಿದ್ದೇವೆ. ಅದಕ್ಕಾಗಿ ಬಜೆಟ್‌ನಲ್ಲೂ ಹಣ ಇರಿಸಲಾಗಿದೆ. ಇಷ್ಟರಲ್ಲೇ ಪ್ರಸ್ತಾವನೆ ಸಲ್ಲಿಸಿ ಸರ್ಕಾರದಿಂದ ಅನುಮತಿ ಪಡೆದು ಯೋಜನೆ ಅನುಷ್ಠಾನಗೊಳಿಸಲು ಸಜ್ಜಾಗುತ್ತಿದ್ದೇವೆ. ಮಳೆ ನೀರು ಚರಂಡಿ ಅಭಿವೃದ್ಧಿ, ಕೆರೆಯಿಂದ ಕೆರೆಗೆ ನೀರು ಸರಾಗವಾಗಿ ಹೋಗಲು ಸಂಪರ್ಕ ಕಾಲುವೆ ದುರಸ್ತಿ ಹಾಗೂ ಮೈಸೂರು ನಗರದ ಪಶ್ಚಿಮ ಭಾಗದ ಬಡಾವಣೆಗಳಿಗೆ ಮುಂದಿನ 25 ವರ್ಷಕ್ಕೆ ನೀರಿನ ಖಾತರಿಯಾಗಿ ಬಿದರಗೂಡು ಮತ್ತು ಹಳೇ ಉಂಡುವಾಡಿ ಕುಡಿಯುವ ನೀರು ಸರಬರಾಜು ಯೋಜನೆ, ಒನ್ ಟೈಂ ಮೆಷರ್ (OTM) ಅಡಿ 377 ಕೋಟಿ ರೂ. ಅನುದಾನದಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆಯೂ ಪ್ರಗತಿಯಲ್ಲಿದೆ. **–ಜಿ.ಟಿ.ದಿನೇಶ್‌ಕುಮಾರ್, ಮುಡಾ ಆಯುಕ್ತ**



ತಡವಾಗಿಯಾದರೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವು ಈ ಎರಡೂ ಅಪಘಾತ ವಲಯಗಳಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲು ಮುಂದಾಗಿದ್ದು, ತಲಾ 10ರಿಂದ 15 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಕಾರ್ಯಗತಗೊಳಿಸಲು ಸಿದ್ಧತೆ ನಡೆಸಿದೆ. ಗ್ರೇಡ್ ಸೆಪರೇಟರ್ ಯೋಜನೆಗೆ ಪ್ರಸಕ್ತ ಸಾಲಿನ ಆಯ–ವ್ಯಯದಲ್ಲಿ ಅನುದಾನವನ್ನೂ ಮೀಸಲಿರಿಸಿಕೊಂಡಿರುವ ಪ್ರಾಧಿಕಾರವು, ಇದೀಗ ಸಮಗ್ರ ಯೋಜನಾ ವರದಿ (DPR) ತಯಾರಿಸಿ ಕ್ರಿಯಾ ಯೋಜನೆ (Action plan)ಸಿದ್ಧಪಡಿಸುತ್ತಿದೆ.

ಸಂಚಾರ ಪೊಲೀಸರು, ಮೈಸೂರು ಮಹಾನಗರ ಪಾಲಿಕೆ, ಲೋಕೋಪಯೋಗಿ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಇಂಜಿನಿಯರ್‌ಗಳೊಂದಿಗೆ ಚರ್ಚಿಸಿ ಈ ಎರಡೂ ಸರ್ಕಲ್‌ಗಳ ಸಂಚಾರ ದಟ್ಟಣೆ ಹಾಗೂ ಅಪಘಾತಗಳನ್ನು ತಪ್ಪಿಸಲು ಸಲಹೆ, ಮಾರ್ಗದರ್ಶನ ಪಡೆದುಕೊಂಡು ಸುಗಮ ಸಂಚಾರಕ್ಕೆ ಅನುವಾಗುವಂತೆ ಗ್ರೇಡ್ ಸೆಪರೇಟರ್ ನಿರ್ಮಿಸಲು ಮುಡಾ ಇಂಜಿನಿಯರ್‌ಗಳು ನೀಲಿನಕ್ಷೆ ತಯಾರಿಸುತ್ತಿದ್ದಾರೆ. ಈಗಾಗಲೇ ಕ್ರಿಯಾ ಯೋಜನೆ ಅಂತಿಮ ಹಂತಕ್ಕೆ ಬಂದಿದ್ದು, ಅಂದಾಜು ಪಟ್ಟಿ, ಅನುಕೂಲಗಳು, ವಿನ್ಯಾಸ ಸೇರಿದಂತೆ ಅಗತ್ಯ ಮಾಹಿತಿಗಳನ್ನೊಳಗೊಂಡ ಡಿಪಿಆರ್ ತಯಾರಿಸಿ ಮುಡಾ ಸಭೆಯಲ್ಲಿ ಅನುಮೋದನೆ ಪಡೆದು ಗ್ರೇಡ್ ಸೆಪರೇಟರ್‌ಗಳ ನಿರ್ಮಾಣ ಸಂಬಂಧ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಪ್ರಾಧಿಕಾರದ ಇಂಜಿನಿಯರಿಂಗ್ ವಿಭಾಗ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಇತ್ತೀಚೆಗಷ್ಟೇ ಸಂಸದ ಪ್ರತಾಪ್ ಸಿಂಹ ಅವರು ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಚನ್ನಕೇಶವ, ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ದಟ್ಟಗಳ್ಳಿ ಮತ್ತು ಬೋಗಾದಿ ಬಳಿ ರಿಂಗ್ ರೋಡ್ ಜಂಕ್ಷನ್‌ಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿ, ಅಪಘಾತಗಳನ್ನು ತಪ್ಪಿಸಲು ಯೋಜನೆ ರೂಪಿಸುವಂತೆ ಸೂಚಿಸಿದ್ದನ್ನು ಸ್ಮರಿಸಬಹುದಾಗಿದೆ.

ರಾಜ್ಯದ ಆರ್ಥಿಕ ವ್ಯವಸ್ಥೆ ಅತೀ ಶೀಘ್ರ ಐಸಿಯು ಸೇರಲಿದೆ!

ರಾಜ್ಯಪಾಲರ ಭಾಷಣಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವ್ಯಂಗ್ಯ

ಬೆಂಗಳೂರು, ಜುಲೈ 3(ಕೆಎಂಶಿ)– ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿನ ರಾಜ್ಯಪಾಲರ ಭಾಷಣವನ್ನು ಗಮನಿಸಿದರೆ ಈ ಸರಕಾರವು ಆದಷ್ಟು ಬೇಗ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ವೆಂಟಿಲೇಟರ್ (ಐಸಿಯು) ಮೇಲೆ ಮಲಗಿಸಲಿದೆ ಎಂದು ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಆತಂಕ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರ ಭಾಷಣವು ರಾಜ್ಯದ ಮುಂದಿನ ದುರ್ಭರ ದಿನಗಳತ್ತ ಬೊಟ್ಟು ಮಾಡಿದೆ. ಈ ಸರಕಾರ ಐಸಿಯುಗೆ ಹೋಗುವ ಕಾಲವೂ ಶೀಘ್ರವೇ ಬರಲಿದೆ ಎಂದು ಅನ್ನಿಸುತ್ತಿದೆ. ಐಸಿಯು, ವೆಂಟಿಲೇಟರ್ ಮೇಲೆ ಈ ಸರಕಾರ ನಡೆಯುವ ಸನ್ನಿವೇಶ ನಿರ್ಮಾಣ ಆಗಬಹುದು ಎಂದರು.

ಅಲ್ಲದೆ, ಸಮ್ಮಿಶ್ರ ಸರಕಾರದಂತೆ ಆಗಿರುವ ಈ ಸರಕಾರವೂ ಐಸಿಯು ಪಾಲಾಗುವ ಕಾಲ ಹತ್ತಿರದಲ್ಲೇ ಇದೆ ಎಂದು ಭವಿಷ್ಯ ನುಡಿದರು. ವಿಪಕ್ಷ ನಾಯಕನಾಗಿ ಟೀಕಿಸಬೇಕೆಂದು ಸರಕಾರವನ್ನು ಟೀಕಿಸುತ್ತಿಲ್ಲ. ಆದರೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಏನಿದೆ ಎನ್ನುವುದರ ಬಗ್ಗೆ ಸರಕಾರ ಸತ್ಯ ಮರೆಮಾಚಿದೆ. ಚುನಾವಣೆ ವೇಳೆ ಕಾಂಗ್ರೆಸ್ ಜನರಿಗೆ ಕೊಟ್ಟ ಆಶ್ವಾಸನೆ ಏನು? ಈಗ ಹೇಳುತ್ತಿರುವುದೇನು? ಭವಿಷ್ಯದ ಕರ್ನಾಟಕದ ಬಗ್ಗೆ ಯಾವುದೇ ಒಳನೋಟ ಇಲ್ಲದ ಭಾಷಣ ಇದಾಗಿದೆ ಎಂದು ಅವರು ಟೀಕಿಸಿದರು.



ಈ ಸರಕಾರಕ್ಕೆ ಮುಂದಿನ ಐದು ವರ್ಷಕ್ಕೆ ಏನು ಕೊಡಬೇಕೆಂಬ ದೂರದೃಷ್ಟಿ, ಆತ್ಮವಿಶ್ವಾಸವೇ ಇಲ್ಲ. ರಾಜ್ಯಪಾಲರ ಭಾಷಣ ಇರಲಿ, ಬಜೆಟ್ ಭಾಷಣ ಇರಲಿ, ಸರಕಾರದ ಮುಂದಿನ ಆಶಯಗಳ ಬಗ್ಗೆ ಬೆಳಕು ಚೆಲ್ಲಬೇಕು. ಈ ಭಾಷಣದಲ್ಲಿ ಬೆಳಕಿನ ಮಾತು ಹಾಗಿರಲಿ, ಬರೀ ಕತ್ತಲೇ ತುಂಬಿದೆ ಎಂದು ಹೇಳಿದರು.

ರಾಜ್ಯಪಾಲರ ಭಾಷಣ ಎಂದರೆ ಹೇಗಿರಬೇಕು. ಅದೂ 135 ಸೀಟುಗಳನ್ನು ಗೆದ್ದ ಪೂರ್ಣ ಬಹುಮತದ ಸರಕಾರದ ರಾಜ್ಯಪಾಲರ ಭಾಷಣ ಎಂದರೆ ಅದಕ್ಕೊಂದು ಗಾಂಭೀರ್ಯ ಬೇಡವೇ ಎಂದ ಅವರು, ಆಡಳಿತ ಪಕ್ಷದ ಯಾವ ಶಾಸಕರು ಕೂಡ ರಾಜ್ಯಪಾಲರ ಭಾಷಣ ಕೇಳಿ ಮೇಜು ಕುಟ್ಟಿದ್ದು ನೋಡಲಿಲ್ಲ ಎಂದು ಕುಮಾರಸ್ವಾಮಿ ಟಾಂಗ್ ನೀಡಿದರು.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ರಾಜ್ಯದ ಅನೇಕ ಸಾಧಕರ ಹೆಸರುಗಳನ್ನು ನೆನಪಿಸಿ,ಅವರ ಮಾತನ್ನು ಸ್ಮರಿಸಿದ್ದಾರೆ. ಐದು ಗ್ಯಾರಂಟಿಗಳನ್ನು ಜಾರಿಗೆ ತಂದ ಸರಕಾರ ಎಂದು ಹೇಳಿಕೊಂಡಿದ್ದಾರೆ. ನಾಡಿನ ಸಾಮಾಜಿಕ ಸಮಸ್ಯೆಗಳು,ವಿವಿಧ ಸಮಸ್ಯೆಗಳ ಬಗೆಹರಿಸುವ ಸಂದೇಶ ನೀಡಿದ್ದಾರೆ. ವಸತಿ ರಹಿತರಿಗೆ ಮನೆ ಕಟ್ಟಿಕೊಡುವುದಾಗಿ ಹೇಳಿದ್ದಾರೆ.

ಗ್ರಾಮೀಣ ಮತ್ತು ನಗರಪ್ರದೇಶದ ಅಭಿವೃದ್ಧಿ ಮಾಡುವುದಾಗಿ ಹೇಳಿಕೊಂಡಿದ್ದಾರೆ. ಪಶು ಸಂಗೋಪನೆಯಿಂದ ಗ್ರಾಮೀಣ ಜನರ ಬದುಕು ಅನುಕೂಲ ಆಗುತ್ತೆ ಎಂದು ಹೇಳಿದ್ದಾರೆ. ಆದರೆ, ಸರಕಾರವು ಏಕಪಕ್ಷೀಯವಾಗಿ ರೈತರಿಂದ ಖರೀದಿ ಮಾಡುವ ಹಾಲಿನ ದರವನ್ನು ಕಡಿತ ಮಾಡಿದೆ. ಇದೆಂಥಾ ವಿಪರ್ಯಾಸ ಎಂದು ಪ್ರಶ್ನಿಸಿದರು.



ಚಾಮರಾಜನಗರ ಸಂಸದರಾದ ವಿ.ಶ್ರೀನಿವಾಸಪ್ರಸಾದ್ ಹಾಗೂ ಶ್ರೀಮತಿ ಭಾಗ್ಯಲಕ್ಷ್ಮೀ ದಂಪತಿಯ 45ನೇ ವಿವಾಹ ವಾರ್ಷಿಕೋತ್ಸವವನ್ನು ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಅವರ ನಿವಾಸ 'ಭೀಮ ಸದನ'ದಲ್ಲಿ ಹಿತೈಷಿಗಳು ಆಚರಿಸಿದರು. ಈ ಸಂದರ್ಭದಲ್ಲಿ ಪ್ರಸಾದ್ ಅವರ ಪುತ್ರಿ ಪೂರ್ಣಿಮಾ, ಭಂತೆ ಕಲ್ಯಾಣ ಸಿರಿ, ಚಾಮರಾಜನಗರ ವಿವಿ ಕುಲಪತಿ ಪ್ರೊ. ಆರ್.ಗಂಗಾಧರ್, ಪ್ರೊ.ಎಂ.ಕೋಮಲ ಗಂಗಾಧರ್, ಪ್ರೊ. ನೀಲಗಿರಿ ತಳವಾರ್, ಭರತ್ ರಾಮಸ್ವಾಮಿ, ಪಿ.ನಂದಕುಮಾರ್ ಹೆಚ್.ಜಿ.ರಮೇಶ್, ಡಿ.ವೆಂಕಟರಾಜು, ಸಂತೋಷ್, ಶಾಂತಾರಾಂ ಶೆಟ್ಟಿ, ದೀಪಕ್ ಇನ್ನಿತರರಿದ್ದರು.

66 ಬಿಜೆಪಿ ಶಾಸಕರಲ್ಲಿ ವಿಪಕ್ಷ ನಾಯಕನಾಗುವ ಅರ್ಹತೆ ಇರುವ ಒಬ್ಬರೂ ಇಲ್ಲದಿರುವುದು ನಾಚಿಕೆಗೇಡು

ಕೆಪಿಸಿಸಿ ವಾಗ್ದಾಳಿ

ಬೆಂಗಳೂರು: ಸರ್ಕಾರ ರಚನೆ ಆಯ್ತು, ನಮ್ಮ ಸರ್ಕಾರ ಟೇಕಾಫ್ ಆಗಿ ಹಲವು ದಿನಗಳಾಯ್ತು, ನಮ್ಮ ಗ್ಯಾರಂಟಿ ಯೋಜನೆಗಳ ಜಾರಿಯೂ ಆಯ್ತು. ಸದನವೂ ಪ್ರಾರಂಭವಾಯ್ತು. ಎಲ್ಲಿ ನಿಮ್ಮ ವಿರೋಧ ಪಕ್ಷದ ನಾಯಕ. ಬಿಜೆಪಿಗೆ ವಿರೋಧ ಪಕ್ಷದ ನಾಯಕನ ಗ್ಯಾರಂಟಿಯನ್ನೂ ಕೊಡಲಾಗುತ್ತಿಲ್ಲ ಎಂದರೆ ಎಂತಹ ಹೀನಾಯ ಸ್ಥಿತಿಯಲ್ಲಿದೆ! ಎಂದು ಕರ್ನಾಟಕ ಕಾಂಗ್ರೆಸ್ ಸೋಮವಾರ ವಾಗ್ದಾಳಿ ನಡೆಸಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಬಿಜೆಪಿಯ 66 ಶಾಸಕರಲ್ಲಿ ವಿರೋಧ ಪಕ್ಷದ ನಾಯಕನಾಗುವ ಅರ್ಹತೆ ಇರುವ ಒಬ್ಬೇ ಒಬ್ಬ ಶಾಸಕನಿಲ್ಲದಿರುವುದು ಅತ್ಯಂತ ನಾಚಿಕೆಗೇಡು. ಕರ್ನಾಟಕದ ಇತಿಹಾಸದಲ್ಲಿ ವಿರೋಧ ಪಕ್ಷದ ನಾಯಕನಿಲ್ಲದೆ ನಡೆಯುತ್ತಿರುವ ಮೊದಲ ಅಧಿವೇಶನವಿದು. ಬಿಜೆಪಿ ಅಧಿಕಾರದಲ್ಲಿದ್ದಾಗಲೂ ಪ್ರಜಾಪ್ರಭುತ್ವವನ್ನು ಗೌರವಿಸಲಿಲ್ಲ, ವಿಪಕ್ಷದಲ್ಲಿದ್ದಾಗಲೂ ಗೌರವಿಸುತ್ತಿಲ್ಲ ಎಂದು ಕಿಡಿಕಾರಿದೆ.

ಬಿಜೆಪಿಗೆ ವಿರೋಧ ಪಕ್ಷದ ನಾಯಕನ 'ಗ್ಯಾರಂಟಿ'ಯೂ ಇಲ್ಲ!. ವಿರೋಧ ಪಕ್ಷದ ನಾಯಕನಿಲ್ಲದೆ ಕಲಾಪ ನಡೆಯುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಪ್ಪು ಚುಕ್ಕೆ. ಈ ಕಪ್ಪು ಚುಕ್ಕೆಯನ್ನಿಟ್ಟಿದ್ದು ಬಿಜೆಪಿ ಎಂದು ಆರೋಪಿಸಿದೆ. ವಿರೋಧ ಪಕ್ಷದ ನಾಯಕನ ಹುದ್ದೆಯನ್ನೂ ಮಾರಾಟಕ್ಕೆ ಇಡಲಾಗಿದೆಯೇ. ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ರೂ. ಫಿಕ್ಸ್ ಮಾಡಲಾಗಿತ್ತು. ಈಗ ವಿರೋಧ ಪಕ್ಷದ ನಾಯಕನ ಹುದ್ದೆ ಎಷ್ಟಕ್ಕೆ ಬಿಕರಿಯಾಗುತ್ತಿದೆ. ಆ ಚೌಕಾಶಿ ವ್ಯವಹಾರಕ್ಕಾಗಿಯೇ ಆಯ್ಕೆ ಪ್ರಕ್ರಿಯೆ ವಿಳಂಬವಾಗುತ್ತಿದೆಯೇ ಎಂದಿರುವ ಕಾಂಗ್ರೆಸ್ ಇದಕ್ಕೆ ಬಿಜೆಪಿ ಉತ್ತರಿಸಬೇಕು ಎಂದು ಕೆಪಿಸಿಸಿ ಹೇಳಿದೆ.

ಪ್ರೀತಿಯ ಬಿಜೆಪಿ, ಸದನ ಪ್ರಾರಂಭವಾಗುವ ಮೊದಲೇ ವಿರೋಧ ಪಕ್ಷದ ನಾಯಕನನ್ನು ವರಿಷ್ಠರು ಆಯ್ಕೆ ಮಾಡುತ್ತಾರೆ ಎಂದು ಗ್ಯಾರಂಟಿ ನೀಡಿದ್ದಿರಿ. ನಿಮ್ಮ ಹೈಕಮಾಂಡ್ ಕನಿಷ್ಠ ವಿರೋಧ ಪಕ್ಷದ ನಾಯಕನ ಆಯ್ಕೆಯಲ್ಲೂ ನಿಮಗೆ ಗ್ಯಾರಂಟಿ ನೀಡದಿರುವುದು ರಾಜಕೀಯ ಇತಿಹಾಸದಲ್ಲಿಯೇ ಅತ್ಯಂತ ಶೋಚನಿಯ ಸಂಗತಿ. ಪಾಪ! ಎಂದು ಕಾಂಗ್ರೆಸ್ ಬಿಜೆಪಿ ಮಾಡಿದ್ದ ಟ್ವೀಟ್‌ನ ಸ್ಕ್ರೀನ್ ಶಾಟ್ ಹಂಚಿಕೊಂಡಿದೆ.

ಬಿಜೆಪಿ ಅತ್ಯಂತ ಅಶಿಸ್ತಿನ ಪಕ್ಷ; ಸಿದ್ದರಾಮಯ್ಯ ಲೇವಡಿ

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕನನ್ನು ಇನ್ನೂ ಆಯ್ಕೆ ಮಾಡದಿರುವುದು ಬಿಜೆಪಿಯಲ್ಲಿನ ಗುಂಪುಗಾರಿಕೆಯನ್ನು ತೋರಿಸುತ್ತದೆ ಮತ್ತು ಅದೊಂದು 'ಅತ್ಯಂತ ಅಶಿಸ್ತಿನ' ರಾಜಕೀಯ ಪಕ್ಷ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಅವರಲ್ಲಿ ಗುಂಪುಗಾರಿಕೆ ಇದೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ಬಿಜೆಪಿ ತಮ್ಮನ್ನು ಶಿಸ್ತಿನ ಪಕ್ಷ ಎಂದು ಕರೆದುಕೊಳ್ಳುತ್ತದೆ. ಆದರೆ, ಅದು ಅತ್ಯಂತ ಅಶಿಸ್ತಿನ ಪಕ್ಷ ಎಂದು ಆರೋಪಿಸಿದರು. ಕರ್ನಾಟಕ ವಿಧಾನ ಮಂಡಲದ ಬಜೆಟ್ ಅಧಿವೇಶನ ಸೋಮವಾರ ಆರಂಭಗೊಂಡಿದ್ದು, ಬಿಜೆಪಿ ಇನ್ನೂ ಕೆಳಮನೆಯಲ್ಲಿ ತನ್ನ ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಿಲ್ಲ.

ಮೈಸೂರು ವಿವಿ ನೌಕರರ ಪಿಂಚಣಿ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಜು.3 (ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ ನಿವೃತ್ತಿ ವೇತನ ಬಿಡುಗಡೆ ಮಾಡುವಂತೆ ಆಗ್ರಹಿಸಿ, ಮೈಸೂರು ವಿವಿಯ ಕ್ರಾಫರ್ಡ್ ಭವನದ ಮುಂದೆ ನಿವೃತ್ತ ನೌಕರರು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಉದ್ಯೋಗಿಗಳ ಒಕ್ಕೂಟದ ನೇತೃತ್ವದಲ್ಲಿ ನಿವೃತ್ತ ನೌಕರರು ಕ್ರಾಫರ್ಡ್ ಭವನದ ಮುಂದೆ ಕೆಲಕಾಲ ಪ್ರತಿಭಟನೆ ನಡೆಸಿ, ಪಿಂಚಣಿ ಬಿಡುಗಡೆ ಮಾಡುವಂತೆ ಆಗ್ರಹಿಸಿದರು. ಹೆಸರಾಂತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಿವೃತ್ತ ಉದ್ಯೋಗಿಗಳಿಗೆ ಕಳೆದ ಒಂದು ತಿಂಗಳಿಂದ ಪಿಂಚಣಿ ಬಿಡುಗಡೆ ಮಾಡದಿರುವುದು ಖಂಡನೀಯ. ನಿವೃತ್ತ ನೌಕರರಲ್ಲಿ ಕ್ಲಾಸ್–4ನಿಂದ ಉಪನ್ಯಾಸಕರವರೆಗೂ ಇದ್ದು, ಕೆಲವರು ಪಿಂಚಣಿ ಮೊತ್ತದಿಂದಲೇ ಜೀವನ ನಡೆಸುತ್ತಿದ್ದಾರೆ. ಈಗ ಸಾಕಷ್ಟು ಮಂದಿಗೆ ತೊಂದರೆಯಾಗಿದೆ ಎಂದು ಹೇಳಿದರು.

ಬಳಿಕ ಕ್ರಾಫರ್ಡ್ ಭವನದ ಕುಲ ಸಚಿವೆ ಶೈಲಜಾ ಅವರ ಕೊಠಡಿಗೆ ತೆರಳಿದ ನಿವೃತ್ತ ಉದ್ಯೋಗಿಗಳು, ತಮ್ಮ ಸಮಸ್ಯೆಯನ್ನು ವಿವರಿಸಿ, ಪಿಂಚಣಿ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು. ನಂತರ ನಿವೃತ್ತ ಉದ್ಯೋಗಿಗಳ ಒಕ್ಕೂಟದ ಅಧ್ಯಕ್ಷ ಡಾ.ಕೆ. ಮಹಾದೇವ ಮಾತನಾಡಿ, ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯ್ದೆ 1976ರಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದ್ದು, ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಉಪಕುಲಪತಿಗಳು ಒಂದು ದಿನ ರಜೆ ಮೇಲಿದ್ದರೂ, ಹಂಗಾಮಿ ಉಪಕುಲಪತಿ ನೇಮಕ ಮಾಡಬೇಕೆಂದು ಸೂಚನೆ ಇದೆ. ಆದರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕುಲಪತಿ ಅಥವಾ ಹಂಗಾಮಿ ಕುಲಪತಿ ಇಲ್ಲದೇ, ವಿವಿಧ ಚಟುವಟಿಕೆಗಳು ಸ್ಥಗಿತಗೊಂಡಿವೆ. ಶೈಕ್ಷಣಿಕ, ಆಡಳಿತಾತ್ಮಕ ಚಟುವಟಿಕೆಗೆ ಅಡಚಣೆಯಾಗಿದೆ. ಈ ಕಾರಣದಿಂದ ನಿವೃತ್ತ ಉದ್ಯೋಗಿಗಳಿಗೆ ಪಿಂಚಣಿ ಬಿಡುಗಡೆಯಾಗಿಲ್ಲ ವಿವಿಧ ಹಂತದ ಎರಡು ಸಾವಿರ ನಿವೃತ್ತ ಉದ್ಯೋಗಿಗಳಿದ್ದಾರೆ. ಅವರೆಲ್ಲರಿಗೂ ಪಿಂಚಣಿ ಸಿಗದೆ ತೊಂದರೆಯಲ್ಲಿದ್ದಾರೆ ಎಂದು ವಿಷಾದಿಸಿದರು.

ಇನ್ನು ಎರಡು ದಿನದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಂಗಾಮಿ ಅಥವಾ ಪೂರ್ಣಾವಧಿ ಕುಲಪತಿ ನೇಮಕ ಮಾಡದಿದ್ದರೆ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರ ಮನೆ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಪ್ರೊ. ಕಾಳಚನ್ನೇಗೌಡ, ಪ್ರೊ.ಸರ್ವಮಂಗಳ, ಪ್ರೊ.ಕಾಳೇಗೌಡ ನಾಗವಾರ, ಪ್ರೊ.ರಂಗರಾಜು ಸೇರಿದಂತೆ ಹಲವಾರು ನಿವೃತ್ತ ಉದ್ಯೋಗಿಗಳು ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ನಿಮಗೆ ಮರ್ಯಾದೆ ಇಲ್ದೇ ಇರೋ ಕಡೆ ಯಾವತ್ತೂ ಹೋಗಬೇಡಿ

ಗಂಡ : ಅಂದ್ರೆ ನಾನು ಮನೆಗೆ ಬರೋದು ಬೇಡ ಅಂತನಾ....!?

ಮೈಸೂರು ಮಿತ್ರ

ಮಂಗಳವಾರ, 4 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕಷ್ಟಪಟ್ಟು ದುಡಿಯುವುದರಲ್ಲಿ ಯಾವ ಅವಮಾನವೂ ಇಲ್ಲ.

–ಜಮನಾಲಾಲ್ ಬಜಾಜ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತುಂಬಿ ತುಂಬಿ ಹೊಯ್ದರೂ ಹಂಬಲ ಮಾತ್ರ ಹೋಗದು

ನಿಮ್ಮ ಪತ್ರಗಳು

ಕುವೆಂಪುನಗರ 'ಎಂ' ಬ್ಲಾಕ್ 2ನೇ ಮುಖ್ಯ ರಸ್ತೆಯ ದುಸ್ಥಿತಿ



ಮಾನ್ಯರೆ,

ಕುವೆಂಪುನಗರದಲ್ಲೊಂದು ಯಮ ಬ್ಲಾಕ್ ಇದೆ! ಕುವೆಂಪುನಗರ ಎಂ ಬ್ಲಾಕ್ ರಸ್ತೆಯೇ ಆ ಬ್ಲಾಕ್! ಕುಸಿದು ಬಿದ್ದಿರುವ ಸೇತುವೆ. ಪಾಳುಬಿದ್ದ ರಸ್ತೆ. ಅಪಾಯಕಾರಿ ಹೊಂಡ! ತಿಪ್ಪೆಯಾದ ನಿವೇಶನ! ಮೈಸೂರಿನ ಕುವೆಂಪುನಗರದ ಎಂ ಬ್ಲಾಕ್ ಎರಡನೇ ಮುಖ್ಯರಸ್ತೆಯನ್ನು ಪ್ರವೇಶಿಸುವ ಭಾಗದ ದುಸ್ಥಿತಿಯಿದು.

ಕುವೆಂಪುನಗರ 'ಎಂ' ಬ್ಲಾಕ್ ಪೂಜಾ ಬೇಕರಿಯ ಹಿಂಭಾಗ ಇರುವ ಈ ರಸ್ತೆಯನ್ನು ನೋಡಿದರೆ ಎಂದೋ ಭೂಕಂಪ ಸಂಭವಿಸಿ ಭೂಮಿ ಬಿರುಕು ಬಿಟ್ಟಿದೆಯೇನೋ ಎಂದು ಭಾಸವಾಗುತ್ತದೆ. ಪೂಜಾ ಬೇಕರಿಯ ಹಿಂಭಾಗ ಒಂದು ಖಾಲಿ ನಿವೇಶನವಿದೆ. ಈ ನಿವೇಶನ ಈಗ ಕಸ ಸುರಿಯುವ ತಿಪ್ಪೆಯಾಗಿ ಮಾರ್ಪಟ್ಟಿದೆ.

ಈ ಭಾಗದ ಸುತ್ತಮುತ್ತ ಇರುವ ರಸ್ತೆಗಳು ಡಾಂಬರೀಕರಣಗೊಂಡು ನಳನಳಿಸುತ್ತಿವೆ. ಆದರೆ ಒಂದು ಸಾವಿರ ಚದರ ಅಡಿಗಳಷ್ಟು ವಿಸ್ತೀರ್ಣದ ಈ ರಸ್ತೆಯ ಈ ಭಾಗವನ್ನು ಮಾತ್ರ ಕಡೆಗಣಿಸಲಾಗಿದೆ. ರಸ್ತೆಯ ಈ ತುಣುಕು ಡಾಂಬರು ಕಾಣದೆ ಹಳ್ಳಕೊಳ್ಳಗಳು ನಿರ್ಮಾಣವಾಗಿದೆ. ಸೇತುವೆ ಕುಸಿದಿದೆ. ಮೋರಿ ಶಿಥಿಲವಾಗಿ ಬಿಲಗಳು ನಿರ್ಮಾಣವಾಗುತ್ತಿವೆ. ಎರಡನೇ ಮುಖ್ಯರಸ್ತೆಯನ್ನು ಪ್ರವೇಶಿಸುವ ಒಂದು ಭಾಗದಲ್ಲಿ ಒಂದು ಖೆಡ್ಡಾ ನಿರ್ಮಾಣವಾಗಿದೆ. ಈ ಸ್ವಯಂ ನಿರ್ಮಿತ ಖೆಡ್ಡಾ ಈಗ ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ.

ಈ ಪಾಳು ನಿವೇಶನ ಮತ್ತು ಹಾಳು ರಸ್ತೆಯು ಪಾಲಿಕೆಯ ವ್ಯಾಪ್ತಿಗೆ ಬರುತ್ತದೆ ಎಂಬ ಕುರುಹಾಗಿ ಒಂದು ಫಲಕವನ್ನು ಅಳವಡಿಸಲಾಗಿದೆ. ಇಲ್ಲಿ ಕಸ ಹಾಕಿದರೆ ದಂಡ ವಿಧಿಸಲಾಗುವುದು ಎಂದು. ಪಾಲಿಕೆಯ ಬೇಜವಾಬ್ದಾರಿಯಿಂದ ಈ ರಸ್ತೆಯ ಒಂದು ಭಾಗವೇ ಕುಲಗೆಟ್ಟು ಹೋಗಿರುವಾಗ ಈ ಎಚ್ಚರಿಕೆಯ ಫಲಕಕ್ಕೆ ಕಿಮ್ಮತ್ತೆಲ್ಲಿ? ಈ ರಸ್ತೆಯ ಅರ್ಧ ಭಾಗ ಕುಸಿದು ಅಪಾಯಕಾರಿ ಕಂದಕ ನಿರ್ಮಾಣ ಆಗಿರುವುದರಿಂದ ಸಾರ್ವಜನಿಕರು ಉಸಿರು ಬಿಗಿಹಿಡಿದು ಸಂಚರಿಸುವಂತಾಗಿದೆ.

ದ್ವಿಚಕ್ರ ವಾಹನ ಸವಾರರು ತುಸು ಯಾಮಾರಿದರೂ ಅನಾಹುತ ಕಟ್ಟಿಟ್ಟ ಬುತ್ತಿ. ಈ ರಸ್ತೆಯ ಸುತ್ತಮುತ್ತ ಡಾಂಬರೀಕರಣವಾಗಿ ಕಂಗೊಳಿಸುತ್ತಿದ್ದರೂ ಸಹ ಸಾವಿರ ಚದರ ಅಡಿಗಳಷ್ಟು ಜಾಗವನ್ನು ಮಾತ್ರ ನಿರ್ಲಕ್ಷಿಸಿರುವುದೇಕೆ? ಸಾವಿರ ಚದರ ಅಡಿಗಳಷ್ಟು ವಿಸ್ತೀರ್ಣ ಈ ಭಾಗ ಪಾಲಿಕೆಯ ವ್ಯಾಪ್ತಿಗೆ ಬರುವುದಿಲ್ಲವೇ?

'ಎಂ' ಬ್ಲಾಕ್ ಪ್ರವೇಶ ದ್ವಾರವಾದ ಈ ಭಾಗ ಪಾಲಿಕೆಯ ವ್ಯಾಪ್ತಿಯಿಂದ ಕೈತಪ್ಪಿ ಹೋಗಲು ಕಾರಣವೇನು? ನಂಬರ್ 1 ಸ್ವಚ್ಛ ನಗರಿ– ನಂಬರ್ 1 ಸುಂದರ ನಗರಿ, ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ ಎಂಬ ಹೆಮ್ಮೆಗೆ ಪಾತ್ರವಾಗಿರುವ ಮೈಸೂರಿನ ಹಿರಿಮೆಗೆ ಕುವೆಂಪುನಗರದ 'ಎಂ' ಬ್ಲಾಕ್ ಬಳಿ ಇರುವ ಈ ನಿರ್ಲಕ್ಷಿತ ಭಾಗ ಕಪ್ಪು ಚುಕ್ಕೆಯಾಗಿದೆ.

ಕೂಡಲೇ ಮೈಸೂರು ಮಹಾನಗರ ಪಾಲಿಕೆಯು ಎಚ್ಚೆತ್ತು ಕುವೆಂಪುನಗರ ಎಂ ಬ್ಲಾಕ್ ಎರಡನೇ ಮುಖ್ಯ ರಸ್ತೆಯ ಈ ನತದೃಷ್ಟ ಭಾಗದೆಡೆಗೆ ದೃಷ್ಟಿಹರಿಸಿ ಮೈಸೂರಿನ ಘನತೆಯನ್ನು ಕಾಪಾಡಬೇಕಾಗಿದೆ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಓಂಕಾರ್ ಬಡಾವಣೆಯ ಮಳೆ ನೀರು ಚರಂಡಿ ದುರಸ್ತಿ ಕಾರ್ಯವಾಗಲಿ



ಮಾನ್ಯರೇ,

ಮೈಸೂರಿನ ಜೆ.ಪಿ.ನಗರದ ಅಕ್ಕಮಹಾದೇವಿ ರಸ್ತೆ ಹಾಗೂ ಅಕ್ಕಮಹಾದೇವಿಯವರ ಪ್ರತಿಮೆ ಎಲ್ಲರಿಗೂ ಚಿರಪರಿಚಿತ. ಏಕೆಂದರೆ ಇದನ್ನು ಉದ್ಘಾಟನೆ ಮಾಡಿದ್ದು ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು. ಈಗ ನಾವು ಮಾತನಾಡುತ್ತಿರುವ ವಿಚಾರ ಅಕ್ಕಮಹಾದೇವಿಯ ಪ್ರತಿಮೆಯಿಂದ ಕೇವಲ 100 ಮೀಟರ್ ಪಕ್ಕದಲ್ಲಿರುವ ಓಂಕಾರ್ ಬಡಾವಣೆಯದ್ದು.

ಪ್ರತಿಮೆಯ ಪಕ್ಕದಲ್ಲಿ ಮಳೆ ನೀರು ಚರಂಡಿ ಇದ್ದು ಇದರ ಬಲಭಾಗಕ್ಕೆ ಕೇವಲ ಮೂರು ಅಥವಾ ನಾಲ್ಕು ಮನೆಗಳಿಗೆ ಕಾಂಕ್ರೀಟ್ ವಾಲ್ ಅಳವಡಿಸಲಾಗಿದೆ. ಚರಂಡಿಯ ಪಕ್ಕ ಖಾಲಿ ನಿವೇಶನದ ಎಲ್ಲಾ ಕಸ ಹಾಗೂ ಮಣ್ಣು ರಾಶಿಯನ್ನು ಇತ್ತೀಚೆಗೆ ಚರಂಡಿಯೊಳಗೆ ತಳ್ಳಲಾಗಿದೆ. ಬಹಳ ಮುಂಚಿನಿಂದಲೂ ಇಲ್ಲಿ ಹಾವು ಹಾಗೂ ಇತರೆ ಕ್ರಿಮಿ–ಕೀಟಗಳ ಹಾವಳಿ ಹೆಚ್ಚಾಗಿದೆ. ಆದರೆ ಈಗ ಇನ್ನೂ ಭಯದಲ್ಲಿ ನಡೆದಾಡುವ ಪರಿಸ್ಥಿತಿ ಎದುರಾಗಿದೆ. ಶೀಘ್ರವೇ ಪಾಲಿಕೆ ಅಥವಾ ಸಂಬಂಧಿತ ಅಧಿಕಾರಿಗಳು ಗಮನ ಹರಿಸಿ ದುರಸ್ತಿ ಕಾರ್ಯ ಮಾಡಬೇಕೆಂದು ಮನವಿ.

–ಓಂಕಾರ್ ಬಡಾವಣೆಯ ನಿವಾಸಿಗಳು

ಪಠ್ಯಕ್ರಮದ ವಿಷಯದಲ್ಲಿ ಇನ್ನು ಮುಂದಾದರೂ ಸ್ವಪ್ರತಿಷ್ಠೆ ನಿಲ್ಲಲಿ

ಮಾನ್ಯರೆ,

ಶಿಕ್ಷಣ ಎಂಬುದು ವಿದ್ಯಾರ್ಥಿಗಳ ಭವಿಷ್ಯದ ತಳಹದಿ. ಅದನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಬಾರದು. ಬಿಜೆಪಿ ಸರ್ಕಾರ ಬಂದಾಗ ಒಂದು ಪಠ್ಯಕ್ರಮ, ಕಾಂಗ್ರೆಸ್ ಸರ್ಕಾರ ಬಂದಾಗ ಮತ್ತೊಂದು ಪಠ್ಯಕ್ರಮ, ಜೆಡಿಎಸ್ ಸರ್ಕಾರ ಬಂದಾಗ ಮಗದೊಂದು ಪಠ್ಯಕ್ರಮ – ಇದೇ ರೀತಿ ತಮ್ಮ ಮತ ಬ್ಯಾಂಕ್ ಅನ್ನು ದೃಷ್ಟಿಯಲ್ಲಿಟ್ಟುಕೊಂಡು ಪಠ್ಯಕ್ರಮ ಬದಲಾವಣೆ ಮಾಡುತ್ತಾ ಹೋಗುವುದು ಎಷ್ಟರ ಮಟ್ಟಿಗೆ ಸರಿ? ನಾವೆಲ್ಲಾ ಓದುವಾಗ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬೆಳೆಯಲು ಸಹಕಾರಿಯಾದಂತಹ ಪಠ್ಯಕ್ರಮಗಳು ಇರುತ್ತಿದ್ದವು. ಆದರೆ ಈಗ ಕೆಲವು ಪ್ರತಿಷ್ಠೆ ಉಳ್ಳ ರಾಜಕೀಯ ಧುರೀಣರಿಂದ ಪದೇ ಪದೆ ಬದಲಾಗುತ್ತಿರುವ ಪಠ್ಯಕ್ರಮಗಳು ವಿದ್ಯಾರ್ಥಿಗಳ ಮೇಲೆ ನಕಾರಾತ್ಮಕತೆಯನ್ನು ಬೀರುತ್ತಿದೆ. ದಯಮಾಡಿ ಇನ್ನು ಮುಂದಾದರೂ ರಾಜಕೀಯ ಪಕ್ಷಗಳು ತಮ್ಮ ಸ್ವಪ್ರತಿಷ್ಠೆಯನ್ನು ಬದಿಗಿರಿಸಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅನುಕೂಲವಾಗುವತ್ತ ಗಮನಹರಿಸಬೇಕು. ಮಕ್ಕಳ ಮನಸ್ಸಿನಲ್ಲಿ ಜಾತಿ, ಧರ್ಮದ ವಿಷಬೀಜವನ್ನು ಬಿತ್ತುವ ಕಾರ್ಯ ಇನ್ನಾದರೂ ನಿಲ್ಲಲೇಬೇಕು. ಭೇದಭಾವವನ್ನು ಹುಟ್ಟು ಹಾಕುವ ಬದಲು ಭಾವೈಕ್ಯತೆಯನ್ನು ಸಾರಲು ಪ್ರಯತ್ನಿಸಿದರೆ ಒಳ್ಳೆಯದು.

–ಸಿ.ಎಸ್.ರಾಘವೇಂದ್ರ, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಬೆನ್ನತ್ತಿದ್ದರೆ 'ಸ್ಟ್ರೆಸ್ಸು' ಜೀವನಪೂರ್ತಿ ಸುಸ್ತು... ಸುಸ್ತು...

ಈ ಒತ್ತಡವೆಂಬ ಮಾನಸಿಕ ಮಾಯಾಂಗನೆ ನಮ್ಮನ್ನೇ ಹುಡುಕಿ ಬರುವ ಕಾರಣ ಗೊತ್ತಾ? ಆ ಕಾರಣ ಮತ್ತೇನು ಅಲ್ಲ ಹೀರೋಯಿಸಂ! ಅಂದರೆ ಕೆಲವರ ಸ್ವಭಾವವೇ ಅವರ ಬುಡಕ್ಕೆ ಬಿಸಿನೀರು ಸುರಿಯುತ್ತದೆ. ಕಾರಣ ಇಷ್ಟೆ! ಕಾಳಿದಾಸನ 'ಮೇಘದೂತ' ಕೃತಿಯಲ್ಲಿ ಒಂದು ಮಾತು ಬರುತ್ತದೆ. ಅಂದರೆ ಮಳೆ ಸುರಿಯುವ ಮೋಡಗಳಲ್ಲಿ ಕೆಲವು ಮೋಡಗಳು ಬರೀ ಗುಡುಗಿ ಗುಡುಗಿ ಮಳೆ ಸುರಿಸದೆ ಸುಮ್ಮನಾಗುತ್ತವೆ. ಇನ್ನೂ ಕೆಲವು ಮೋಡಗಳು ಸದ್ದೇ ಮಾಡದೇ ಜೋರಾಗಿ ಮಳೆ ಸುರಿದು ಹೋಗುತ್ತವೆ. ಮತ್ತೆ ಕೆಲವು ಮೋಡಗಳು ಮಳೆಯನ್ನೂ ಸುರಿಸುವುದಿಲ್ಲ; ಸದ್ದನ್ನೂ ಮಾಡುವುದಿಲ್ಲ. ಇವೆಲ್ಲದರ ನಡುವೆ ಮತ್ತಷ್ಟು ಮಳೆ ಮೋಡಗಳು ಸದ್ದನ್ನೂ ಮಾಡುತ್ತವೆ, ಮಳೆಯನ್ನೂ ಸುರಿಸುತ್ತವೆ. ಇಂಥಾ ವೈವಿಧ್ಯಮಯ ಚಲನಶೀಲತೆಯ ವೈರುಧ್ಯಗಳನ್ನು ಕಾಳಿದಾಸ ತನ್ನ ಮೇಘದೂತದಲ್ಲಿ ಪ್ರಸ್ತಾಪಿಸುತ್ತಾನೆ. ಕಾಳಿದಾಸ ಇಂಗ್ಲಿಷಿನ ಷೇಕ್ಸ್‌ಪಿಯರ್‌ನ ಮಟ್ಟಕ್ಕೆ ಸೃಜನಶೀಲತೆಯ ಸಾತತ್ಯ ಸಾಧಿಸಿದ ಸಂಪ್ರಜ್ಞೆ ಎಂಬ ತಾರ್ಕಿಕ ಸತ್ಯಗಳನ್ನು ವಿದ್ವಾಂಸರು ಚರ್ಚಿಸುತ್ತಾರೆ. ನಾನಿಲ್ಲಿ ಉಲ್ಲೇಖಿಸಬೇಕೆಂದಿರುವ ವಿಷಯ ಇಷ್ಟೇ! ಆಕಾಶದ ಚಲನವಲನಗಳನ್ನು ಗಮನಿಸಿದ ಕಾಳಿದಾಸ ತನ್ನ ಕೃತಿಶರೀರಕ್ಕೆ ಸಹಜವಾದ ಸಾಂಕೇತಿಕತೆಯನ್ನು ಹೇಗೆ ತಂದುಕೊಂಡನೋ! ಹಾಗೆ ಮನುಷ್ಯರ ಚಲನವಲನಗಳನ್ನು ನಾವು ಗಮನಿಸಿ ನೋಡಿದರೆ ಗೊತ್ತಾಗುತ್ತದೆ ಅವರ ಸ್ವಭಾವವಲಯದಲ್ಲಿಯೇ ಈ ನಾಲ್ಕು ತೆರನಾದ ವ್ಯಕ್ತಿತ್ವಗಳು ಕಾಣಿಸಿಕೊಳ್ಳುತ್ತವೆ.


ಕೆಲವರು ಬರೀ ಮಾತಾಡುತ್ತಿರುತ್ತಾರೆ, ಅವರ ಕೈಯ್ಯಲ್ಲಿ ಏನೂ ಆಗುವುದಿಲ್ಲ. ಕೆಲವರು ಮಾತೇ ಆಡುವುದಿಲ್ಲ. ಅಂದುಕೊಂಡದ್ದೆಲ್ಲವನ್ನೂ ಮಾಡಿ ಮುಗಿಸುತ್ತಾರೆ. ಮತ್ತೆ ಕೆಲವರು ಮಾತನ್ನೂ ಆಡುವುದಿಲ್ಲ. ಸಾಧಿಸುವ ಗೋಜಿಗೂ ಹೋಗುವುದಿಲ್ಲ. ಇನ್ನೂ ಕೆಲವರು ಹೆಚ್ಚು ಮಾತನ್ನೂ ಆಡುತ್ತಾರೆ, ಆಡಿದ ಮಾತಿನಂತೆ ಮಾಡಿಯೂ ತೋರಿಸುತ್ತಾರೆ. ಅಂದರೆ ಕಾಳಿದಾಸ ತನ್ನ ಮೇಘದೂತದಲ್ಲಿ ಗಮನಿಸಿ ಹೆಸರಿಸಿದ ಆ ಮಳೆ ಮೋಡಗಳ ಚಲನಶೀಲತೆ ಮನುಷ್ಯರ ವ್ಯಕ್ತಿತ್ವಗಳಲ್ಲೂ ಅದೇ ನಮೂನೆಯಲ್ಲಿ ಸುತ್ತುತ್ತಿರುತ್ತವೆ. ಅಂದ ಮೇಲೆ ಕೋಟ್ಯಾನುಕೋಟಿ ಮಾನವಕೋಟಿ ಆಕಾಶದ ಮಳೆ ಮೋಡಗಳ ಈ ನಾಲ್ಕು ಕೆಟಗರಿಯಲ್ಲಿ ಎಲ್ಲಾದರೂ ಒಂದು ಕಡೆ ಇರಲೇಬೇಕಲ್ಲ! ಈಗ ಹೇಳಿ ನೀವೆಲ್ಲಿದ್ದೀರಿ? ನಿಮ್ಮ ಮನಸ್ಸು ಯಾವ ವಿಧವಾದ ಮೋಡದ ರಾಶಿಯಲ್ಲಿದೆ, ನಿಮ್ಮ ಕನಸು ಯಾವ ತೆರನಾದ ಸಂಕಲ್ಪ ಸೂತ್ರದ ಜೊತೆ ಬಂಧಿಸಲ್ಪಟ್ಟಿದೆ! ಅದೇನೆ ಇರಲಿ ಮೇಲೆ ಗಮನಿಸಿದ ಅಷ್ಟೂ ವೈವಿಧ್ಯತೆಯ ವ್ಯಕ್ತಿತ್ವಗಳಲ್ಲಿ **ಕಡೆಯದಾಗಿ ಪ್ರಸ್ತಾಪಿಸಿದ ವ್ಯಕ್ತಿತ್ವವಿದೆಯಲ್ಲಾ ಅದು ಮಹಾನ್ ಡೇಂಜರಸ್ಸು.** ಕಾರಣ ಗೊತ್ತಾ? ಮೇಲಿನ ಮೂರು ಕ್ಯಾಟಗರಿಯ ವ್ಯಕ್ತಿತ್ವಗಳು ಆದಂಗಾಗ್ಲಿ ಮಾದಪ್ಪನ ಜಾತ್ರೆ ಅನ್ನೋ ಜಾಯಮಾನಕ್ಕೆ ಪಕ್ಕಾಗಿ, ಜೀವನವನ್ನು ಬಂದಂತೆ ಸ್ವೀಕರಿಸುವ ಮನೋಭೂಮಿಕೆಯಲ್ಲಿ ಸಂಚರಿಸುತ್ತವೆ. ಅಲ್ಲಿ ಸ್ಟ್ರೆಸ್ಸು, ಒತ್ತಡಗಳಿಗೆ ಜಾಗವಿಲ್ಲ. ಅಂಥ ವ್ಯಕ್ತಿತ್ವಗಳು ಅದನ್ನು ಹಾಗೆ ತೆಗೆದುಕೊಳ್ಳುವುದೂ ಇಲ್ಲ, ಅಕ್ಷರಮಟ್ಟಿಗೆ ಅವು ಸೇಫು.

ಆದರೆ ಆ ಕಡೆಯ ಮನಸ್ಥಿತಿಯ ಮೋಡದ ಮರೆಯ ವ್ಯಕ್ತಿತ್ವವಿದೆಯಲ್ಲ ಅದರ ನೀತಿ, ನಿಜಾಯಿತಿಗಳೇ ಕಷ್ಟ, ಇಂತಹ ವ್ಯಕ್ತಿತ್ವ ಇರುವ ಅವರು ಯಾರೇ ಆಗಲಿ ತುಂಬ ಮಾತಾಡುತ್ತಾರೆ. ಊರಿಗೆಲ್ಲಾ ನಾನೇ ದೊಡ್ಡೋನು ಎನ್ನುತ್ತಾರೆ. ಹತ್ತೂ ಜನಗಳ ಮುಂದೆ ನಾನು ಅದು ಮಾಡುತ್ತೇನೆ, ಇದು ಮಾಡುತ್ತೇನೆ ಎಂದು ತನ್ನ ಪೌರುಷ ಪರಾಕ್ರಮಗಳನ್ನು ಬಿಂಬಿಸಿಕೊಳ್ಳುತ್ತಾರೆ. ಯಾವಾಗ ಜನರೆದುರು ತಾವು ಥ್ಯೂರಿಯಲ್ಲಿ ಏನೆಲ್ಲಾ ಮಾಡುತ್ತೇವೆಂದು ಪ್ರತಿಜ್ಞೆ ಮಾಡಿದರೋ, ಅದನ್ನೆಲ್ಲಾ ಮಾಡುವ ಅನಿವಾರ್ಯತೆಯಾಗಲೀ, ಅವಶ್ಯಕತೆಯಾಗಲೀ, ಅವರಿಗೆ ಇರುವುದಿಲ್ಲ. ಆದರೂ ಅವರು ಹೇಳಿದ ಮಾತಿಗೆ ಕಟ್ಟುಬಿದ್ದು ಹಠಕ್ಕೆ ಬಿದ್ದವರಂತೆ ಅವರು ಹೇಳಿದುದೆಲ್ಲವನ್ನೂ ಸಾಧಿಸಲು ಮುನ್ನುಗ್ಗುತ್ತಾರೆ. ಅದರಲ್ಲಿ ಯಶಸ್ವಿಯೂ ಆಗುತ್ತಾರೆ. ಗೆಲುವನ್ನೂ ಸಾಧಿಸುತ್ತಾರೆ, ಮಾತಾಡಿದ್ದೆಲ್ಲವನ್ನೂ ಮಾಡಿ ಮುಗಿಸುತ್ತಾರೆ. ಕಾಳಿದಾಸ ಹೇಳಿದ ನಾಲ್ಕನೇ ಕೆಟಗರಿಯ ಮೋಡದ ಥರದ ಸ್ವಭಾವದವರು ಇವರು, ಅಂದರೆ ಗುಡುಗೂ ಉಂಟು ಮಳೆಯೂ ಉಂಟು. ಇಂಥಾ ಆಸಾಮಿಗಳ ಎದೆಯೊಳಗೆ ಸ್ಟ್ರೆಸ್ಸು ಒತ್ತಡಗಳೆಂಬ ಮಾಯಾಮೃಗಗಳು ಲಗೋರಿಯಾಡಲು ಬಾಲು ಕುಟ್ಟುತ್ತಿರುತ್ತವೆ.

> ಎಲ್ಲರೂ ಒಂದಲ್ಲಾ ಒಂದು ವಿಧದಲ್ಲಿ ಒತ್ತಡದಲ್ಲಿ ಪಾಲುದಾರರೇ! ಅದರಿಂದ ಮುಕ್ತಿ ಹೊಂದಬೇಕಾದರೆ ಸುಲಭ ಮಾರ್ಗ ಧ್ಯಾನ ಮತ್ತು ಮೌನ! ನಮ್ಮನ್ನು ನಾವು ವಿಮರ್ಶಿಸಿಕೊಂಡು ಎಲ್ಲರೊಡನೆ ಪ್ರೀತಿ ವಿಶ್ವಾಸ ಸ್ನೇಹದಿಂದ ಇದ್ದು ಬಿಡುವುದು, ಧನಾತ್ಮಕವಾಗಿ ಯೋಚಿಸುತ್ತಾ ಏಕಾಂತದ ನಡಿಗೆ ಹಿತಮಿತವಾದ ಊಟ ತಿಂಡಿ, ಹೊಸತನಕ್ಕಾಗಿ ಹಾತೊರೆಯುವ ಪ್ರಫುಲ್ಲವಾದ ಮನಸ್ಸು, ಮಾಡುವ ಕೆಲಸದಲ್ಲಿ ವ್ಯವಸ್ಥಿತ ಚತುರತೆ ರೂಢಿಸಿಕೊಂಡರೆ ಅಲ್ಲಿಗೆ ಸ್ಟ್ರೆಸ್ಸು ನಮ್ಮನ್ನು ಬಾಧಿಸಲಾರದು. ಅದಕ್ಕಾಗಿ ಅನವಶ್ಯಕ ಮಾತು ಬೇಡ, ಬದಲಿಗೆ ಬೇಕಾದಷ್ಟು ವಿಶ್ರಾಂತಿ, ನಿತ್ಯದ ವ್ಯಾಯಾಮಗಳನ್ನು ರೂಢಿಸಿಕೊಂಡರೆ ಸಾಕಷ್ಟಾದೀತು.

ಅಂದರೆ, ಕೈಯ್ಯಲ್ಲಿ ದುಡ್ಡಿಲ್ಲದಿದ್ದರೂ ಬಹುಕೋಟಿ ಬಜೆಟ್ಟಿನ ಸಿನಿಮಾ ಅನೌನ್ಸ್ ಮಾಡುವ ಪ್ರೊಡ್ಯೂಸರು ಮೀಟರ್ ಬಡ್ಡಿ ದಂಧೆಗೆ ತಗುಲು ಹಾಕಿಕೊಂಡು ವಿಪರೀತ ಒತ್ತಡದ ಏರಿಳಿತಗಳ ಸುಳಿಗೆ ಸಿಲುಕಿ ಹೈರಾಣಾಗುತ್ತಾನೆ. ದೊಡ್ಡದೊಂದು ಕಾರ್ಯಕ್ರಮ ಮಾಡುತ್ತೇನೆ ನೋಡುತ್ತಿರು ಎಂದು ಜಂಭಕೊಚ್ಚಿಕೊಂಡವನು ಪ್ರಾಯೋಜಕತ್ವವಿಲ್ಲದೆ ಪರದಾಡಿ ಇನ್ನು ಹೇಳಿಬಿಟ್ಟಿದ್ದೇನಲ್ಲ ಎಂಬ ಒಂದೇ ಕಾರಣಕ್ಕೆ ಸಾಲದ ಚಕ್ರಸುಳಿಗೆ ಸಿಲುಕಿ ನ್ಯೂಸ್ ಪೇಪರಿನ ಉದ್ಘಾಟನಾ ಸಮಾರಂಭದಲ್ಲಿ ಪ್ಯಾದೆ ನಗೆ ನಗುತ್ತಿರುತ್ತಾನೆ. ಒತ್ತಡ ಅವನನ್ನು ಆಳುತ್ತಿರುತ್ತದೆ. ಇನ್ನು ಯುವಕರು ಒತ್ತಡಗಳಿಗೆ ಸಿಲುಕುತ್ತಿರುವ ಪರಿ ಇನ್ನೂ ವಿಚಿತ್ರ ಕೊಳ್ಳುಬಾಕ ಸಂಸ್ಕೃತಿ, ಅವರನ್ನು ಆವರಿಸುತ್ತಿದೆ. ಶಾಪಿಂಗಿಗೆ ದುಡ್ಡು ಹೊಂದಿಸುವ ಆತುರದಲ್ಲಿ ವಿಶೇಷ ಆಸಕ್ತಿ ವಹಿಸುತ್ತಾರೆ ವಿನಃ ಕೆಲಸದಲ್ಲಿ ಮೈಮರೆಯುವ, ತಾನು ಮಾಡುವ ಕೆಲಸದಲ್ಲಿ ನಿಪುಣತೆ ಸಾಧಿಸುವ ಕಷ್ಟಕ್ಕೆ ಮೈ ಒಗ್ಗಿಕೊಳ್ಳುತ್ತಿಲ್ಲ. ಜಂಕ್ ಫುಡ್‌ಗಳ ದಾಸರಾಗಿ, ಮೈಗೆ ವ್ಯಾಯಾಮವಿಲ್ಲದೆ, ಮನಸ್ಸು ದೇಹಗಳೆರಡನ್ನೂ ಗುಜರಿ ಅಂಗಡಿ ಮಾಡಿಕೊಂಡು ಒತ್ತಡವನ್ನು ವಿನಾಕಾರಣ ಆಹ್ವಾನಿಸಿಕೊಳ್ಳುತ್ತಾರೆ.

ತನ್ನ ಓರಗೆಯವರು ತಮ್ಮ ಪರಿಶ್ರಮದಿಂದ ಒಂದು ಲೆವೆಲ್ ಮೀರಿ ಮೇಲೆ ಹೋದರೆ, ಈತ ಅವನು ಸಾಧಿಸಿದುದನ್ನು ತಾನೂ ಸಾಧಿಸ ಹೊರಡುವುದಿಲ್ಲ. ಬದಲಿಗೆ, ಅವನಿಗಿಂತ ನನ್ನಲ್ಲಿ ಏನೋ ಕಮ್ಮಿಯಾಗಿದೆಯೆಂಬ 'ಇನ್‌ಫೀರಿಯರ್ ಪ್ರೆಷರ್'ಅನ್ನು ಸೃಷ್ಟಿಸಿಕೊಂಡು ಸ್ಟ್ರೆಸ್ಸಿಗೆ ಒಳಗಾಗುತ್ತಾರೆ. ಚುನಾವಣೆಯಲ್ಲಿ ಸೋತ ಮಂದಿ, ಗೆದ್ದರೂ ಅಧಿಕಾರ ಹಿಡಿಯಲಾಗದ ಮಂದಿ, ಅಧಿಕಾರದಲ್ಲಿದ್ದರೂ ನೆಮ್ಮದಿಯಾಗಿ ಅದನ್ನು ಅನುಭವಿಸಲಾರದ ಆತಂಕಗಳು, ಮನುಷ್ಯನ ಮನಸ್ಸಿನಲ್ಲಿ ಒತ್ತಡ ಸೃಷ್ಟಿಸುತ್ತವೆ. ಕೆಲವೊಮ್ಮೆ ಎಲ್ಲಾ ಇದ್ದು ಹೊಂದಾಣಿಕೆಯ ಕೊರತೆಯ ಕಾರಣಕ್ಕೆ ಕುಟುಂಬದಲ್ಲಿ, ಕಚೇರಿಯಲ್ಲಿ ಸಮಾಜದಲ್ಲಿ, ಸ್ನೇಹಿತರಲ್ಲಿ, ವ್ಯವಹಾರದಲ್ಲಿ ತೊಡಗಿಸಿಕೊಳ್ಳಲಾರದೆ, ಒತ್ತಡಕ್ಕೆ ಒಳಗಾಗಿರುವ ಎಷ್ಟು ಜನ ತಮ್ಮ ಆ ನಕಾರಾತ್ಮಕ ಭಾವನೆಗಳಿಗೆ ತಮ್ಮ ದಿನನಿತ್ಯದ ಒತ್ತಡಗಳಿಗೆ, ಉತ್ತರ ಕಂಡುಕೊಳ್ಳಲಾರದೆ ಒದ್ದಾಡುತ್ತಾರೆ. ದೇಹಬಾಧೆಗೆ ತುತ್ತಾಗಿ



ರೊಟೀನ್ ಚೆಕಪ್ಪಿಗೆ ಕೈಯ್ಯಲ್ಲಿ ಫೈಲು ಹಿಡಿದು ಆಸ್ಪತ್ರೆಯ ಹೆಬ್ಬಾಗಿಲಿನ ಕ್ಯೂನಲ್ಲಿರುತ್ತಾರೆ. ಈ ಒತ್ತಡದ ಕಾರಣಕ್ಕೆ ಮಾಡುವ ಕೆಲಸದ ಮೇಲೆ ನಿಯಂತ್ರಣ ಕಳೆದುಕೊಳ್ಳುತ್ತಿರುತ್ತಾರೆ. ತಮ್ಮನ್ನು ತಾವೇ ಸಂಬಾಳಿಸಿಕೊಳ್ಳಲಿಕ್ಕೆ ಹೆಣಗುತ್ತಿರುತ್ತಾರೆ.

ನನ್ನ ಗೆಳೆಯನೊಬ್ಬ, ಇಂಥದೇ ಸಾಲದ ಸುಳಿಯ ಒತ್ತಡಕ್ಕೆ ಸಿಲುಕಿ ಆ ಸ್ಟ್ರೆಸ್ಸನ್ನು ಮ್ಯಾನೇಜ್ ಮಾಡಲು ಆಗದೆ ಒದ್ದಾಡುತ್ತಿದ್ದ. ವಯಸ್ಸು ನಲವತ್ತಾಗಿತ್ತು. ಪ್ರತಿಷ್ಠಿತ ಬ್ಯಾಂಕಿನಲ್ಲಿ ಕ್ಯಾಷಿಯರ್ ಆಗಿದ್ದ. ಖಾಸಗಿ ಸಾಲಗಳ ಕಾರಣದಿಂದ ಒತ್ತಡಕ್ಕೆ ಒಳಗಾಗಿದ್ದ. ಮಾನಸಿಕ ಒತ್ತಡದ ಕಾರಣಕ್ಕೆ ಖಿನ್ನತೆಗೆ ಒಳಗಾದ. ಕ್ಯಾಷ್ ಕೌಂಟರಿನ ಕೆಲಸದ ಮೇಲೆ ನಿಗಾ ವಹಿಸಲು ಈ ಒತ್ತಡವೆಂಬ ಮಾಯಾಮೃಗ ಅಡ್ಡಿಪಡಿಸುತ್ತಿತ್ತು. ಗ್ರಾಹಕರಿಗೆ ಸಾವಿರ ಕೊಡುವ ಜಾಗದಲ್ಲಿ ಎರಡು ಸಾವಿರ ಕೊಟ್ಟು ಕಳಿಸುತ್ತಿದ್ದ. ಪ್ರಾಮಾಣಿಕ ಗ್ರಾಹಕರು ದುಡ್ಡು ಜಾಸ್ತಿ ಕೊಟ್ಟಿದ್ದೀರಿ ಸಾರ್ ಎಂದು ಹೇಳಿ ವಾಪಸ್ಸು ಕೊಟ್ಟು ಹೋಗುತ್ತಿದ್ದರು. ಆಮೇಲೆ ಬ್ಯಾಂಕಿನವರು ಆತನ ಜಾಗ ಬದಲಾಯಿಸಿದರು. ಆದರೆ ಆ ಒತ್ತಡವೆಂಬ ನೀರುಕುದುರೆ ಆತನನ್ನು ಎಷ್ಟು ಜಾಲಾಡಿಸಿತು ಎಂದರೆ ಕಡೆಗೊಂದು ದಿನ ಆತ ಆತ್ಮಹತ್ಯೆ ಮಾಡಿಕೊಂಡ. ಆತನ ಹೆಂಡತಿಗೆ ಬ್ಯಾಂಕು ಕೆಲಸಕೊಟ್ಟಿತು.

ಮತ್ತೆ ಕೆಲವರು ಕೊಟ್ಟ ಕೆಲಸವನ್ನು ನಿಗದಿತ ಸಮಯದಲ್ಲಿಯೇ ಮುಗಿಸಿಬಿಡಬೇಕೆಂಬ ಅನವಶ್ಯಕ ಧಾವಂತಕ್ಕೆ ಬೀಳುತ್ತಾರೆ. ಒಂದು ದಿನ ತಡವಾದರೆ ಸಾಮ್ರಾಜ್ಯವೇನೂ ಮುಳುಗಿ ಹೋಗುವುದಿಲ್ಲವೆಂಬ ಮೇಲೆ ಹೇಳಿದ, ಮೋಡದ ಚಲನವಲನದಂಥಾ ಮನಸ್ಸಿರುವವರು ಬಚಾವಾಗುತ್ತಾರೆ. ಹಠಕ್ಕೆ ಬಿದ್ದು ಮೀಸೆ ತಿರುವಿದವರು ಒತ್ತಡಕ್ಕೆ ಒಳಗಾಗಿ ಮೆತ್ತಗಾಗುತ್ತಾರೆ. ಇತ್ತೀಚೆಗಂತೂ ಮೊಬೈಲೇ ಬದುಕು! ಎಂದುಕೊಂಡ ಹಲವರು ಫೇಸ್‌ಬುಕ್ಕುಗಳಲ್ಲಿ ಕಚ್ಚಾಡಿಕೊಂಡು, ಬೈದಾಡಿಕೊಂಡು, ತಮ್ಮದಲ್ಲದ ತಪ್ಪಿಗೆ ಮಾನಸಿಕ ತುಮುಲಗಳನ್ನು ಸೃಷ್ಟಿಸಿಕೊಂಡು ಒತ್ತಡಗಳಿಗೆ ಒಳಗಾಗುತ್ತಿದ್ದಾರೆ. ಯಾರದ್ದೋ ಪರ ವಕಾಲತ್ತು, ಯಾವ್ಯಾವುದರ ಪರವೋ ವೈಯಕ್ತಿಕ ನಿಯತ್ತು ತೋರಿಸಲು ಹೋಗಿ ಮುಖ ಗೊತ್ತಿಲ್ಲ! ಗೆಳೆತನವಿಲ್ಲ! ಕೇವಲ ಪ್ರೊಫೈಲ್ ಪಿಕ್ಚರ್ ಹಾಕಿಕೊಂಡವನ ಜೊತೆಯೇ ಜಗಳಕ್ಕೆ ನಿಲ್ಲುವ ಮನಸ್ಥಿತಿಗೆ ಬಂದು ನಿಂತಿದೆ ಜಾಗತಿಕ ಜಗತ್ತು. ಈ ಸ್ಟ್ರೆಸ್ಸು ಎಂಬ ಮಾಯಾಮೃಗ ನಿದ್ದೆ ಮಾಡಲು ಬಿಡುವುದಿಲ್ಲ! ಸೋಷಿಯಲ್ ಮೀಡಿಯಾದಲ್ಲಿ ಜಾಲಿ ಮಾಡಲು ಬಂದವರು, ಪರಸ್ಪರ ಮಾತಿನಲ್ಲೇ ಘರ್ಷಣೆ ಮಾಡಿಕೊಂಡು ಸಂಬಂಧಗಳನ್ನು ಹಳಸಿಕೊಳ್ಳುತ್ತಾರೆ. ಸಾಮಾಜಿಕ ಜೀವನದಲ್ಲೂ ಒತ್ತಡ ಸೃಷ್ಟಿಸಿಕೊಂಡು ತಮ್ಮ ವ್ಯಕ್ತಿತ್ವವನ್ನು ತಾವೇ ರಿಪೇರಿ ಮಾಡಲಾಗದಷ್ಟು ಶಿಥಿಲ ಮಾಡಿಕೊಳ್ಳುತ್ತಾರೆ.


ಒತ್ತಡ ಅವರನ್ನು ಸೂಪರ್‌ಸೀಡ್ ಮಾಡುತ್ತಿರುತ್ತದೆ. ಕಚೇರಿಯ ಕೆಲಸಕ್ಕೆ ಊರಿಂದೂರಿಗೆ ಅತಿಯಾಗಿ ಪ್ರಯಾಣ ಮಾಡುವವರು ಕುಂತಲ್ಲಿ ನಿಂತಲ್ಲಿ ಚಡಪಡಿಸುತ್ತಾರೆ. ಆಫೀಸಿನಲ್ಲಿ ಟೇಬಲ್ಲಿನ ಮೇಲೆ ಬ್ಯಾಗು ಇಡುತ್ತಿದ್ದಂತೆ ಬಾಟಲಿ ತುಂಬ ನೀರು ಕುಡಿದು ಸಮಾಧಾನವಾಗುವ ಬದಲು ಸಹೋದ್ಯೋಗಿಗಳ ಮೇಲೆ ಸಿಡಿಮಿಡಿಗೊಳ್ಳುತ್ತಿರುತ್ತಾರೆ. ಕಾರಣ ಜನರೊಂದಿಗೆ ಬೆರೆಯದ, ಮಾತೇ ಆಡದ, ಗುಡುಗೇ ಇಲ್ಲದ ಖಾಲಿ ಮೋಡದ ಕತೆ ಇದು. ಗುಡುಗೂ ಇಲ್ಲ; ಮಳೆಯೂ ಇಲ್ಲ. ಇಂಥವರಿಗೆ ಸಂವಹನದ ಕೊರತೆ, ಮಾರ್ಗ ದರ್ಶನದ ಕೊರತೆ, ಚಾಡಿಕೋರರು ಅವರಿಗೆ ಸದಾ ಜೊತೆ, ಹಾಗಾಗಿಯೇ ಇವರು ಒತ್ತಡಕ್ಕೆ ದಾಸರಾಗುತ್ತಾರೆ. ಮತ್ತೆ ಕೆಲವರು ವಿಪರೀತವಾಗಿ ಕೆಲಸದಲ್ಲಿ ತೊಡಗಿಕೊಳ್ಳುವುದು, ಕೆಲವರಂತೂ ಕಚೇರಿಯಿಂದ ಮನೆಗೆ ಹೊರಡುವುದೇ ಇಲ್ಲ. ಅವರು ಎಷ್ಟು ವರ್ಕೋಹಾಲಿಕ್ ಎಂದರೆ, ಸಾರ್ ಮನೆಯಿಂದ ಫೋನ್ ಬಂದಿತ್ತು ಮೇಡಂ ಕಾಯ್ತಿದ್ದಾರೆ ಸಾರ್ ಹೋಗಿ! ಎಂದು ಮನೆಗೆ ಕಳಿಸುವಷ್ಟರ ಮಟ್ಟಿಗೆ ಕೆಲವರು ಕೆಲಸವನ್ನು ಹಚ್ಚಿಕೊಂಡವರಿದ್ದಾರೆ. ನಾಳೆ ಹಾಗಾಗಿ ಬಿಡಬಹುದು. ಹೀಗಾಗಿ ಬಿಡಬಹುದು ಎಂಬ ಅಪಾಯದ ಮುನ್ಸೂಚನೆಯನ್ನೂ, ಅದರಿಂದಾಗಬಹುದಾದ ಹಾನಿಗಳನ್ನು, ತನಗೆ ತಾನೆ ಸುಮ್ಮನೇ ಕಲ್ಪಿಸಿಕೊಂಡು ಕೊರಗುವವರ ಎದೆಯಲ್ಲಿ ಸ್ಟ್ರೆಸ್ಸು ಎಂಬ ಒತ್ತಡದ ಬೋರ್ಡು ನೇತಾಡುತ್ತಿರುತ್ತದೆ – ಹೀಗೆ ಈ ಒತ್ತಡವೆಂಬ ಮಾನಸಿಕ ಹೊಯ್ದಾಟ ವ್ಯಾಪಾರಸ್ಥರಿಂದ ಹಿಡಿದು ರೈತಾಪಿ ವರ್ಗದ ತನಕ, ಕಾರಕೂನನಿಂದ ಹಿಡಿದು ಉನ್ನತಾಧಿಕಾರಿಯತನಕ ಹಬ್ಬಿದೆ.

ಈ ಎಲ್ಲ ಮಜಲುಗಳಲ್ಲಿ ಎಲ್ಲಾದರೊಂದು ದಿನ ಒತ್ತಡದ ಈ ಉದ್ವೇಗಕ್ಕೆ ತುತ್ತಾಗಿ ಮಾನಸಿಕ ಮತ್ತು ದೈಹಿಕ ತೊಂದರೆಗಳನ್ನು ಅನುಭವಿಸಿದರೆ, ಆಗ ನಮಗೆ ಗೊತ್ತಾಗುತ್ತದೆ! ಮನಸ್ಸಿನಲ್ಲಿ ಮೆಲ್ಲಗೆ, ಉದ್ವೇಗ ಹುಟ್ಟುತ್ತದೆ. ವಿನಾಕಾರಣ ಕೋಪಬರುತ್ತದೆ. ತಾಳ್ಮೆಗೆಟ್ಟು ಮರೆವು ಜಾಸ್ತಿಯಾಗುತ್ತದೆ. ಏಕಾಗ್ರತೆಯ ಕೊರತೆ ಕಾಡುತ್ತದೆ. ಹೃದಯದ ಬಡಿತ ಹೆಚ್ಚಾಗಿ, ಉಸಿರಾಟದಲ್ಲಿ ಏರುಪೇರಾಗುತ್ತದೆ. ಆಗಿಂದಾಗ್ಗೆ ಶೀತ ಕಾಣಿಸಿಕೊಳ್ಳುತ್ತದೆ. ಬಾಯಿ ಗಂಟಲುಗಳು ಒಣಗುತ್ತವೆ. ತಿಂದ ಅನ್ನ ಜೀರ್ಣವಾಗಿ ಮೈಗತ್ತುವುದಿಲ್ಲ. ರಕ್ತದೊತ್ತಡ, ಸಕ್ಕರೆ ಖಾಯಿಲೆಗಳು ಕಣ್ಣು ಮಿಟುಕಿಸಿ ಹಲೋ ಫ್ರೆಂಡ್ ಎನ್ನುತ್ತವೆ. ದೇಹದಲ್ಲಿನ ನರಮಂಡಲ ವ್ಯವಸ್ಥೆಯಲ್ಲಿ ಅನಗತ್ಯ ರಸಾಯನಿಕಗಳು ಬಿಡುಗಡೆಯಾಗುತ್ತವೆ. ಕಳೆದುಹೋದ ಸಮಯವನ್ನೂ, ಕಳೆದುಕೊಂಡ ಘಟನೆಗಳನ್ನೂ, ವ್ಯಕ್ತಿಗಳನ್ನೂ ಹುಚ್ಚರಂತೆ ಹುಡುಕುತ್ತಾ ಭಾವನಾತ್ಮಕವಾಗಿ ಬೇಗುದಿ ಅನುಭವಿಸುತ್ತವೆ. ಆಗ ಒತ್ತಡದ ಒರತೆಗೆ ಶರಣಾಗುತ್ತೇವೆ. ಗಂಗಾವತಿ ಪ್ರಾಣೇಶ ನಗಿಸಿದರೂ ನಗು ಬರುವುದಿಲ್ಲ. ಸಾಧುಕೋಕಿಲ ಅಭಿನಯಿಸಿದರೂ ನಗು ಬರುವುದಿಲ್ಲ.

ಒತ್ತಡ! ಒತ್ತಡ! ಒತ್ತಡ!, ಸ್ಟ್ರೆಸ್ಸು! ಸ್ಟ್ರೆಸ್ಸು! ಸ್ಟ್ರೆಸ್ಸು! ಎಲ್ಲರೂ ಒಂದಲ್ಲಾ ಒಂದು ವಿಧದಲ್ಲಿ ಒತ್ತಡದಲ್ಲಿ ಪಾಲುದಾರರೇ! ಅದರಿಂದ ಮುಕ್ತಿ ಹೊಂದಬೇಕಾದರೆ ಸುಲಭ ಮಾರ್ಗ ಧ್ಯಾನ ಮತ್ತು ಮೌನ! ನಮ್ಮನ್ನು ನಾವು ವಿಮರ್ಶಿಸಿಕೊಂಡು ಎಲ್ಲರೊಡನೆ ಪ್ರೀತಿ ವಿಶ್ವಾಸ ಸ್ನೇಹದಿಂದ ಇದ್ದು ಬಿಡುವುದು, ಧನಾತ್ಮಕವಾಗಿ ಯೋಚಿಸುತ್ತಾ ಏಕಾಂತದ ನಡಿಗೆ ಹಿತಮಿತವಾದ ಊಟ ತಿಂಡಿ, ಹೊಸತನಕ್ಕಾಗಿ ಹಾತೊರೆಯುವ ಪ್ರಫುಲ್ಲವಾದ ಮನಸ್ಸು ಮಾಡುವ ಕೆಲಸದಲ್ಲಿ ವ್ಯವಸ್ಥಿತ ಚತುರತೆ ರೂಢಿಸಿಕೊಂಡರೆ ಅಲ್ಲಿಗೆ ಸ್ಟ್ರೆಸ್ಸು ನಮ್ಮನ್ನು ಬಾಧಿಸಲಾರದು. ಅದಕ್ಕಾಗಿ ಅನವಶ್ಯಕ ಮಾತು ಬೇಡ, ಬದಲಿಗೆ ಬೇಕಾದಷ್ಟು ವಿಶ್ರಾಂತಿ, ನಿತ್ಯದ ವ್ಯಾಯಾಮಗಳನ್ನು ರೂಢಿಸಿಕೊಂಡರೆ ಸಾಕಷ್ಟಾದೀತು. ನಮ್ಮ ಹಳ್ಳಿ ಕಡೆಯ ಗಾದೆ ಮಾತೊಂದಿದೆ, 'ಹೊಟ್ಟೆ ತುಂಬಾ ಮುದ್ದೆ ಕಣ್ತುಂಬ ನಿದ್ದೆ' ಅಂತ ಹಾಗೆ ಒತ್ತಡವೆಂಬ ಈ ಸ್ಟ್ರೆಸ್ ಪಾಯಿಂಟು ನಮ್ಮ ಮನಸ್ಸೆಂಬ ಕ್ಲಿಪ್ ಜಾಯಿಂಟನ್ನು ಬಿಟ್ಟು ಸಾವಿರ ಮೈಲಿ ದೂರ ಓಡುತ್ತದೆ. ಜೀವ ಹಗುರಾಗುತ್ತದೆ. ಮನಸ್ಸು ಮೈಯ್ಯ ಭಾರವನ್ನು ಕೆಳಗಿಳಿಸಿ ಹೂವಿನಂತೆ ಅರಳುತ್ತದೆ. ಜೀವನ ಎಂದರೆ ಆಕಾಶ ಒತ್ತಡವೊಂದಿಲ್ಲದಿದ್ದರೆ ಅಲ್ಲಿ ಮನಸ್ಸಿಗೆ ಹಾರೋವಷ್ಟೂ ಅವಕಾಶ. ಏನಂತೀರಿ?

ಚಾಮುಂಡಿಬೆಟ್ಟದ ಮೆಟ್ಟಿಲು ಮಾರ್ಗದಲ್ಲಿ ದೀಪ, ನೀರು, ಶೌಚಾಲಯ ವ್ಯವಸ್ಥೆ ಕಲ್ಪಿಸಲು ಭಕ್ತಾದಿಗಳ ಮನವಿ







ಮೈಸೂರು, ಜು.3(ಎಸ್‌ಪಿಎನ್)– ಎರಡು ಆಷಾಢ ಶುಕ್ರವಾರ ಕಳೆದರೂ ಚಾಮುಂಡಿಬೆಟ್ಟದ ಮೆಟ್ಟಿಲು ಮಾರ್ಗದಲ್ಲಿ ವಿದ್ಯುತ್ ದೀಪ ಹಾಗೂ ಇತರೆ ಮೂಲ ಸೌಕರ್ಯ ಕಲ್ಪಿಸಲು ಮೈಸೂರು ಜಿಲ್ಲಾಡಳಿತ ಮನಸ್ಸು ಮಾಡಿಲ್ಲ ಎಂದು ಚಾಮುಂಡೇಶ್ವರಿ ಭಕ್ತಾದಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಚಾಮುಂಡಿಬೆಟ್ಟದ ಪಾದದಿಂದ ತುದಿಯವರೆಗೂ ಸಂಜೆ ಮತ್ತು ಮುಂಜಾನೆ ವೇಳೆ ಮಂದ ಬೆಳಕಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯುತ್ ದೀಪ ಅಳವಡಿಸುವಂತೆ ಹಲವು ಬಾರಿ ಮೈಸೂರು ಜಿಲ್ಲಾಡಳಿತಕ್ಕೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗೃಹಿಣಿ ಕುಸುಮಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

1008 ಮೆಟ್ಟಿಲುಗಳಲ್ಲಿ ಅಲ್ಲಲ್ಲಿ ಶೌಚಾಲಯ ವ್ಯವಸ್ಥೆ, ದೀಪದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ದೇವಸ್ಥಾನ ಆಡಳಿತ ಮಂಡಳಿ ಮತ್ತು ಜಿಲ್ಲಾಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಲಾಗಿತ್ತು. ಆದರೂ ವ್ಯವಸ್ಥೆ ಸುಧಾರಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆಷಾಢ ಮಾಸದಲ್ಲಿ ಮಹಿಳೆಯರು, ಯುವತಿಯರು, ಗಣ್ಯರು ವಿಶೇಷವಾಗಿ ಮೆಟ್ಟಿಲುಗಳನ್ನು ಬರಿಗಾಲಲ್ಲಿ ಹತ್ತಿ ಚಾಮುಂಡೇಶ್ವರಿ ದೇವಿಯ ಹರಕೆ ತೀರಿಸಲು ಹೊರ ಜಿಲ್ಲೆ, ಹೊರ ರಾಜ್ಯದಿಂದ ಆಗಮಿಸುತ್ತಾರೆ. ಇನ್ನು ಕೆಲವರು ತಮ್ಮ ಕಷ್ಟಗಳನ್ನು ನಿವಾರಿಸುವಂತೆ ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡು ದೇವಿ ಮೊರೆಹೊಕ್ಕು ಬೆಳಗಿನ ಜಾವ 4 ಗಂಟೆಯಿಂದಲೇ ಮೆಟ್ಟಿಲುಗಳಿಗೆ ಅರಿಸಿನ–ಕುಂಕುಮ ಹಚ್ಚಿ ದೇವಿಗೆ ಹರಕೆ ತೀರಿಸುತ್ತಾರೆ. ದೀಪದ ವ್ಯವಸ್ಥೆ ಇಲ್ಲದ ಕಾರಣ ತಮ್ಮ ಮೊಬೈಲ್ ಟಾರ್ಚ್ ಹಿಡಿದು ಸೇವೆ ಸಲ್ಲಿಸುವ ಪರಿಸ್ಥಿತಿ ಬಂದಿದೆ. ಬೆಳಕು ಕಲ್ಪಿಸುವಂತೆ ಮನವಿ ಮಾಡಿದರೂ ಜಿಲ್ಲಾಡಳಿತ ನಮ್ಮ ಮನವಿಗೆ ಕಿವಿಕೊಡುತ್ತಿಲ್ಲ ಎಂದು ಆರೋಪಿಸಿದರು.

ಕಳೆದ ಎರಡು ಆಷಾಢ ಶುಕ್ರವಾರದಂದು ಮುಂಜಾನೆಯೇ ಎದ್ದು, ಮೆಟ್ಟಿಲುಗಳಿಗೆ ಹರಕೆ ತೀರಿಸಲು ನಾವು ನಾಲ್ಕಾರು ಮಹಿಳೆಯರು ಚಾಮುಂಡಿ ಬೆಟ್ಟಕ್ಕೆ ಹೋಗಿದ್ದೆವು. ಆ ವೇಳೆ ಬೆಟ್ಟದಲ್ಲಿ ದೀಪ ವ್ಯವಸ್ಥೆ ಇಲ್ಲದ ಕಾರಣ ತೀವ್ರ ತೊಂದರೆಯಾಯಿತು. ಹಾಗಾಗಿ ಪ್ರತಿ ಬಾರಿ ಆಷಾಢ ಮಾಸದಲ್ಲಿ ಮಹಿಳೆಯರಿಗೆ ಅನುಕೂಲವಾಗುವಂತೆ ವಿದ್ಯುತ್ ದೀಪ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿದರು.

> ಕಳೆದ ಶುಕ್ರವಾರ ನಾನು ಮತ್ತು ನನ್ನ ಮಡದಿ ಚಾಮುಂಡಿಬೆಟ್ಟಕ್ಕೆ ಮೆಟ್ಟಿಲು ಮೂಲಕ ತೆರಳಲು ಬೆಳಗಿನ ಜಾವವೇ ಹೋಗಿದ್ದೆವು. ಆದರೆ, ಮೆಟ್ಟಿಲುಗಳ ಮಾರ್ಗದಲ್ಲಿ ವಿದ್ಯುತ್ ದೀಪ ವ್ಯವಸ್ಥೆ ಇಲ್ಲದ ಹಿನ್ನೆಲೆಯಲ್ಲಿ ತಮ್ಮ ಮೊಬೈಲ್ ಟಾರ್ಚ್ ಹಾಕಿಕೊಂಡು ಬೆಟ್ಟ ಹತ್ತಿದೆವು. ನಮ್ಮಂತೆ ಸಾವಿರಾರು ಮಹಿಳೆಯರು ಆಷಾಢ ಮಾಸದಲ್ಲಿ ಮೆಟ್ಟಿಲು ಮೂಲಕ ಹತ್ತಿ ಹರಕೆ ತೀರಿಸಲು ಅನಾನುಕೂಲವಾಗಿದೆ.
>
> –ಬಸವರಾಜು, ಅಂತರರಾಷ್ಟ್ರೀಯ ಹಿರಿಯ ಕ್ರೀಡಾಪಟು

ಸಂಸದ ಪ್ರಫುಲ್ ಪಟೇಲ್, ಸುನಿಲ್ ತಾತ್ಕರೆ ಎನ್‌ಸಿಪಿಯಿಂದ ವಜಾ

ಎನ್‌ಸಿಪಿ ನಾಯಕ ಶರದ್ ಪವಾರ್ ಘೋಷಣೆ

ಮುಂಬೈ: ಪಕ್ಷ ವಿರೋಧಿ ಚಟುವಟಿಕೆ ಆರೋಪದಡಿ ಸಂಸದರಾದ ಸುನಿಲ್ ತಾತ್ಕರೆ, ಪ್ರಫುಲ್ ಪಟೇಲ್ ಅವರ ಹೆಸರನ್ನು ಪಕ್ಷದ ಸಂಸದರ ಪಟ್ಟಿಯಿಂದ ತೆಗೆದುಹಾಕುವುದಾಗಿ ಪಕ್ಷದ ಮುಖಂಡ ಶರದ್ ಪವಾರ್ ಘೋಷಿಸಿದ್ದಾರೆ.

ಸಂಸದರನ್ನು ಅನರ್ಹಗೊಳಿಸುವಂತೆ ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಆಗ್ರಹಿಸಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಪಟೇಲ್, ಎನ್‌ಸಿಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಜಯಂತ್ ಪಾಟೀಲ್ ಬದಲು ತಾತ್ಕರೆ ಕಾರ್ಯನಿರ್ವಹಿಸಲಿದ್ದಾರೆ ಎಂದು ಹೇಳಿದ್ದಾರೆ.

ಮಹಾರಾಷ್ಟ್ರದ ಉಪಮುಖ್ಯಮಂತ್ರಿಯಾಗಿ ಭಾನುವಾರ ನಡೆದ ತಮ್ಮ ಸಂಬಂಧಿ ಅಜಿತ್ ಪವಾರ್ ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಿದ್ದಕ್ಕಾಗಿ ಮುಂಬೈ ವಿಭಾಗೀಯ ಎನ್‌ಸಿಪಿ ಮುಖ್ಯಸ್ಥ ನರೇಂದ್ರ ರಾಥೋಡ್, ಅಕೋಲಾ ನಗರ ಜಿಲ್ಲಾ ಮುಖ್ಯಸ್ಥ ವಿಜಯ್ ದೇಶಮುಖ್ ಮತ್ತು ರಾಜ್ಯ ಸಚಿವ ಶಿವಾಜಿರಾವ್ ಗರ್ಜೆ ಅವರನ್ನು ಶರದ್ ಪವಾರ್ ಇಂದು ಉಚ್ಚಾಟಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿಧಾನಪರಿಷತ್ ಸದಸ್ಯರಾಗಿ ಕಾಂಗ್ರೆಸ್‌ನ ಮೂವರು ಪ್ರಮಾಣವಚನ ಸ್ವೀಕಾರ



ಬೆಂಗಳೂರು: ನೂತನವಾಗಿ ಆಯ್ಕೆಯಾದ ವಿಧಾನಪರಿಷತ್ ಸದಸ್ಯರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಜಗದೀಶ್ ಶೆಟ್ಟರ್, ತಿಪ್ಪಣ್ಣಪ್ಪ ಕಮಕನೂರು, ಬೋಸರಾಜು ಅವರು ಪ್ರಮಾಣವಚನ ಸ್ವೀಕರಿಸಿದರು.

ಜಗದೀಶ ಶೆಟ್ಟರ್ ಮತ್ತು ಎನ್.ಎಸ್. ಬೋಸರಾಜು ಅವರು ಭಗವಂತನ ಹೆಸರಿನಲ್ಲಿ ಹಾಗೂ ತಿಪ್ಪಣ್ಣಪ್ಪ ಕಮಕನೂರು ಅವರು ಯಾನಾಗುಂದಿ ಮಾತಾ ಮಾಣಿಕೇಶ್ವರಿ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಬಳಿಕ ನೂತನ ವಿಧಾನಪರಿಷತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದನೆ ಸಲ್ಲಿಸಿ, ಶುಭ ಹಾರೈಸಿದರು.

ಅಪಘಾತ ತಡೆಗೆ ಸೂಕ್ತ ಪರಿಹಾರ ಕ್ರಮ ಕೈಗೊಳ್ಳುವಂತೆ ಡಿಸಿ ಸಲಹೆ

ಮೈಸೂರು, ಜು.3(ಎಸ್‌ಬಿಡಿ)– ಅಪಘಾತಗಳಿಗೆ ಕಾರಣ ಗುರುತಿಸಿ, ಸೂಕ್ತ ಪರಿಹಾರ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಹೆಚ್ಚು ಅಪಘಾತಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಸಿದ ಅವರು, ಅಪಘಾತ ತಪ್ಪಿಸುವ ನಿಟ್ಟಿನಲ್ಲಿ ಅಗತ್ಯ ಸಲಹೆ–ಸೂಚನೆ ನೀಡಿದರು.

ಅಪಘಾತಕ್ಕೆ ಚಾಲಕರ ಅಜಾಗರೂಕತೆ ಜೊತೆಗೆ ಇನ್ನಿತರ ಕಾರಣಗಳನ್ನು ಗುರುತಿಸಿ, ಆ ಸಂಬಂಧ ಪರಿಶೀಲನೆ ಹಾಗೂ ಪರಾಮರ್ಶೆ ನಡೆಸಬೇಕು. ಅಗತ್ಯ ಕ್ರಮಗಳ ಮೂಲಕ ಭೀಕರ ಅಪಘಾತಗಳನ್ನು ತಪ್ಪಿಸಿ, ಸಾವು, ನೋವು ಕಡಿಮೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದರು.

ಹೆಲ್ಮೆಟ್ ರಹಿತ ದ್ವಿಚಕ್ರ ವಾಹನ ಚಾಲನೆ, ಕಾರು ಚಾಲನೆ ಮಾಡುವಾಗ ಸೀಟ್ ಬೆಲ್ಟ್ ಅಳವಡಿಸಿಕೊಳ್ಳದಿರುವುದು, ಅಜಾಗರೂಕ ಹಾಗೂ ಅತೀ ವೇಗದ ಚಾಲನೆ, ಮದ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುವುದು, ಸಂಚಾರಿ ನಿಯಮಗಳನ್ನು ಪರಿಪಾಲಿಸದೆ ನಿರ್ಲಕ್ಷಿಸುವುದು ಅಪಘಾತಕ್ಕೆ ಕಾರಣವಾಗುತ್ತವೆ. ಜೊತೆಗೆ ರಸ್ತೆ ಸುಸ್ಥಿತಿಯಲ್ಲಿ ಇಲ್ಲದಿದ್ದರೂ ಅಪಘಾತಗಳಾಗುತ್ತವೆ. ಈ ಬಗ್ಗೆ ಚಾಲಕರು ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಜೆ.ಪಿ.ನಗರದ ದೊಡ್ಡ ಆಲದಮರ, ಜೆಎಲ್‌ಬಿ ರಸ್ತೆ ಜಂಕ್ಷನ್, ವರಕೂಡು ಗೇಟ್, ಮೈಸೂರು–ಹುಣಸೂರು ರಸ್ತೆ ಹಿನಕಲ್ ಜಂಕ್ಷನ್, ಬಂಡಿಪಾಳ್ಯ, ನಂಜನಗೂಡು ಎಪಿಎಂಸಿ ಜಂಕ್ಷನ್‌ಗಳಲ್ಲಿ ಕಳೆದ ಫೆಬ್ರವರಿಯಿಂದ ಮೇ ತಿಂಗಳವರೆಗೆ ಅತೀ ಹೆಚ್ಚು ಅಪಘಾತಗಳಾಗಿರುವುದರಿಂದ ಬ್ಲಾಕ್‌ಸ್ಪಾಟ್‌ಗಳಾಗಿ ಗುರುತಿಸಲಾಗಿದೆ. ಇತರೆ ಅಪಘಾತ ವಲಯಗಳನ್ನು ಗುರುತಿಸಿ, ಅಲ್ಲಿ ಎಚ್ಚರಿಕೆ ಬೋರ್ಡ್‌ಗಳನ್ನು ಅಳವಡಿಸಬೇಕು. ಇಂತಹ ಸ್ಥಳಗಳಲ್ಲಿ ಚಾಲಕರು ತೀವ್ರ ನಿಗಾ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಲಹೆ ನೀಡಿದರು.

ದೊಡ್ಡ ವಾಹನಗಳನ್ನು ಚಾಲನೆ ಮಾಡುವವರು ಸಣ್ಣ ವಾಹನಗಳ ಸಂಚಾರಕ್ಕೆ ದಾರಿ ನೀಡಬೇಕು. ಸಣ್ಣ ವಾಹನಗಳಿಗೆ ಡಿಕ್ಕಿಯಾದರೆ ನಮಗೇನು ಆಗುವುದಿಲ್ಲ ಎನ್ನುವ ಧೋರಣೆ ಇರಕೂಡದು. ಮೈಸೂರಿನಿಂದ ಹಾಸನ, ಮಡಿಕೇರಿ ಇನ್ನಿತರ ಮಾರ್ಗಗಳಿಗೆ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಮೆಟ್ರೋಪೋಲ್ ಸಿಗ್ನಲ್ ಬಳಿಯೇ ನಿಲುಗಡೆ ಮಾಡುತ್ತಾರೆ. ತಿರುವು ಇರುವುದರಿಂದ ಸಂಚಾರಕ್ಕೆ ಅಡ್ಡಿಯಾಗುವುದರ ಜೊತೆಗೆ ಹಿಂದಿನಿಂದ ಬರುವ ವಾಹನಗಳು ಡಿಕ್ಕಿಯಾಗಬಹುದು. ಹಾಗಾಗಿ ಸಿಗ್ನಲ್‌ನಿಂದ ಸ್ವಲ್ಪ ದೂರದಲ್ಲಿ ನಿಲುಗಡೆ ನೀಡಬೇಕು. ಆ ಸ್ಥಳದಲ್ಲಿ ಸಿಬ್ಬಂದಿಯನ್ನು ನಿಯೋಜಿಸಿ, ಸೂಕ್ತ ನಿರ್ದೇಶನ ನೀಡಬೇಕೆಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗೆ ಸೂಚನೆ ನೀಡಿದರು. ಸಭೆಯಲ್ಲಿ ನಗರ ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ರಾಜು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ತಿಂಗಳಲ್ಲಿ 39 ಅಪಘಾತ; 43 ಮಂದಿ ಸಾವು

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಮೇ ತಿಂಗಳಲ್ಲೇ 39 ಅಪಘಾತಗಳು ಸಂಭವಿಸಿದ್ದು, 43 ಜನ ಮೃತಪಟ್ಟಿದ್ದಾರೆ. ಕೆಲ ಕೆಎಸ್‌ಆರ್‌ಟಿಸಿ ಬಸ್ ಚಾಲಕರು ರ್‍ಯಾಶ್ ಡ್ರೈವಿಂಗ್ ಮಾಡುತ್ತಾರೆ. ಈ ಕಾರಣದಿಂದಲೇ 10 ಅಪಘಾತಗಳು ಸಂಭವಿಸಿದ್ದು, 8 ಮಂದಿ ಸಾವನ್ನಪ್ಪಿದ್ದಾರೆ. ಹಾಗಾಗಿ ಅಜಾಗರೂಕತೆಯಿಂದ ಅತೀ ವೇಗವಾಗಿ ಚಾಲನೆ ಮಾಡುವ ಚಾಲಕರನ್ನು ಗುರುತಿಸಿ, ಅವರಿಗೆ ಸೂಕ್ತ ತರಬೇತಿ, ಸಮಾಲೋಚನೆ ಜೊತೆಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಸಭೆಯಲ್ಲಿ ತಿಳಿಸಿದರು.

ಗುರು ಪೂರ್ಣಿಮೆಯಂದು ಯೋಗ ಗುರುಗಳಿಗೆ ಸನ್ಮಾನ

ಮೈಸೂರು,ಜು.3(ಎಸ್‌ಪಿಎನ್)– ಯೋಗ ವಿಶ್ವವ್ಯಾಪ್ತಿಯಾಗಲು ಮೈಸೂರು ಯೋಗ ಪಟುಗಳ ಕೊಡುಗೆಯೂ ಸೇರಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್ ಅಭಿಪ್ರಾಯಪಟ್ಟರು.

ಮೈಸೂರಿನ ಅಗ್ರಹಾರದ ನಮೋ ಯೋಗಭವನದಲ್ಲಿ ವಿವಿಧ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದ್ದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತೀಯ ಪರಂಪರೆಯಲ್ಲಿ ಯೋಗಕ್ಕೆ ಮಹತ್ವದ ಸ್ಥಾನವಿದೆ. ಆದರೆ, ಇದಕ್ಕೆ ವಿಶ್ವ ಮಟ್ಟದಲ್ಲಿ ಗೌರವ ದೊರೆತಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕಾಲಾವಧಿಯಲ್ಲಿ ಎಂದರೆ ತಪ್ಪಾಗಲಾರದು. ಗುರುಪೂರ್ಣಿಮೆಯಂದು ಹಲವು ಮಂದಿ ಯೋಗಗುರುಗಳನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ನಂತರ ಮೈಸೂರು ವಿವಿ ಸಿಂಡಿಕೇಟ್ ಸದಸ್ಯೆ ಡಾ.ಯಶಸ್ವಿನಿ ಜಗದೀಶ್ ಮಾತನಾಡಿ, ಇಂದು ದೇಶಾದ್ಯಂತ ಗುರು ಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ. ಈ ದಿನವನ್ನು ನಾವು ನಮ್ಮನ್ನು ತಿದ್ದಿ–ತಿಡಿ ಬುದ್ಧಿ ಕಲಿಸಿದ ಗುರುಗಳಿಗೆ ಸಮರ್ಪಿಸಲಾಗಿದೆ. ಓರ್ವ ವಿದ್ಯಾರ್ಥಿಯನ್ನು ಅಜ್ಞಾನದಿಂದ ಜ್ಞಾನದೆಡೆ ಕೊಂಡೊಯ್ಯುವ ದಾರಿ ದೀಪವೇ ಗುರು. ನಮ್ಮ ಜೀವನಕ್ಕೆ ದಾರಿ ತೋರುವ ಗುರುಗಳಿಗೆ ನಮನ ಸಲ್ಲಿಸುವುದಕ್ಕಾಗಿಯೇ ಪ್ರತಿ ವರ್ಷ ಆಷಾಢ ಮಾಸದಲ್ಲಿ ಗುರು ಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಭಾರತೀಯ ಪರಂಪರೆಯಲ್ಲಿ ಗುರುವಿಗೆ ಮಹತ್ವದ ಸ್ಥಾನವಿದೆ. ಗುರು ತನ್ನ ವಿದ್ಯಾರ್ಥಿಗಳನ್ನು ತಿದ್ದಿ, ಬುದ್ಧಿ ಕಲಿಸುವ ಮಾರ್ಗದರ್ಶಕ ಎಂದರು.

ಓರ್ವ ವಿದ್ಯಾರ್ಥಿಗೆ ತಂದೆ–ತಾಯಿಯನ್ನು ಬಿಟ್ಟರೆ, ಅತಿ ಹೆಚ್ಚು ಪ್ರೀತಿಸುವ, ವಿದ್ಯಾರ್ಥಿಗಳ ಏಳಿಗೆಯನ್ನು ಸಂಭ್ರಮಿಸುವ ವ್ಯಕ್ತಿಯೆಂದರೆ ಅದುವೇ ಗುರು. ಹಾಗಾಗಿ ಗುರುವಿಗೆ ಸಮಾಜದಲ್ಲಿ ಮಹತ್ವದ ಸ್ಥಾನವಿದೆ ಎಂದು ಗುರು ಪರಂಪರೆ ಬಗ್ಗೆ ವಿವರವಾಗಿ ತಿಳಿಸಿದರು.

ಅಭಿನಂದನೆ: ಈ ವೇಳೆ ಮೈಸೂರು ಯೋಗ ಪರಂಪರೆಯ ಯೋಗಾಚಾರ್ಯ ಎಸ್.ವಿ.ವೆಂಕಟೇಶಯ್ಯ, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ.ಜಿಲೇಂದ್ರಕುಮಾರ್, ವಿವೇಕಾನಂದ ಯೋಗ ಮತ್ತು ಸ್ಪೋರ್ಟ್ಸ್ ಅಸೋಸಿಯೇಷನ್ ಸಂಸ್ಥಾಪಕ ಪಿ.ಎನ್. ಗಣೇಶ್‌ಕುಮಾರ್, ಯೋಗ ಮತ್ತು ವೇದ ಶಿಕ್ಷಕಿ ಎಸ್.ರೂಪ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ನೃತ್ಯ ಕಲಾವಿದೆ ಶೀಲಾ ಶ್ರೀಧರ್, ಮಹಾನಗರ ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗ ಪ್ರಕಾಶ್, ಕಾರ್ಯದರ್ಶಿ ಎಸ್.ಸೇತುರಾಮ್ ಉಪಸ್ಥಿತರಿದ್ದರು.



ಮೈಸೂರು ಯದುವಂಶದ ರಾಜಗುರುಗಳಾದ ಪರಕಾಲ ಮಠದ ಶ್ರೀ ಅಭಿನವ ವಾಗೀಶ ಬ್ರಹ್ಮ ತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ 32ನೇ ಚಾತುರ್ಮಾಸ್ಯ ಸಂಕಲ್ಪ ಮೈಸೂರಿನ ಶ್ರೀ ಮಠದಲ್ಲಿ ಭಕ್ತರ ಸಮ್ಮುಖದಲ್ಲಿ ನಡೆಯಿತು.

ಮಾನವ ಸಂಪನ್ಮೂಲ ಸದ್ಬಳಕೆಯಾದರೆ ಭಾರತ 'ಸೂಪರ್‌ಪವರ್' ರಾಷ್ಟ್ರವಾಗಲಿದೆ

ಎನ್‌ಆರ್‌ಆರ್‌ಎ ಸಿಇಓ ಅಶೋಕ್ ದಳವಾಯ್ ಅಭಿಮತ



ಮೈಸೂರು, ಜು.3 (ಆರ್‌ಕೆ)– ನಮ್ಮಲ್ಲಿರುವ ಮಾನವ ಸಂಪನ್ಮೂಲವನ್ನು ಸದ್ಬಳಕೆ ಮಾಡಿಕೊಂಡಲ್ಲಿ ಭಾರತವೂ ಸೂಪರ್ ಪವರ್ ರಾಷ್ಟ್ರಗಳಲ್ಲೊಂದಾಗಲಿದೆ ಎಂದು ಎನ್‌ಆರ್‌ಆರ್‌ಎ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಶೋಕ್ ದಳವಾಯ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಏರ್ಪಡಿಸಿದ್ದ 'one week- one lab' ಆಹಾರ ಸಂಶೋಧನೆ ಕುರಿತ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನೈಸರ್ಗಿಕ ಸಂಪನ್ಮೂಲ ಬಳಕೆ ನಿಟ್ಟಿನಲ್ಲಿ ಮಾನವ ಸಂಪನ್ಮೂಲ ಹೇಗೆ ಬಳಸಿಕೊಳ್ಳಬೇಕು ಎಂದು ತಿಳಿದುಕೊಂಡಲ್ಲಿ ಭಾರತವು ಪ್ರಪಂಚದ ಸೂಪರ್‌ಪವರ್ ರಾಷ್ಟ್ರಗಳಲ್ಲೊಂದಾಗಲಿದೆ ಎಂದರು.

ಮಾನವ ಸಂಪನ್ಮೂಲ ಬಳಕೆಯಿಂದ ದೇಶದ ಅಭಿವೃದ್ಧಿ ಸಾಧ್ಯ ಎಂಬುದು ಸಾಬೀತಾಗಿದ್ದರೂ, ಇಚ್ಛಾಶಕ್ತಿ ಕೊರತೆಯಿಂದಾಗಿ ಅದರ ಪ್ರಯೋಜನವಾಗುತ್ತಿಲ್ಲ ಎಂದ ಅವರು, ಕೃಷಿ ಕ್ಷೇತ್ರ ಸೇರಿದಂತೆ ಕಾರ್ಮಿಕರನ್ನು ಎಲ್ಲಾ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಕೃಷಿಯೇತರ ಕ್ಷೇತ್ರಗಳಿಗೂ ಕಾರ್ಮಿಕರ ಶ್ರಮ ವರ್ಗಾವಣೆಯಾಗಬೇಕು. ವಿಜ್ಞಾನವು ಅನ್ವೇಷಣೆ, ಸಂಶೋಧನೆಗಷ್ಟೇ ಮೀಸಲಾಗಿದೆ. ಅದನ್ನು ತಂತ್ರಜ್ಞಾನಕ್ಕೆ ಪರಿವರ್ತಿಸಿದಲ್ಲಿ ಅದು ಇನೋವೇಟರ್ ಪ್ರಾಕ್ಟೀಸ್‌ಗೆ ಪೂರಕವಾಗಲಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, ಮೈಸೂರು ಕೇವಲ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಚಟುವಟಿಕೆಗಷ್ಟೇ ಪ್ರಸಿದ್ಧಿಯಾಗಿಲ್ಲ. ಬದಲಾಗಿ ಇಲ್ಲಿನ ಪಾರಂಪರಿಕತೆ ಹಾಗೂ ಔದ್ಯಮಿಕ ಅನ್ವೇಷಣೆಗೂ ಕೊಡುಗೆ ನೀಡುತ್ತಾ ಬಂದಿದೆ ಎಂದರು.

ಭದ್ರಾವತಿ ಸ್ಟೀಲ್ ವರ್ಕ್ಸ್, ಮೈಸೂರು ಸ್ಯಾಂಡಲ್‌ನಂತಹ ಹಲವು ಉದ್ದಿಮೆಗಳನ್ನು ಪ್ರೋತ್ಸಾಹಿಸಿ ಯುವ ಉದ್ದಿಮೆದಾರರ ಸ್ಫೂರ್ತಿಗೆ ಒತ್ತಾಸೆಯಾಗಿ ನಿಲ್ಲುವ ಅಗತ್ಯವಿದೆ ಎಂದು ಅವರು ಇದೇ ಸಂದರ್ಭ ಅಭಿಪ್ರಾಯಪಟ್ಟರು. ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್, ಡಾ.ಎಸ್.ಆರ್. ಭೌಮಿಕ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಾಮಾಜಿಕ ಚಿಂತಕ ಪ್ರೊ.ಪಟ್ಟಾಭಿರಾಮ ಸೋಮಯಾಜಿಯವರಿಗೆ ಶ್ರದ್ಧಾಂಜಲಿ



ಮೈಸೂರು, ಜು.3(ಎಸ್‌ಬಿಡಿ)– ಇತ್ತೀಚೆಗೆ ನಿಧನರಾದ ಸಾಮಾಜಿಕ ಚಿಂತಕ, ಮಂಗಳೂರಿನ ಪ್ರೊ.ಪಟ್ಟಾಭಿರಾಮ ಸೋಮಯಾಜಿ ಅವರಿಗೆ ಮೈಸೂರಿನ ಸುರುಚಿ ರಂಗಮಂದಿರದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಅಪರಾಜಿತ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅನೇಕ ಚಿಂತಕರು, ಲೇಖಕರು ಭಾಗವಹಿಸಿ ಪಟ್ಟಾಭಿರಾಮ ಅವರ ಹೋರಾಟವನ್ನು ಸ್ಮರಿಸಿಕೊಂಡರು.

ಜನಪರ ವಿಚಾರಗಳ ಬಗ್ಗೆ ಒಲವಿದ್ದ ಪಟ್ಟಾಭಿರಾಮ ಸೋಮಯಾಜಿ, ಸಮಾಜದ ಆರೋಗ್ಯದ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಇನ್ನೂ ಬಹಳಷ್ಟು ಕೆಲಸಗಳು ಅವರಿಂದ ಆಗಬೇಕಿತ್ತು ಇದು ಅತ್ಯಂತ ತುರ್ತಿನ ಕಾಲವಾಗಿತ್ತು. ಸ್ಪಷ್ಟ ನಿಲುವಿನ ಆ ವ್ಯಕ್ತಿ ಸಮಾಜಕ್ಕೆ ಅಗತ್ಯವಾಗಿದ್ದರು. ಅವರ ಅಗಲಿಕೆ ಸಮಾಜಕ್ಕೆ ದೊಡ್ಡ ನಷ್ಟ, ಜನಪರ ಹೋರಾಟಗಳಲ್ಲಿ ತೊಡಗಿಸಿಕೊಳ್ಳುವ ನಾವು, ಆರೋಗ್ಯದತ್ತಲೂ ಗಮನ ಹರಿಸಬೇಕೆಂದು ಪಟ್ಟಾಭಿರಾಮ ಅವರ ಅಗಲಿಕೆ ಎಚ್ಚರಿಕೆ ನೀಡಿದೆ ಎಂದು ಚಿಂತಕ ಕಾಳೇಗೌಡ ನಾಗವಾರ ತಿಳಿಸಿದರು.


ಸಾಹಿತಿ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾಗಿದ್ದ ಪಟ್ಟಾಭಿರಾಮ ಸೋಮಯಾಜಿ ಸೈದ್ಧಾಂತಿಕ ಸ್ಪಷ್ಟತೆಯನ್ನೂ ಹೊಂದಿದ್ದರು. ಎಲ್ಲರಿಗೂ ಒಳ್ಳೆಯದಾಗಲಿ ಎನ್ನುವವರು ಒಂಟಿಯಾಗುವ ಸಾಧ್ಯತೆಯೇ ಹೆಚ್ಚು ಎಂದು ವಿಷಾದಿಸಿದರಲ್ಲದೆ, ಪಟ್ಟಾಭಿಯವರ ಕವಿತೆ ಸಾಲುಗಳನ್ನು ವಾಚಿಸಿದರು.

ರಂಗಕರ್ಮಿ ಜನಾರ್ಧನ ಜನ್ನಿ ಮಾತನಾಡಿ, ಪಟ್ಟಾಭಿಯವರು ಜನರ ಕಷ್ಟ, ದುಃಖಗಳಿಗೆ ಸ್ಪಂದಿಸುತ್ತಿದ್ದರು. ಅವರ ಮಾತು, ಕೃತಿಗಳೂ ಇದನ್ನೇ ಹೇಳುತ್ತಿದ್ದವು. ಅವರೊಬ್ಬ ಜೀವಪರ ವ್ಯಕ್ತಿ ಎಂದರು. ಲೇಖಕಿ ಪ್ರೊ.ಚ.ಸರ್ವಮಂಗಳ, ಚಿಂತಕಿ ಮೀನಾ ಮೈಸೂರು, ಪಟ್ಟಾಭಿ ಅವರೊಂದಿಗಿನ ಒಡನಾಟ ನೆನೆದು ಭಾವುಕರಾದರು.

ಪತ್ರಕರ್ತ ಜಿ.ಪಿ.ಬಸವರಾಜು, ರಂಗಕರ್ಮಿ ರಾಮೇಶ್ವರಿ ವರ್ಮಾ, ಲೇಖಕಿ ಪದ್ಮಾ ಶ್ರೀರಾಮ, ರಂಗಕರ್ಮಿ ಮೀರಾ ಮೂರ್ತಿ, ಲೇಖಕರಾದ ವಿಕ್ರಂ ರಾಜೇ ಅರಸ್, ಪದ್ಮಶ್ರೀರಾಮ್, ನಿರಂತರ ಶ್ರೀನಿವಾಸ್ ಮತ್ತಿತರರು ಭಾಗವಹಿಸಿ, ಪಟ್ಟಾಭಿರಾಮ ಅವರಿಗೆ ಶ್ರದ್ಧಾಂಜಲಿ ಸಮರ್ಪಿಸಿದರು. ಮಂಗಳೂರು ವಿವಿ ಕಾಲೇಜಿನ ನಿವೃತ್ತ ಉಪನ್ಯಾಸಕ, ಲೇಖಕ, ಚಿಂತಕ ಪ್ರೊ.ಪಟ್ಟಾಭಿರಾಮ ಸೋಮಯಾಜಿ (64), ಕೋಮು ಸೌಹಾರ್ದ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದರು. ಮಂಗಳೂರಿನಲ್ಲಿ ಒಂಟಿಯಾಗಿ ನೆಲೆಸಿದ್ದ ಇವರು ಜು.1ರಂದು ನಿಧನರಾದರು.

ಹಿಂದೂಗಳಲ್ಲಿ ಇನ್ನು ಮೌಢ್ಯಾಚರಣೆ ಮನೆ ಮಾಡಿದೆ

ಮಾಜಿ ಮೇಯರ್ ಪುರುಷೋತ್ತಮ್ ವಿಷಾದ



ಮೈಸೂರು,ಜು.3(ಸಿಎನ್)–ಭಾರತದ ಬಹುಸಂಖ್ಯಾತ ಹಿಂದೂಗಳಲ್ಲಿ ಇಂದಿಗೂ ಮೌಢ್ಯಾಚರಣೆ ಜೀವಂತವಾಗಿದೆ. ಮೌಢ್ಯದ ವಿರುದ್ಧ ದನಿ ಎತ್ತುವ ಅಗತ್ಯವಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಅಭಿಪ್ರಾಯಪಟ್ಟರು.

ನಗರದ ವಿಶ್ವ ಮೈತ್ರಿ ಬುದ್ಧವಿಹಾರ ಸಭಾಂಗಣದಲ್ಲಿ, ತನುಮನ ಸಂಸ್ಥೆ ಮೈಸೂರು ಸಹಯೋಗದಲ್ಲಿ ಸೋಮವಾರ ಆಯೋಜಿಸಲಾಗಿದ್ದ 'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮವನ್ನು ಬುದ್ಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿ ತಿಂಗಳಿಗೊಮ್ಮೆ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುತ್ತೇವೆ. ಆದರೆ ಈ ದಿನ ಕಾರ್ಯಕ್ರಮ ತುಂಬಾ ವಿಶೇಷವಾಗಿದೆ. ದೇಶಾದ್ಯಂತ ಗುರುಪೂರ್ಣಿಮೆಯನ್ನು ಧಮ್ಮ ಚಕ್ಕ ಪವಿತ್ರ ದಿನವೆಂದು ಆಚರಿಸಲಾಗುತ್ತದೆ. ಸುಮಾರು 2500 ವರ್ಷಗಳ ಹಿಂದೆ ಭಗವಾನ್ ಬುದ್ಧರು ಪಾದಯಾತ್ರೆ ಮೂಲಕ ತಮ್ಮ ಐವರು ಶಿಷ್ಯರಿಗೆ, ಕಾಶಿಯ ಬುದ್ಧ ವಿಹಾರದಲ್ಲಿ ಬೌದ್ಧ ದೀಕ್ಷೆ ನೀಡಿ, ಜಗತ್ತಿಗೆ ಧಮ್ಮ ವಿಸ್ತರಿಸಿದ ಸುದಿನವಾಗಿದೆ ಎಂದರು.

ಹಿಂದೂಗಳಿಗೆ ಆಷಾಢ ಮಾಸದಲ್ಲಿ ಬರುವ ಗುರುಪೂರ್ಣಿಮೆ ನಿರ್ದಿಷ್ಟ ದಿನ ಮಾತ್ರ ಶ್ರೇಷ್ಠವಾಗಿರುತ್ತದೆ. ಆದರೆ ಧಮ್ಮವು ಈ ಮಾಸದಲ್ಲೇ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮೌಢ್ಯದ ವಿರುದ್ಧ ಧ್ವನಿ ಎತ್ತುವ ಕೆಲಸದಲ್ಲಿ ತೊಡಗಿದೆ ಎಂದು ಹೇಳಿದರು.

ಇತಿಹಾಸದಲ್ಲಿ ಇಲ್ಲದೇ ಇರುವಂತಹ ವಿಚಾರಗಳನ್ನ ಸುಖಾಸುಮ್ಮನೆ ಬೇರೊಬ್ಬರ ಮೇಲೆ ಹೇರುವಂತಹ ಕೆಲಸವನ್ನು ನಾವೆಲ್ಲರೂ ಮಾಡಿದ್ದೇವೆ. ಸನಾತನ ಧರ್ಮವೆಂದು ಕರೆಯಲ್ಪಡುವ ಹಿಂದೂ ಧರ್ಮದಲ್ಲಿ ಇಂದಿಗೂ ಮೌಢ್ಯಾಚರಣೆ ಪ್ರಚಲಿತದಲ್ಲಿದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಆಷಾಢ ಮಾಸ. ಈ ತಿಂಗಳಲ್ಲಿ ಯಾವುದೇ ಶುಭ ಕಾರ್ಯಗಳನ್ನು ಹಿಂದೂಗಳು ಕೈಗೊಳ್ಳುವುದಿಲ್ಲ. ಆದರೆ ಧಮ್ಮದವರು ಈ ದಿನವನ್ನು ಸಂಭ್ರಮದಿಂದ ಆಚರಿಸುತ್ತೇವೆ ಎಂದರು.

ಹುಣ್ಣಿಮೆ, ಅಮಾವಾಸ್ಯೆ ದಿನಗಳಿಗೆ ಅದರದೇ ಆದ ಶ್ರೇಷ್ಠತೆ ಇದೆ. ಆದರೆ ಈ ದಿನಗಳು ಬಂದರೆ ಬಹುಸಂಖ್ಯಾತರು ಹೆದರುತ್ತಾರೆ. ಮನೆಗಳಿಂದ ಆಚೆಯೇ ಬರಲ್ಲ. ಇಂದಿಗೂ ಈ ಪದ್ಧತಿ ಜೀವಂತವಾಗಿರುವುದು ಮೌಢ್ಯದ ಪರಮಾವಧಿ ಎಂದರು.

ಈ ವೇಳೆ ಗಾಯಕ ಲಕ್ಷ್ಮಿರಾಮ್ ತಂಡದಿಂದ ಡಾ.ಅಂಬೇಡ್ಕರ್ ಹಾಗೂ ಬುದ್ಧರ ಜೀವನಾಧಾರಿತ ಗೀತೆಗಳನ್ನು ಹಾಡುವ ಮೂಲಕ ಸ್ಮರಿಸಲಾಯಿತು. ವಕೀಲ ಪಿ.ಪಿ ಬಾಬುರಾಜ್, ಕೌಶಲ್ಯಾಭಿವೃದ್ಧಿ ಇಲಾಖೆ ಅಭಿಯಾನ ವ್ಯವಸ್ಥಾಪಕ ಡಾ.ಎಸ್. ನಂಜುಂಡಸ್ವಾಮಿ, ರಾಜ್ಯ ಹಣಕಾಸು ಸಂಸ್ಥೆ ಉಪವ್ಯವಸ್ಥಾಪಕಿ ಜೆಪುಟ್ಟಮ್ಮಣಿ, ಬಿ.ಡಿ.ಎಂ.ಕುಮಾರ್, ಉಪನ್ಯಾಸಕಿ ಜ್ಯೋತಿ ಉಪಸ್ಥಿತರಿದ್ದರು.

ನಾಡಪ್ರಭು ಕೆಂಪೇಗೌಡರ ಜಯಂತಿ



ಮೈಸೂರು, ಜು.3(ಎಸ್‌ಬಿಡಿ)– ಮೈಸೂರಿನ ಪಡುವಾರಹಳ್ಳಿ ಸ್ನೇಹ ಬಳಗದ ವತಿಯಿಂದ ನಾಡಪ್ರಭು ಕೆಂಪೇಗೌಡರ 514ನೇ ಜಯಂತಿ ಆಚರಿಸಲಾಯಿತು.

ಪಡುವಾರಹಳ್ಳಿ ವಾಲ್ಮೀಕಿ ರಸ್ತೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಈ ಸಂಧರ್ಭದಲ್ಲಿ ಮೈಮುಲ್ ಮಾಜಿ ಅದ್ಯಕ್ಷ ಕೆ.ಉಮಾಶಂಕರ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕ ವೆಂಕಟು, ಒಂಟಿಕೊಪ್ಪಲ್ ಕ್ಲಬ್ ಉಪಾಧ್ಯಕ್ಷ ಪಿ.ವಿ.ಸೋಪಾನ ದೇವ್, ಎನ್.ಬೆಟ್ಟೇಗೌಡ, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ಈ.ಬಸವರಾಜು, ಕಾಳೇಗೌಡರ ಕೃಷ್ಣ, ಬಸವರಾಜು, ರಾಮಚಂದ್ರ, ಮಹಾಜನ ರಮೇಶ್, ಗೋಕುಲಂ ಪ್ರಕಾಶ್, ಹೇಮಂತ್ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಉಚಿತ ಭಾಗ್ಯದ ಎದುರು ನಮ್ಮೆಲ್ಲಾ ಕೆಲಸ ಕೊಚ್ಚಿ ಹೋಯ್ತು

ಮೌನ ಮುರಿದ ಜೆ.ಸಿ.ಮಾಧುಸ್ವಾಮಿ



ತುಮಕೂರು: ಚುನಾವಣೆ ಮುಗಿದ ಬಳಿಕ ಮೊದಲ ಬಾರಿ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಮೌನ ಮುರಿದಿದ್ದಾರೆ. ಚಿಕ್ಕನಾಯಕನಹಳ್ಳಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಬೇಸರ ವ್ಯಕ್ತಪಡಿಸಿದ ಮಾಧುಸ್ವಾಮಿ, ಕೆಲಸ ಮಾಡಿದ್ದಕ್ಕೆ ಪ್ರತಿಫಲ ಕೊಡುತ್ತಾರೆ ಎಂದುಕೊಂಡಿದ್ದೆ, ಆದರೆ ಜನ ಕಡೆಗಣಿಸಿದ್ದಾರೆ ಎಂದಿದ್ದಾರೆ.

ಕೆಲಸ ಮಾಡಿದ್ದಕ್ಕೆ ಪ್ರತಿಫಲ ಸಿಗದೇ ಇರೋದು ಕೇವಲ ಚಿಕ್ಕನಾಯಕನಹಳ್ಳಿಗೆ ಮಾತ್ರ ಸೀಮಿತವಲ್ಲ, ಇಡೀ ರಾಜ್ಯದಲ್ಲಿ ನನ್ನಂತೆ ಕೆಲಸ ಮಾಡಿದ ಹಲವು ನಾಯಕರು ಸೋತಿದ್ದಾರೆ. ಯಾಕೆಂದರೆ ಜನರಿಗೆ ಊರಿನ ಕೆಲಸ, ಕ್ಷೇತ್ರದ ತಮ್ಮ ಕೆಲಸ ಅನಿಸಲೇ ಇಲ್ಲ, ಅವರು ಕೊಡುವ ಅಕ್ಕಿ, ಅವರು ಕೊಡುವ ದುಡ್ಡೇ ಶ್ರೇಷ್ಠ ಅನಿಸಿತು. ಅವರ ಉಚಿತ ಭಾಗ್ಯಗಳ ಮುಂದೆ ನಮ್ಮ ಎಲ್ಲಾ ಕೆಲಸ ಕೊಚ್ಚಿಕೊಂಡು ಹೋಯಿತು ಎಂದರು.

ನಾವ್ರ ಯಾವ ನೀರು ಕುಡಿದಿದ್ದಿವಿ, ಯಾವ ರಸ್ತೆಯಲ್ಲಿ ಓಡಾಡುತ್ತಿದ್ದೀವಿ ಅನ್ನೋದನ್ನು ಜನರು ಮರೆತರು, ಇದೇ ರೀತಿ ಉಚಿತ ಭಾಗ್ಯ ಮುಂದುವರೆದರೆ ಮುಂದೆ ಚುನಾವಣೆ ಮಾಡೋದು ತುಂಬಾ ಕಷ್ಟವಾಗುತ್ತದೆ. ತೆರಿಗೆದಾರರ ದುಡ್ಡನ್ನು ನಮಗೆ ಇಷ್ಟ ಬಂದಹಾಗೆ ಮನೆಯಲ್ಲಿ ಕುಂತವರಿಗೆ ಇಷ್ಟ ಬಂದಹಾಗೆ ಹಂಚುತ್ತೇನೆ ಎಂದರೆ ರಾಜ್ಯದ ಪರಿಸ್ಥಿತಿ ಏನಾಗಬೇಡ, ಕೆಲ ವಿದ್ಯಾವಂತ ಉದ್ಯೋಗಸ್ಥ ಯುವಕರು ನನ್ನ ಬಳಿ ಬಂದು ಕೇಳಿದ್ರು. ನಾವು ತೆರಿಗೆ ಕಟ್ಟೋರು ಉಚಿತ ಭಾಗ್ಯದ ವಿರುದ್ಧ ಹೋರಾಟ ಮಾಡಿದ್ರೆ ಮಾತ್ರ ಇದು ನಿಲ್ಲಬಹುದೇನೋ ಎಂದು ಚರ್ಚೆ ಮಾಡಿದ್ರು.

ಈಗ ಮೋದಿ ಅಕ್ಕಿ ಕೊಟ್ಟಿಲ್ಲ ಎಂದು ದೂಷಿಸುತ್ತಾರೆ. ನಾವೂ ಕೂಡ ರಾಜ್ಯದಲ್ಲಿ ಕನಿಷ್ಠ 7 ಕೆ.ಜಿ.ಅಕ್ಕಿ ಕೊಡಬೇಕು ಎಂದು 10 ಬಾರಿ ಪ್ರಯತ್ನ ಪಟ್ಟಿದ್ದೇವೆ. ಆದರೆ ಹೆಚ್ಚುವರಿ ಅಕ್ಕಿ ಕೊಡಲು ಮೋದಿ ಒಪ್ಪಿಲ್ಲ, ಬಿಜೆಪಿ ಆಡಳಿತದ ಸಮಯದಲ್ಲೂ ರಾಜ್ಯಕ್ಕೂ ಕೇಂದ್ರ ಹೆಚ್ಚುವರಿ ಅಕ್ಕಿ ಕೊಟ್ಟಿಲ್ಲ, ಆಹಾರ ಭದ್ರತಾ ಕಾಯಿದೆ ಪ್ರಕಾರ ಒಬ್ಬರಿಗೆ ದಿನಕ್ಕೆ 150–200 ಗ್ರಾಂ ಅಕ್ಕಿ ಸಾಕು ಎಂದು ವೈಜ್ಞಾನಿಕವಾಗಿ ಅಂದಾಜಿಸಲಾಗಿದೆ. ಈ ಆಧಾರದ ಮೇಲೆ ತಿಂಗಳಿಗೆ 5 ಕೆಜಿ. ಅಕ್ಕಿ ಕೊಡಲಾಗುತ್ತಿದೆ. ನಮ್ಮಲ್ಲಿರುವ ಅಕ್ಕಿ ಬರಗಾಲ, ಅತಿವೃಷ್ಟಿ ಸಂಕಷ್ಟ ಕಾಲದಲ್ಲಿ ಕೊಡಲು ಇಡಲಾಗಿದೆ. ನಮ್ಮಲ್ಲಿ ಅಕ್ಕಿ ಇದೆ ಎಂದೇಳಿ ಬೇಕಾಬಿಟ್ಟಿ ಹಂಚೋಕಾಗುತ್ತಾ? ಎಂದರು.

ನಿಧನ

ಬಸಪ್ಪ



ಮೈಸೂರು, ಜು. 3– ಮೈಸೂರಿನ ಜಯನಗರ–ಕನ್ನೇಗೌಡನ ಕೊಪ್ಪಲು ನಿವಾಸಿ ಬಸಪ್ಪ(75) ಅವರು ಸೋಮವಾರ ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಜು.4) ಬೆಳಗ್ಗೆ 11 ಗಂಟೆಗೆ ಕೆಜಿ ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸತ್ಯಸಂಕಲ್ಪ ತೀರ್ಥರ ಆರಾಧನಾ ಮಹೋತ್ಸವ

ಉತ್ತರಾದಿ ಮಠದಲ್ಲಿ ಭಾರೀ ಭಕ್ತರ ಸಂಗಮ

ಮೈಸೂರು: ಗುರುಗಳ ಕೃಪೆ ಇದ್ದರೆ ಶಿಷ್ಯರು ಜಗ ಮೆಚ್ಚುವ ಸಾಧನೆಗಳನ್ನು ಮಾಡಲು ಸಾಧ್ಯ ಎಂದು ಪಂಡಿತ ಸತ್ಯಬೋಧಾಚಾರ್ಯ ಹೇಳಿದರು.

ನಗರದ ಅಗ್ರಹಾರದಲ್ಲಿರುವ ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀ ಉತ್ತರಾದಿ ಮಠದಲ್ಲಿ ಸೋಮವಾರ ಶ್ರೀ ಸತ್ಯಸಂಕಲ್ಪ ತೀರ್ಥರ 181ನೇ ವರ್ಷದ ಆರಾಧನಾ ಮಹೋತ್ಸವದ ನಿಮಿತ್ತ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಉಪನ್ಯಾಸ ನೀಡಿದರು.

ಮಳಖೇಡದ ಶ್ರೀ ಜಯತೀರ್ಥರು (ಟೀಕಾಚಾರ್ಯರ) ರಚಿಸಿದ ಮಹತ್ತರವಾದ ಕೃತಿ ತತ್ವೋದ್ಯೋತ ಟೀಕಾ ಗ್ರಂಥಕ್ಕೆ 'ದ್ವೈತ ದ್ಯುಮಣಿ' ಕೃತಿಯು ಸಮರ್ಥವಾದ ವ್ಯಾಖ್ಯಾನ ನೀಡಿದೆ. ಹುಲಿಗಿಯ ಖ್ಯಾತ ವಿದ್ವಾಂಸ ಶ್ರೀಂಯುಪತ್ಯಾಚಾರ್ಯರು ಟೀಕಾಚಾರ್ಯರ ಗ್ರಂಥಗಳಿಗೆ ವ್ಯಾಖ್ಯಾನ ಬರೆಯಲು ಪ್ರಾರಂಭಿಸಿದರೂ ಆ ಕಾರ್ಯಕ್ಕೆ ನೂರೆಂಟು ವಿಘ್ನಗಳು ಬರುತ್ತಿದ್ದವು. ಆಗ ಅವರು ಶ್ರೀ ಸತ್ಯಸಂಕಲ್ಪ ತೀರ್ಥರ ಮಂತ್ರಾಕ್ಷತೆ, ಆಶೀರ್ವಾದ ಪಡೆದರು.

ಪವಾಡ ಎಂಬಂತೆ ಗ್ರಂಥರಚನೆ ಸಾಂಗವಾಗಿ ಸಾಗಿತು. ಗುರುಗಳ ಪರಮ ಅನುಗ್ರಹ ಇದ್ದರೆ ಎಂಥಾ ಸಾಧನೆಯೂ ಸಾಂಗವಾಗಿ ಸಾಗುತ್ತದೆ ಎಂಬುದನ್ನು ಶ್ರೀಂಯುಪತ್ಯಾಚಾರ್ಯರೇ ಗ್ರಂಥದ ಕೊನೆಯಲ್ಲಿ ಹೇಳಿಕೊಂಡಿದ್ದಾರೆ. ಅತ್ಯಂತ ಕಠಿಣವೂ, ವಾಕ್ಯಾರ್ಥ ಮಾಡಿದಷ್ಟೂ ವಿಸ್ತಾರವೂ ಆಗುವ ಮಹತ್ತರ ಕೃತಿ 'ದ್ವೈತ ದ್ಯುಮಣಿ' ಬಗ್ಗೆ ಇನ್ನಷ್ಟು ಅಧ್ಯಯನಗಳು ನಡೆಯಬೇಕು ಎಂದು ಆಶಿಸಿದರು.

ಮೋಕ್ಷಕ್ಕೆ ಸಾಧನ: ಜ್ಞಾನದ ಸೇವೆ ಎಂಬುದು ಮೋಕ್ಷಕ್ಕೆ ಬಹುದೊಡ್ಡ ಸಾಧನ. ಇದು ಅಷ್ಟು ಸುಲಭಕ್ಕೆ ಒಲಿಯುವುದಿಲ್ಲ. ಸತತ ಪರಿಶ್ರಮ, ನಿರಂತರ ಅಧ್ಯಯನದೊಂದಿಗೆ ಗುರುವಿನ ಕಾರುಣ್ಯವೂ ಬೇಕು. ಹಾಗಿದ್ದಾಗ ಮಾತ್ರ ವೇದಾಂತ ಶಾಸ್ತ್ರದ ಮೌಲಿಕ ಕೃತಿಗಳು ರಚನೆಯಾಗುತ್ತವೆ. ಗುರುಗಳ ಆರಾಧನೆ ಸಂದರ್ಭ ಇಂಥ ಮಹತ್ವದ ವಿಚಾರಸಂಕಿರಣಗಳು ನಡೆಯುತ್ತಿರುವುದು ಜ್ಞಾನಪ್ರಸಾರದಲ್ಲಿ ಮೈಲಿಗಲ್ಲಾಗುತ್ತವೆ ಎಂದು ಸತ್ಯಬೋಧಾಚಾರ್ಯರು ಹೇಳಿದರು.

ಶಾಸ್ತ್ರ ಅಧ್ಯಯನಕಾರ ವಿಜಯಾನಂದ ಮಾತನಾಡಿ, ಸತ್ಯ ಸಂಕಲ್ಪ ತೀರ್ಥರ ಆರಾಧನೆ ಎಂದರೆ ಭಕುತಗಣಕ್ಕೆ ಒಂದು ಸಂಭ್ರಮ. ಈ ಸಂದರ್ಭ ಶಾಸ್ತ್ರಗಳ ವಿಚಾರ ಮಂಥನ ಆಗುತ್ತಿರುವುದು ಶ್ಲಾಘನೀಯ ಎಂದರು. ಪಂಡಿತರಾದ ಸರ್ವಜ್ಞ ಆಚಾರ್ಯ, ಯದುನಂದನಾಚಾರ್ಯ ಶ್ರೀ ರಂಗಂ ಪ್ರೌಢ ವಿಷಯ ಮಂಡಿಸಿದರು. ಬೆಂಗಳೂರಿನ ಶ್ರೀ ಜಯತೀರ್ಥ ವಿದ್ಯಾಪೀಠದ ಪ್ರಾಚಾರ್ಯ ಸತ್ಯಧ್ಯಾನಾಚಾರ್ಯ ಕಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪಂಡಿತರಾದ ಅನಿರುದ್ಧಾಚಾರ್ಯ, ಗೋವಿಂದಾಚಾರ್ಯ ಹಾಜರಿದ್ದರು.

ಆರಾಧನೋತ್ಸವ ಅಂಗವಾಗಿ ಶ್ರೀ ಸತ್ಯಸಂಕಲ್ಪ ತೀರ್ಥರ ಮೂಲ ವೃಂದಾವನಕ್ಕೆ ವಿಶೇಷ ಪಂಚಾಮೃತ ಅಭಿಷೇಕ, ಅಲಂಕಾರ, ಪೂಜೆ ಮತ್ತು ಮಹಾ ನೈವೇದ್ಯ ಸಮರ್ಪಣೆಗೊಂಡವು. ಸಂಜೆ 6ಕ್ಕೆ ಪಲ್ಲಕ್ಕಿ ಉತ್ಸವ ನಡೆಯಿತು. ನೂರಾರು ಭಕ್ತರು ಇದಕ್ಕೆ ಸಾಕ್ಷಿಯಾದರು.



ಶ್ರೀ ಸತ್ಯಸಂಕಲ್ಪ ತೀರ್ಥರ ಆರಾಧನೋತ್ಸವ ಅಂಗವಾಗಿ ಪಂಡಿತ ಸತ್ಯಬೋಧಾಚಾರ್ಯ 'ದ್ವೈತ ದ್ಯುಮಣಿ' ಗ್ರಂಥದ ಬಗ್ಗೆ ವಿಷಯ ಮಂಡಿಸಿದರು.



ಮೈಸೂರಿನ ಅಗ್ರಹಾರದ ಶ್ರೀ ಉತ್ತರಾದಿ ಮಠದಲ್ಲಿರುವ ಶ್ರೀ ಸತ್ಯಸಂಕಲ್ಪ ತೀರ್ಥರ ಮೂಲ ವೃಂದಾವನಕ್ಕೆ ವಿಶೇಷ ಅಲಂಕಾರ.

ಉತ್ತರ ಆರಾಧನೆ

ಮಂಗಳವಾರ ಶ್ರೀ ಸತ್ಯಸಂಕಲ್ಪ ತೀರ್ಥರ ಉತ್ತರ ಆರಾಧನೆ ನಿಮಿತ್ತ ಮಠದಲ್ಲಿ ಬೆಳಗ್ಗೆ 6ರಿಂದ ಮಧ್ಯಾಹ್ನ 12ರವರೆಗೆ ವಿಶೇಷ ಪೂಜೆ, ಸಂಜೆ 6ಕ್ಕೆ ಉತ್ಸವಾದಿಗಳು ನಡೆಯಲಿವೆ.

ಬಿಟ್ ಕಾಯಿನ್ ಹಗರಣಕ್ಕೆ ಮರು ಜೀವ

ಎಸ್‌ಐಟಿ ತನಿಖೆಗೆ ಆದೇಶ

ಬೆಂಗಳೂರು: ಬಿಟ್ ಕಾಯಿನ್ ಹಗರಣಕ್ಕೆ ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಮರುಜೀವ ಸಿಕ್ಕಂತಾಗಿದೆ. ರಾಜ್ಯ ಸರ್ಕಾರ ಬಿಟ್ ಕಾಯಿನ್ ಹಗರಣ ಬಗ್ಗೆ ವಿಶೇಷ ತನಿಖಾ ತಂಡದಿಂದ ಮರು ತನಿಖೆಗೆ ಆದೇಶ ನೀಡಿದೆ.

ಪ್ರಕರಣದ ಮೊದಲ ಹಂತವಾಗಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ್ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ ಬರೆದಿದ್ದರು. ಬಳಿಕ ಅಲೋಕ್ ಮೋಹನ್ ಪತ್ರದ ಮೂಲಕ ಸರ್ಕಾರಕ್ಕೆ ಮಾಹಿತಿ ನೀಡಿದ್ದಾರೆ. ಇದಾದ ಬಳಿಕ ಸರ್ಕಾರ ಮರು ತನಿಖೆಗೆ ಆಗ್ರಹಿಸಿದೆ.

ಎಡಿಜಿಪಿ ಮನೀಶ್ ಕರ್ಬಿಕರ್ ತನಿಖೆ ನೇತೃತ್ವ ವಹಿಸಲಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ನಾವು ಹಿಂದೆ ಬಿಜೆಪಿ ಸರ್ಕಾರದ ಬಿಟ್ ಕಾಯಿನ್ ವಿಚಾರದಲ್ಲಿ ಲಕ್ಷಾಂತರ ಕೋಟಿ ರೂ. ಹಗರಣವಾಗಿದ್ದ ಬಗ್ಗೆ ಆರೋಪ ಮಾಡಿದ್ದೆವು. ಇದೀಗ ಬಿಟ್ ಕಾಯಿನ್ ಪ್ರಕರಣ ಮರು ತನಿಖೆಗೆ ಆದೇಶಿಸಿದ್ದೇವೆ ಎಂದರು. ಸಿಐಡಿ ಅಡಿಯಲ್ಲಿ SIT ರಚನೆ ಮಾಡಿದ್ದೇನೆ. ಸರ್ಕಾರದ ರಿಲೇಟೆಡ್ ಆದೇಶಗಳನ್ನು ಮಾಡುತ್ತೇವೆ ಎಂದರು.

ಇಂದು ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ



ಮಂಡ್ಯ, ಜು.3– ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯ ಸ್ವಾಮಿ ಜು.4 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 9 ಗಂಟೆಗೆ ನಾಗಮಂಗಲಕ್ಕೆ ಆಗಮಿಸುವ ಅವರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ಸಂಜೆ 6 ಗಂಟೆಗೆ ರಸ್ತೆ ಮೂಲಕ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಬಾಬುಜಗಜೀವನ ರಾಂ 37ನೇ ಪುಣ್ಯತಿಥಿ



ಮಂಡ್ಯ, ಜು.3– ಹಸಿರು ಕ್ರಾಂತಿ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಂ ಅವರ 37ನೇ ಪುಣ್ಯತಿಥಿಯನ್ನು ಜು.6 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಉದ್ಯಾನವನದ ಪ್ರತಿಮೆ ಬಳಿ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು, ಅಧಿಕಾರಿಗಳು/ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮುಂಖಡರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ, ಜು.3– ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 2023–24ನೇ ಸಾಲಿಗೆ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಸಹಕಾರ ಬ್ಯಾಂಕುಗಳು ಮತ್ತು ಸಹಕಾರ ಸಂಘಗಳ ಮೂಲಕ ಶೂನ್ಯ ಹಾಗೂ ಶೇ.3 ರ ಬಡ್ಡಿ ದರದಲ್ಲಿ ಸಾಲ ಹಾಗೂ ಸಹಕಾರ ಬ್ಯಾಂಕುಗಳು/ಸಹಕಾರ ಸಂಘಗಳ ಮುಖಾಂತರ ನೇಕಾರಿಕೆ ಉದ್ದೇಶಕ್ಕಾಗಿ ಸಾಲ–ಸೌಲಭ್ಯ ಪಡೆಯುವ ಅವಕಾಶವಿರುತ್ತದೆ. ಆಸಕ್ತ ಅರ್ಹ ಕೈಮಗ್ಗ/ವಿದ್ಯುತ್ ಮಗ್ಗ ನೇಕಾರರು Online ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ದೂ: 08232–222366 ಸಂಪರ್ಕಿಸಿ.

ಕಾರೇಕುರದಲ್ಲಿ ಗ್ರಾಮಸ್ಥರ ಮೇಲೆ ಗುಂಪು ಹಲ್ಲೆ

ದೂರು–ಪ್ರತಿದೂರು ದಾಖಲು, ಪೊಲೀಸ್ ಠಾಣೆ, ತಹಸೀಲ್ದಾರ್ ಕಚೇರಿಗೆ ಗ್ರಾಮಸ್ಥರ ಮುತ್ತಿಗೆ



ಶ್ರೀರಂಗಪಟ್ಟಣ, ಜು.3– ತಾಲೂಕಿನ ಕಾರೇಕುರ ಗ್ರಾಮದ ಕಾವೇರಿ ನದಿ ತೀರದಲ್ಲಿ ಗುಂಪೊಂದು ಭಾನುವಾರ ಮಧ್ಯಾಹ್ನ ಮೋಜು– ಮಸ್ತಿಗಾಗಿ ಆಗಮಿಸಿ ವಾಪಸ್ ತೆರಳುವ ವೇಳೆ ಗ್ರಾಮಸ್ಥರ ಮೇಲೆ ಹಲ್ಲೆ ಮಾಡಿರುವ ಆರೋಪ ಕೇಳಿ ಬಂದಿದ್ದು, ಪೊಲೀಸರು ದೂರು, ಪ್ರತಿದೂರು ದಾಖಲಿಸಿಕೊಂಡಿದ್ದಾರೆ.

ಪ್ರಕರಣ ಸಂಬಂಧ ಪೊಲೀಸರು ಮಧ್ಯರಾತ್ರಿ ಗ್ರಾಮಕ್ಕೆ ಬಂದು ವಿಚಾರಣೆಗಾಗಿ ಕೆಲವರನ್ನು ವಶಕ್ಕೆ ಪಡೆದ ಹಿನ್ನಲೆಯಲ್ಲಿ ಗ್ರಾಮಸ್ಥರು ಸೋಮವಾರ ಬೆಳಗ್ಗೆ ಶ್ರೀರಂಗಪಟ್ಟಣ ಟೌನ್ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಗ್ರಾಮಸ್ಥರಿಗೆ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಹಾಗೂ ಹಿಂದೂಪರ ಸಂಘಟನೆಗಳು ಬೆಂಬಲ ನೀಡಿದವು.

ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಂಚಾಲಕ ಚಂದನ್ ಮಾತನಾಡಿ, ಕಾರೇಕುರ ಗ್ರಾಮಕ್ಕೆ ಗುಂಪೊಂದು ಮೋಜು–ಮಸ್ತಿಗಾಗಿ ಬಂದು ರೈತರ ಜಮೀನಿನಲ್ಲಿ ದಾಂಧಲೆ ನಡೆಸಿದ್ದನ್ನು ಪ್ರಶ್ನಿಸಿದ ಗ್ರಾಮಸ್ಥರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ ಗ್ರಾಮಸ್ಥರ ಮೇಲೆಯೇ ಪೊಲೀಸರಿಗೆ ದೂರು ನೀಡಲಾಗಿದೆ. ಗ್ರಾಮಸ್ಥರನ್ನು ರಾತ್ರಿಯೇ ಠಾಣೆಗೆ ಕರೆತಂದಿರುವುದು ಅಕ್ಷಮ್ಯ ಅಪರಾಧ. ಪೊಲೀಸರು ಪ್ರಭಾವಕ್ಕೆ ಒಳಗಾಗಿ ಏಕಪಕ್ಷೀಯವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಪಂ ಸದಸ್ಯ ಮುರಳೀಧರ್ ಮಾತನಾಡಿ, ಕಾರೇಕುರ ಗ್ರಾಮದ ನದಿ ತೀರದಲ್ಲಿ ನಿರಂತರವಾಗಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿವೆ. ಇಲ್ಲಿ ಪ್ರತಿನಿತ್ಯ ಮಾದಕ ವಸ್ತುಗಳ ಸೇವಿಸುವುದು, ಮದ್ಯಪಾನ ಮಾಡಿ ಖಾಲಿ ಬಾಟಲ್‌ಗಳನ್ನು ರೈತರ ಜಮೀನಿಗೆ ಬಿಸಾಡುವುದು, ಮಹಿಳೆಯರ ಜೊತೆ ಅಸಭ್ಯವಾಗಿ ನಡೆದುಕೊಳ್ಳುತ್ತಿದ್ದಾರೆ. ಈ ಸಂಬಂಧ ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆಗೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ಗ್ರಾಮಸ್ಥರು ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ವಹಿಸುತ್ತಿಲ್ಲ. ಈ ಹಿಂದೆ ತಹಸೀಲ್ದಾರರು ನಿಷೇಧಿತ ಪ್ರದೇಶ ಎಂದು ಘೋಷಣೆ ಮಾಡಿ 144 ಸೆಕ್ಷನ್ ಜಾರಿಗೊಳಿಸಿದ್ದರೂ ಇಲ್ಲಿಯವರೆಗೆ ಪೊಲೀಸ್ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ವಹಿಸದ ಕಾರಣ ಕಾರೇಕುರ ಗ್ರಾಮದಲ್ಲಿ ನಿತ್ಯ ಅಹಿತಕರ ಘಟನೆಗಳು ನಡೆಯುತ್ತಲೇ ಇದ್ದು, ಗ್ರಾಮಸ್ಥರು ಇದರಿಂದ ರೋಸಿ ಹೋಗಿದ್ದಾರೆ. ಕಾರೇಕುರ ರಸ್ತೆಯಲ್ಲಿ ಮಕ್ಕಳು ಹಾಗೂ ಮಹಿಳೆಯರು ಓಡಾಡಲು ಭಯದ ವಾತಾವರಣವಿದ್ದು, ಪೊಲೀಸರು ಇನ್ನು ಮುಂದಾದರೂ ಕ್ರಮ ವಹಿಸುವಂತೆ ಆಗ್ರಹಿಸಿದರು.

ಡಿವೈಎಸ್‌ಪಿ ಮುರಳೀಧರ್ ಮಾತನಾಡಿ, ಕಾರೇಕುರದಲ್ಲಿ ನಡೆದ ಪ್ರಕರಣ ಸಂಬಂಧ ನಿನ್ನೆಯೇ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ಸಂಬಂಧ ದೂರು ನೀಡಿರುವುದರಿಂದ ಗ್ರಾಮದ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದೇವೆ. ಗ್ರಾಮಸ್ಥರು ಸಹ ಪ್ರತಿ ದೂರು ನೀಡಿದ್ದಾರೆ. ಅದನ್ನು ಸಹ ವಿಚಾರಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಈಗಾಗಲೇ ಕಾರೇಕುರ ಗ್ರಾಮಕ್ಕೆ ಬ್ಯಾರಿಕೇಡ್‌ಗಳನ್ನು ಕಳುಹಿಸಿದ್ದು, ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಕಾವೇರಿ ನದಿ ತೀರದಲ್ಲಿ ಮೋಜು– ಮಸ್ತಿ ಸೇರಿದಂತೆ ಇತರೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲಾಗುವುದು ಎಂದು ಗ್ರಾಮಸ್ಥರನ್ನು ಸಮಾಧಾನ ಪಡಿಸಿದರು.

ಗ್ರಾಮಸ್ಥರು ಹಾಗೂ ಹಿಂದೂಪರ ಸಂಘಟನೆಗಳು ತಹಸೀಲ್ದಾರ್ ಕಚೇರಿಗೂ ಮುತ್ತಿಗೆ ಹಾಕಿ ಅಲ್ಲಿಯೂ ಸಹ ಕೆಲ ಕಾಲ ಪ್ರತಿಭಟನೆ ನಡೆಸಿದರು. ಈ ವೇಳೆ ದೂರವಾಣಿಯಲ್ಲಿ ಪ್ರತಿಭಟನಾಕಾರರೊಂದಿಗೆ ಮಾತನಾಡಿದ ತಹಸೀಲ್ದಾರ್ ಅಶ್ವಿನಿ, ಕಾರೇಕುರ ಗ್ರಾಮದ ಕಾವೇರಿ ನದಿ ತೀರದ ಸುತ್ತಮುತ್ತ ಈಗಾಗಲೇ 144 ಸೆಕ್ಷನ್ ಜಾರಿಯಲ್ಲಿದ್ದು, ಅಂತಹ ಸ್ಥಳಗಳಿಗೆ ಅತಿಕ್ರಮಿಸುವುದು ಅಪರಾಧವಾಗಿದ್ದು, ಮಂಗಳವಾರ ಪೊಲೀಸ್ ಅಧಿಕಾರಿಗಳ ಸಭೆ ಕರೆದು ಸೂಕ್ತ ಕ್ರಮ ವಹಿಸುವುದಾಗಿ ಭರವಸೆ ನೀಡಿದ ಹಿನ್ನಲೆಯಲ್ಲಿ ಪ್ರತಿಭಟನೆ ಹಿಂಪಡೆದರು.

ಹೇಮಗಿರಿ ಬಿಜಿಎಸ್‌ನಲ್ಲಿ ಗುರು ಪೂರ್ಣಿಮೆ ಆಚರಣೆ



ಕೆ.ಆರ್.ಪೇಟೆ, ಜು.3– ಗುರು ಜ್ಞಾನ ದೀವಿಗೆ ಹಿಡಿದು ಅಜ್ಞಾನದ ಅಂಧಕಾರ ತೆಗೆಯುವ ದಾರಿದೀಪ. ವಿದ್ಯಾರ್ಥಿಗಳು ಗುರುವಿನ ಜ್ಞಾನವನ್ನು ಶ್ರದ್ಧೆಯಿಂದ ಆಲಿಸಬೇಕು ಎಂದು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಅಶೋಕ್ ಕುಮಾರ್ ತಿಳಿಸಿದರು.

ಹೇಮಗಿರಿ ಬಿಜಿಎಸ್ ಶಾಖಾ ಮಠದ ಪ್ರಧಾನ ಕಾರ್ಯದರ್ಶಿ ಡಾ.ಜೆ.ಎನ್. ರಾಮಕೃಷ್ಣೇಗೌಡರ ಮಾರ್ಗದರ್ಶನ ಮೇರೆಗೆ ತಾಲೂಕಿನ ಹೇಮಗಿರಿ ಬಿಜಿಎಸ್ ಎಜುಕೇಶನ್ ಸೆಂಟರ್‌ನಲ್ಲಿ ನಡೆದ ಗುರು ಪೂರ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜ್ಞಾನ ವೃದ್ಧಿಗೆ ಗುರುವಿನ ಮಾರ್ಗದರ್ಶನ ಬೇಕು. ಸಂಸ್ಕಾರ ನಡೆನುಡಿ ತತ್ವಗಳ ಪ್ರತೀಕವೇ ಗುರು. ಜ್ಞಾನ ಸಂಗ್ರಹಕ್ಕೆ ಗುರುಕುಲ ಮಾರ್ಗದರ್ಶನ ನೀಡುತ್ತದೆ. ಆದರೆ ಸಂಗ್ರಹಿಸುವ ಗುಣ ವಿದ್ಯಾರ್ಥಿಗಳಲ್ಲಿರಬೇಕು. ಅದಕ್ಕಾಗಿ ಶೋಧನೆ ಅಗತ್ಯ. ನಾವು ನಿಷ್ಠೆ, ಆತ್ಮವಿಶ್ವಾಸದಿಂದ ಕಲಿಯುವ ವಿದ್ಯಾರ್ಥಿಗಳಾಗೋಣ. ಪ್ರಯತ್ನದ ಮೂಲಕ ಜ್ಞಾನ ಸಂಗ್ರಹ ಮಾಡುವುದೇ ನಿಜವಾದ ಶಿಷ್ಯತ್ವ ಎಂದು ಗುರುಪೂರ್ಣಿಮೆಯ ಮಹತ್ವ ತಿಳಿಸಿದರು. ಇದೇ ವೇಳೆ ಶಾಲಾವರಣದಲ್ಲಿರುವ ಅಕ್ಷರಸಂತ, ಪದ್ಮಭೂಷಣ ಶ್ರೀಬಾಲ ಗಂಗಾಧರನಾಥ ಸ್ವಾಮೀಜಿ ಅವರ ಪುತ್ಥಳಿಗೆ ಮುಂಜಾನೆಯೇ ರುದ್ರಾಭಿಷೇಕ, ಕ್ಷೀರಾಭಿಷೇಕ, ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ವೇಳೆ ಬಂಡಿಹೊಳೆ ಗ್ರಾಪಂ ಅಧ್ಯಕ್ಷ ದರ್ಶನ್, ಗ್ರಾಪಂ ಸದಸ್ಯ ಅಗ್ರಹಾರಬಾಚಹಳ್ಳಿ ಶ್ರೀನಿವಾಸ್, ಹಿರಿಯ ಪತ್ರಕರ್ತ ಮಹೇಶ್, ಪ್ರಾಂಶುಪಾಲ ಆನಂದ್, ರವಿ ಸೇರಿದಂತೆ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

ಇಂಡುವಾಳು ಸರ್ಕಾರಿ ಶಾಲೆ ಮಕ್ಕಳಿಂದ ಪ್ರತಿಭಟನೆ



ಮಂಡ್ಯ, ಜು.3– ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತಾಲೂಕಿನ ಇಂಡುವಾಳು ಸರ್ಕಾರಿ ಪ್ರಾಥಮಿಕ ಶಾಲೆಯ ಕಾಂಪೌಂಡ್ ತೆರವುಗೊಳಿಸಿದ ಹಿನ್ನಲೆಯಲ್ಲಿ ಪರಿಹಾರವಾಗಿ ಶಾಲೆಗೆ 8 ಲಕ್ಷ ರೂ. ನೀಡಿ ಒಂದು ವರ್ಷ ಕಳೆದರೂ, ಕಾಂಪೌಂಡ್ ಕಟ್ಟಿಸದ ಇಲಾಖೆ ವಿರುದ್ಧ ಶಾಲಾಭಿವೃದ್ಧಿ ಮಂಡಳಿ ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಶಾಲೆಗೆ ಕಾಂಪೌಂಡ್ ಇಲ್ಲದಿರುವುದರಿಂದ ಮಕ್ಕಳನ್ನು ಪ್ರಾರ್ಥನೆ ಅಥವಾ ಆಟ ವಾಡಲು ಮೈದಾನಕ್ಕಿಳಿಸಲು ಭಯವಾಗುತ್ತದೆ. ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೇ ಶಾಲೆ ಇರುವುದರಿಂದ ವೇಗವಾಗಿ ವಾಹನಗಳು ಸಂಚರಿಸುತ್ತವೆ. ಮಕ್ಕಳು ರಸ್ತೆ ಬಳಿಗೆ ಹೋದರೆ ಸಮಸ್ಯೆಯಾಗುತ್ತದೆ ಎಂಬ ಆತಂಕ ನಮ್ಮಲ್ಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೆಲವು ವಾಹನಗಳು ನಿಯಂತ್ರಣ ತಪ್ಪಿ ಶಾಲಾ ಮೈದಾನದವರೆಗೆ ಬಂದ ಉದಾಹರಣೆಗಳಿವೆ. ಇದರಿಂದ ಮಕ್ಕಳಿಗೆ ಹೆಚ್ಚು–ಕಡಿಮೆಯಾದರೆ ಯಾರು ಹೊಣೆ. ಪೋಷಕರು ಸಹ ಆತಂಕದಿಂದಲೇ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದು, ಶಾಲಾ ಮಕ್ಕಳ ಹಿತದೃಷ್ಟಿಯಿಂದ ಬೇಗ ಕಾಂಪೌಂಡ್ ಕಟ್ಟಿಸಿಕೊಡಬೇಕೆಂದು ಆಗ್ರಹಿಸಿದರು.

ವಿಷಯ ತಿಳಿದು ಶಾಲೆಗೆ ಆಗಮಿಸಿದ ಬಿಇಓ ಉದಯ್ ಕುಮಾರ್ ಇನ್ನೆರಡು ವಾರದಲ್ಲಿ ಶಾಲೆಗೆ ಬೇಕಾಗಿರುವ ಮೂಲ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸೋಮಶೇಖರ್, ಜಿಲ್ಲಾ ರೈತ ಸಂಘದ ಅಧ್ಯಕ್ಷ ಚಂದ್ರಶೇಖರ್, ಎಸ್‌ಡಿಎಂಸಿ ಸದಸ್ಯರಾದ ರಘು, ಚೈತ್ರ, ಅಂಜಲಿ, ರೈತ ಮುಖಂಡರಾದ ಸಿದ್ದೇ ಗೌಡ, ಬಸವರಾಜು ಉಪಸ್ಥಿತರಿದ್ದರು.

ಅಂಚೆ ಸೇವೆ: ಸಮಯ ವಿಸ್ತರಣೆ

ಮಂಡ್ಯ ಜು.3– ಭಾರತೀಯ ಅಂಚೆ ಇಲಾಖೆಯಲ್ಲಿ ಸಂಜೆ 6 ರಿಂದ ರಾತ್ರಿ 8 ರವರೆಗೆ ಇದ್ದ ತ್ವರಿತ ಅಂಚೆ ಸೇವೆ ಹಾಗೂ ನೊಂದಾಯಿತ ಅಂಚೆ ಸೇವೆವನ್ನು ಅಂಚೆ ಗ್ರಾಹಕರ ಅನುಕೂಲಕ್ಕಾಗಿ ಸಂಜೆ 5:45ರಿಂದ ರಾತ್ರಿ 9 ಗಂಟೆವರೆಗೆ ಸಮಯವನ್ನು ವಿಸ್ತರಿಸಿದೆ.

ಮಂಡ್ಯ ವಿವಿ ರಸ್ತೆಯಲ್ಲಿರುವ ಎಸ್.ಬಿ.ಐ ಶಾಖೆಯ ಹತ್ತಿರದಲ್ಲಿರುವ ಹಾಗೂ ಮಂಡ್ಯ ಹೆಡ್ ಪೋಸ್ಟ್ ಆಫೀಸ್ ಹಿಂಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿರುವ ಕೌಂಟರ್‌ನಲ್ಲಿ ಪ್ರಸಕ್ತ ತ್ವರಿತ ಅಂಚೆಸೇವೆ ಹಾಗೂ ನೊಂದಾಯಿತ ಅಂಚೆಸೇವೆಯು ಲಭ್ಯವಿದೆ. ಮಂಡ್ಯ ನಗರ ಹಾಗೂ ಸುತ್ತಮುತ್ತಲಿನ ಗ್ರಾಹಕರು ಈ ಸೇವೆಯ ಸದುಪಯೋಗ ಪಡಿಸಿಕೊಳ್ಳಬೇಕೆಂದು ಮಂಗಳೂರು ವಿಭಾಗದ ಆರ್.ಎಂ.ಎಸ್ ಕ್ಯೂ ವಿಭಾಗದ ಅಧೀಕ್ಷಕರಾದ ರವೀಂದ್ರ ನಾಯ್ಕ ಎಂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಡಿಎಸ್ ಮುಖಂಡ ರಾಮಚಂದ್ರರಿಂದ ಕೃತಜ್ಞತೆ



ಮಂಡ್ಯ ಜು.3– ತಾಲೂಕಿನ ಕಟ್ಟೆದೊಡ್ಡಿ ಗ್ರಾಮಕ್ಕೆ ಜೆಡಿಎಸ್ ಪರಾಜಿತ ಅಭ್ಯರ್ಥಿ, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ ಭೇಟಿ ನೀಡಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು. ಶ್ರೀಶಂಭು ಸೇವಾ ಟ್ರಸ್ಟ್ ವತಿಯಿಂದ ಕಟ್ಟೆದೊಡ್ಡಿಯ ಪ್ರತಿ ಮನೆಗೆ ಹಾಟ್‌ಬಾಕ್ಸ್ ವಿತರಿಸುವ ಮೂಲಕ ಧನ್ಯವಾದ ತಿಳಿಸಿದರು. ಈ ಸಂದರ್ಭ ಜೆಡಿಎಸ್ ಕಾರ್ಯಾಧ್ಯಕ್ಷ ಬೂದನೂರು ಸ್ವಾಮಿ, ಬೂದನೂರು ಗ್ರಾಪಂ ಸದಸ್ಯ ಮಧು, ಮುಖಂಡರಾದ ಶಿವಲಿಂಗಯ್ಯ, ಪುಟ್ಟಸ್ವಾಮಿ, ನಾಗರಾಜು, ಅಭಿ, ಪವನ್, ಶ್ರೀಧರ್ ಮತ್ತಿತರಿದ್ದರು.

ಗೌರಮ್ಮ ನಿಧನ



ಕೆ.ಆರ್.ಪೇಟೆ, ಜು.3– ತಾಲೂಕಿನ ಬಂಡಬೋಯಿನಹಳ್ಳಿ ಗ್ರಾಮದ ನಿವಾಸಿ, ಮನ್‌ಮುಲ್ ನಿರ್ದೇಶಕ ಡಾಲು ರವಿ ಅವರ ಅತ್ತೆ ಗೌರಮ್ಮ(94) ಸೋಮವಾರ ನಿಧನರಾದರು. ಮೃತರು ಐವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ 10 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ. ಮೃತರ ನಿಧನಕ್ಕೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಹರಿಶ್ಚಂದ್ರ ಕಾವ್ಯದ ಲೋಹಿತಾಶ್ವನ ಮರಣ, ಚಂದ್ರಮತಿಯ ಪುತ್ರ ವಿಲಾಪ ಪ್ರಸಂಗದಲ್ಲಿ ಕರುಣರಸ ಮಡುಗಟ್ಟಿ ನಿಂತಿದೆ

ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ.ಇ.ಗೋವಿಂದೇಗೌಡರ ಮನ ಮಿಡಿಯುವ ವರ್ಣನೆ

ಮೈಸೂರು, ಜು.3–ಹರಿಶ್ಚಂದ್ರ ಕಾವ್ಯದ ಲೋಹಿತಾಶ್ವನ ಮರಣ ಮತ್ತು ಚಂದ್ರಮತಿಯ ಪುತ್ರ ವಿಲಾಪ ಪ್ರಸಂಗದಲ್ಲಿ ಕರುಣರಸ ಮಡುಗಟ್ಟಿ ನಿಂತಿದೆ ಎಂದು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ.ಇ.ಗೋವಿಂದೇಗೌಡ ತಿಳಿಸಿದರು.

ನಗರದ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ 'ಅನುಭವಾಧಾರಿತ ಕಲಿಕೆ' (Experiential learning) ಅಂಗವಾಗಿ ದ್ವಿತೀಯ ಬಿಕಾಂ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯ ಆಧಾರಿತ "ಸತ್ಯ ಹರಿಶ್ಚಂದ್ರ" ಚಲನಚಿತ್ರ ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಘವಾಂಕನ ಕಾವ್ಯಗಳಲ್ಲೆಲ್ಲ ಹರಿಶ್ಚಂದ್ರ ಕಾವ್ಯ ಅತ್ಯಂತ ಜನಪ್ರಿಯವಾದ ಕೃತಿ. ಸಾವವರ–ನೋವವರ ಕಾವ್ಯ ರಚಿಸಿದ ಕಾರಣಕ್ಕೆ ಸೋದರ ಮಾವ ಹರಿಹರನ ಸಿಟ್ಟಿಗೆ ಗುರಿಯಾದ ರಾಘವಾಂಕ, ಧರ್ಮಾಧಾರಿತ ಆಧ್ಯಾತ್ಮಕ್ಕಿಂತ ಇಹದ ಬದುಕನ್ನು ಸತ್ಯ ಮತ್ತು ಪ್ರಾಮಾಣಿಕತೆಯ ತಳಹದಿಯಲ್ಲಿ ಹಸನುಗೊಳಿಸುವ ಕಾವ್ಯ ರಚಿಸಿದ್ದು ಜಗತ್ತಿನ ದೊಡ್ಡ ಆದರ್ಶ ಎಂದು ಹೇಳಿದರು. ದೇವಲೋಕದ ದೇವೇಂದ್ರನ ಒಡ್ಡೋಲಗದಲ್ಲಿ ಸತ್ಯದ ಪ್ರತಿಪಾದನೆಗಾಗಿ ವಸಿಷ್ಠ–ವಿಶ್ವಾಮಿತ್ರ ಮುನಿಗಳ ನಡುವೆ ನಡೆದ ಈ ಸಂಘರ್ಷ 'ಕೋಣಗಳೆರಡು ಹೋರೆ ಗಿಡುವಿಂಗೆ ಮೃತ್ಯು' ಎಂಬಂತೆ ಭೂಲೋಕದ ಹರಿಶ್ಚಂದ್ರ ಪರೀಕ್ಷೆಯ ಕೇಂದ್ರವಾಗಿದ್ದು ವಿಶೇಷ. ಈ ಮೂಲಕ ಪರಕ್ಕಿಂತ ಇಹವೇ ಮುಖ್ಯ ಇಲ್ಲಿದ್ದುಕೊಂಡೇ ಸತ್ಯವನ್ನು ಗೆದ್ದು ದೇವರನ್ನೇ ಇಳೆಗೆ ಇಳಿಸಿದ್ದು ಕಾವ್ಯದ ಮತ್ತೊಂದು ಸೊಗಸು ಎಂದು ವಿವರಿಸಿದರು.



ವೇದ ಪುರಾಣೇತಿಹಾಸಗಳಲ್ಲಿ ಉಕ್ತವಾದ ಹರಿಶ್ಚಂದ್ರನನ್ನು, ರಾಘವಾಂಕ ಮುಖ್ಯವಾಗಿಟ್ಟುಕೊಂಡು ಸೋಪಜ್ಞವಾದ ವರ್ಣನೆ, ಸನ್ನಿವೇಶ ನಿರ್ಮಾಣಗಳಿಂದ ಉತ್ಕೃಷ್ಟವಾದ ಕಾವ್ಯ ರಚಿಸಿದ್ದಾನೆ. ಅಯೋಧ್ಯೆಯ ರಾಜ ಹರಿಶ್ಚಂದ್ರನು ವಿಶ್ವಾಮಿತ್ರ ಮುನಿಗೆ ಕೊಡಬೇಕಾದ ದಕ್ಷಿಣೆ ನೀಡಲು ಗಡುವನ್ನು ಬೇಡಿಕೊಂಡು ಕುಟುಂಬ ಸಮೇತ ಪುರದಿಂದ ಹೊರಡುವ ಸನ್ನಿವೇಶ. ಪತ್ನಿ ಮತ್ತು ಮಗನನ್ನು ಒಬ್ಬ ಬ್ರಾಹ್ಮಣನಿಗೆ ಮಾರಿದ ಬಳಿಕ ಎದುರಾಗುವ ಸನ್ನಿವೇಶಗಳು ಮನಕಲುಕುವಂತಿವೆ ಎಂದರು.

ಮಗ ಲೋಹಿತಾಶ್ವ ಹುಲ್ಲು–ಸೌದೆಯನ್ನು ತರಲು ಕಾಡಿಗೆ ಹೋಗಿ ಹಾವು ಕಚ್ಚಿ ಸಾಯುವುದು, ಮಗನನ್ನು ಹುಡುಕಿ ಹೋಗುವ ಚಂದ್ರಮತಿಯ ಪಾತ್ರ ಚಿತ್ರಣ ಕಲ್ಲು ಹೃದಯವನ್ನೂ ಕಲಕಿಬಿಡುತ್ತದೆ. ಕಾಡಿನಲ್ಲಿ ಸತ್ತು ಬಿದ್ದಿರುವ ಮಗನನ್ನು ನೋಡಲು ಹೋಗುವ ಸ್ವಾತಂತ್ರ್ಯವೂ ಇಲ್ಲ. ಇತ್ತ ಮಾಲೀಕನ ಅಪ್ಪಣೆಯಿಲ್ಲದೆ ಹೋಗುವಂತಿಲ್ಲ, ಅತ್ತ ಕಾಡು ಪ್ರಾಣಿಗಳು ಎಳೆದಾಡಿ ತಿಂದರೇನು ಗತಿ ಎಂಬ ಆತಂಕ. ಮತ್ತೊಂದೆಡೆ ಮಗನನ್ನು ಕಳೆದುಕೊಂಡ ದುಃಖ. ಇಂಥಹ ಸನ್ನಿವೇಶದಲ್ಲಿ ಆಕೆಯ ಸ್ಥಿತಿ 'ಸೀಗೆಯೊಳಗಣ ಬಾಳೆಗಣೆಯಾದುದು' ಎಂಬ ಕವಿಯ ವರ್ಣನೆ ಆ ಸನ್ನಿವೇಶದ ತೀವ್ರತೆಯನ್ನು ಕಟ್ಟಿಕೊಡುತ್ತದೆ.

ಸತ್ತು ಬಿದ್ದಿರುವ ಮಗನಲ್ಲಿ ಎಲ್ಲಿಯಾದರೂ ಪ್ರಾಣವಿದೆಯೇ ಎಂದು ಲೋಹಿತಾಶ್ವನ ದೇಹದ ಇಂಚಿಂಚನ್ನೂ ಪರೀಕ್ಷಿಸುವ ಪರಿ, ನೀನಿಲ್ಲದ ಬದುಕು ಬದುಕೇ ಅಲ್ಲ ಎಂದು ಅತ್ತು ಕರೆದು ಗೋಳಿಡುವ ಸನ್ನಿವೇಶಗಳಲ್ಲಿ ತಾಯ್ತನದ ದುಃಖ ಕಟ್ಟೆಯೊಡೆದಿರುವುದನ್ನು ಚಿತ್ರಿಸಿರುವ ರೀತಿ ರಾಘವಾಂಕನ ಕಾವ್ಯದ ಯಶಸ್ಸಿನ ಶಿಖರಗಳಲ್ಲೊಂದು ಎಂದು ಹೇಳಿದರು.

ಮಕ್ಕಳ ಕಲಿಕೆಗೆ ಹಲವಾರು ಆಯಾಮಗಳಿವೆ. ಸಂಬಂಧಿತ ಪಠ್ಯವನ್ನು ಬೋಧಿಸುವ ಜೊತೆಗೆ, ಅದೇ ಪಠ್ಯವನ್ನು 'ಅನುಭವಾಧಾರಿತ ಕಲಿಕೆ'ಯಾಗಿ ದೃಶ್ಯಮಾಧ್ಯಮದ ಮೂಲಕ, ಪಾತ್ರಗಳ ಮೂಲಕ ಜೀವಂತಿಕೆಗೊಳಿಸುವುದು, ಆ ಮೂಲಕ ಮಕ್ಕಳ ಅರಿವಿನ ವಿಸ್ತಾರವನ್ನು ಹೆಚ್ಚಿಸುವುದು ಚಲನಚಿತ್ರ ಪ್ರದರ್ಶನದ ಉದ್ದೇಶ. ದ್ವಿತೀಯ ಬಿಕಾಂ ವಿದ್ಯಾರ್ಥಿಗಳು ತಮಗೆ ಪಠ್ಯವೂ ಆಗಿರುವ ಹರಿಶ್ಚಂದ್ರ ಕಾವ್ಯ ಆಧಾರಿತ ಚಲನಚಿತ್ರ ವೀಕ್ಷಿಸುವ ಮೂಲಕ ಮತ್ತಷ್ಟು ಸೂಕ್ಷ್ಮವಾಗಿ ಕಾವ್ಯ ಗುಣಗಳನ್ನು ಗ್ರಹಿಸಬೇಕು ಎಂದು ಕರೆ ನೀಡಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ.ಆರ್.ನಳಿನಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಐಕ್ಯೂಎಸಿ ಸಂಚಾಲಕ ಡಾ.ವಿ.ಮಂಜುನಾಥ, ಎಂಬಿಎ ವಿಭಾಗದ ಮುಖ್ಯಸ್ಥರಾದ ಪ್ರೊ.ರವಿಕುಮಾರ್, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಪ್ರೊ.ಎನ್.ಎಂ.ರಜನಿ ಹಾಜರಿದ್ದರು. ಬಿ.ಸುಜಾತ ನಿರೂಪಿಸಿದರು. ಕೆ.ಟಿ. ಆಶಾಮಣಿ ವಂದಿಸಿದರು. ಬಳಿಕ ಚಲನಚಿತ್ರ ಪ್ರದರ್ಶಿಸಲಾಯಿತು. 400ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಕುನೋ ಅರಣ್ಯಕ್ಕೆ ಮತ್ತೊಂದು ಚೀತಾ ಬಿಡುಗಡೆ, ಒಟ್ಟು ಸಂಖ್ಯೆ 10ಕ್ಕೆ ಏರಿಕೆ

ಭೋಪಾಲ್: ಚೀತಾ ಉಪಕ್ರಮದ ಅಡಿಯಲ್ಲಿ ಇಂದು ದೇಶಕ್ಕೆ ಆಗಮಿಸಿರುವ ಚೀತಾಗಳ ಪೈಕಿ ಮತ್ತೊಂದು ಚೀತಾವನ್ನು ಕುನೋ ಆರಣ್ಯ ಪ್ರದೇಶಕ್ಕೆ ಬಿಡುಗಡೆ ಮಾಡಲಾಗಿದೆ.

ಪವನ್ ಎಂಬ ಗಂಡು ಚೀತಾವನ್ನು ಕುನೋ ರಾಷ್ಟ್ರೀಯ ಉದ್ಯಾನವನಕ್ಕೆ ಇಂದು ಬಿಡುಗಡೆ ಮಾಡಲಾಯಿತು. ಆ ಮೂಲಕ ದೇಶದಲ್ಲಿ ಈ ವರೆಗೂ 10 ಚೀತಾಗಳನ್ನು ಕುನೋ ಅರಣ್ಯ ಪ್ರದೇಶಕ್ಕೆ ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಶಿಯೋಪುರ ವಿಭಾಗೀಯ ಅರಣ್ಯಾಧಿಕಾರಿ ಪ್ರಕಾಶ್ ಕುಮಾರ್ ವರ್ಮಾ ಅವರು, ಗಂಡು ಚಿರತೆ ಪವನ್ ಅನ್ನು ತೆರೆದ ಅರಣ್ಯಕ್ಕೆ ಬಿಡಲಾಗಿದ್ದು, ಇಲ್ಲಿಯವರೆಗೆ 10 ಚೀತಾಗಳನ್ನು ತೆರೆದ ಅರಣ್ಯದಲ್ಲಿ ಬಿಡಲಾಗಿದೆ. ಎಲ್ಲಾ ಚೀತಾಗಳು ಆರೋಗ್ಯ ಮತ್ತು ಕುನೊ ರಾಷ್ಟ್ರೀಯ ಉದ್ಯಾನದ ಗಡಿಯಲ್ಲಿ ಮುಕ್ತವಾಗಿ ವಿಹರಿಸುತ್ತಿವೆ ಎಂದು ಹೇಳಿದ್ದಾರೆ.

ಪರಸ್ಪರ ಕಾಳಗ ಚೀತಾಗೆ ಗಾಯ: ಏತನ್ಮಧ್ಯೆ ಕುನೋ ರಾಷ್ಟ್ರೀಯ ಉದ್ಯಾನವನದ ತೆರೆದ ಅರಣ್ಯ ಪ್ರದೇಶಕ್ಕೆ ಸ್ಥಳಾಂತರ ಮಾಡಿದ್ದ ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾದ ಚೀತಾಗಳ ನಡುವೆ ಕಾದಾಟ ನಡೆದಿದ್ದು, ಪರಿಣಾಮ ಆಫ್ರಿಕನ್ ಗಂಡು ಚೀತಾ ಅಗ್ನಿ ಗಾಯಗೊಂಡಿದೆ. ಕುನೋ ರಾಷ್ಟ್ರೀಯ ಉದ್ಯಾನವನದ ತೆರೆದ ಅರಣ್ಯ ಪ್ರದೇಶದಲ್ಲಿ ಎರಡು ಗುಂಪಿನ ಚೀತಾಗಳ ನಡುವೆ ಘರ್ಷಣೆ ನಡೆದ ಬಳಿಕ ಅಗ್ನಿ ಎಂಬ ಗಂಡು ಚೀತಾಗೆ ಗಾಯಗೊಂಡಿದೆ. ಗಾಯಗೊಂಡ ಅಗ್ನಿಗೆ ಚಿಕಿತ್ಸೆ ನೀಡಲಾಗುತ್ತಿದೆ, ಸದ್ಯಕ್ಕೆ ಅದರ ಸ್ಥಿತಿ ಸುಧಾರಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಮೈಸೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮೈಸೂರು ಶ್ರೀ ಹರಿ ಇನ್ಫ್ರಾಟೆಕ್ ಮೈಸೂರು ಹಾಗೂ ವಾತ್ಸಲ್ಯ ಸೇವಾ ಫೌಂಡೇಶನ್ ಸಹಯೋಗದಲ್ಲಿ ಮೈಸೂರು ತಾಲೂಕು ಹೂಟಗಳ್ಳಿಯ ಶ್ರೀ ಹರಿ ಇನ್ಫ್ರಾಟೆಕ್ ಕಚೇರಿ ಆವರಣದಲ್ಲಿ ಶ್ರೀ ನಾಡಪ್ರಭು ಕೆಂಪೇಗೌಡ ಭಾವಚಿತ್ರಕ್ಕೆ ಪುಷ್ಪಾರ್ಚನೆ ಅರ್ಪಿಸುವ ಮೂಲಕ ಕೆಂಪೇಗೌಡ ಜಯಂತ್ಯೋತ್ಸವವನ್ನು ಆಚರಿಸಲಾಯಿತು. ಈ ವೇಳೆ ತಾಲೂಕು ಕಸಾಪ ಅಧ್ಯಕ್ಷ ಎ.ಸಿ.ಮಂಜುನಾಥ್, ವಾತ್ಸಲ್ಯ ಸೇವಾ ಫೌಂಡೇಶನ್ ಅಧ್ಯಕ್ಷ ರವಿಕುಮಾರ್, ಕೋಶಾಧ್ಯಕ್ಷ ಕಾಮನಕೆರೆಹುಂಡಿ ಹೆಚ್.ಗಿರೀಶ್ ಗೌಡ, ನಿರ್ದೇಶಕ ಮೋಹನ್, ಗಿರೀಶ್, ನಾಗೇಂದ್ರ, ಆನಂದ್ ಇತರರು ಉಪಸ್ಥಿತರಿದ್ದರು

ಪಿಎಚ್.ಡಿ ಪದವೀಧರರು

ಶಶಿಕುಮಾರ್



ಮೈಸೂರು, ಜು. 3–ಡಾ.ಮಿಡುತಲ ರಾಣಿ ಅವರ ಮಾರ್ಗದರ್ಶನದಲ್ಲಿ ಶಶಿಕುಮಾರ್ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಇರಮ್ ಫಾತಿಮಾ



ಡಾ.ಟಿ.ಆನಂದ್ ಅವರ ಮಾರ್ಗದರ್ಶನದಲ್ಲಿ ಇರಮ್ ಫಾತಿಮಾ ಅವರು ಜೈವಿಕ ತಂತ್ರಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಸಿ.ಕರುಣಾಕರ



ಡಾ.ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿ.ಕರುಣಾಕರ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಬಿ.ಆರ್.ದೀಪು



ಡಾ.ವೈ.ಬಿ.ಬಸವರಾಜು ಅವರ ಮಾರ್ಗದರ್ಶನದಲ್ಲಿ ಬಿ.ಆರ್.ದೀಪು ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಆರ್.ಎಸ್.ಸವಿತಾ



ಡಾ.ರಾಜ್‌ಕುಮಾರ್ ಹೆಚ್. ಗರಂಪಲ್ಲಿ ಅವರ ಮಾರ್ಗದರ್ಶನದಲ್ಲಿ ಬಿ.ಆರ್. ದೀಪು ಅವರು ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಐಶ್ವರ್ಯ ತ್ರಿಪುರ ಸುಂದರಿ ದೇವಿ



ಡಾ.ಎಂ.ಎನ್.ನಾಗೇಂದ್ರಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಐಶ್ವರ್ಯ ತ್ರಿಪುರಸುಂದರಿ ದೇವಿ ಅವರು ಜೈವಿಕತಂತ್ರಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಎಸ್.ಲಿಖಿತಾ



ಡಾ.ಎಂ.ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎಸ್.ಲಿಖಿತಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ನವೀನಕುಮಾರಿ



ಡಾ. ವೈ.ಎಚ್.ನಾಯಕವಾಡಿ ಅವರ ಮಾರ್ಗದರ್ಶನದಲ್ಲಿ ನವೀನ ಕುಮಾರಿ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಯುವಕರು ಕಲೆಗಳ ಕಲಿಕೆ ಬಗ್ಗೆ ಆಸಕ್ತಿ ಹೊಂದಿದ್ದರೂ ಕಲಿಕೆ ಪೂರ್ಣಗೊಳಿಸುತ್ತಿಲ್ಲ

ಖ್ಯಾತ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ ವಿಷಾದ



ಮೈಸೂರು, ಜು.3(ಎಸ್‌ಪಿಎನ್)– ಯುವಕರು ಶಾಸ್ತ್ರೀಯ ಕಲೆಗಳಾದ ಸಂಗೀತ, ನೃತ್ಯ ಸೇರಿದಂತೆ ವಿವಿಧ ಪ್ರಕಾರಗಳನ್ನು ಕಲಿಯಲು ಆಸಕ್ತಿ ಹೊಂದಿರುತ್ತಾರೆ. ಆದರೆ, ಪೂರ್ಣಗೊಳಿಸಲು ಇಂದಿನ ಯುವಕರು ಕಲಿಕೆಯಲ್ಲಿ ಆಸಕ್ತಿ ತೋರುತ್ತಿಲ್ಲ ಎಂದು ಪ್ರವೀಣ್ ಗೋಡ್ಖಿಂಡಿ ವಿಷಾದ ವ್ಯಕ್ತಪಡಿಸಿದರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ 7ನೇ ಮೈಸೂರು ಸಾಹಿತ್ಯೋತ್ಸವ – 2023ರ ಕೊನೆಯ ವಿಚಾರ ಗೋಷ್ಠಿಯಲ್ಲಿ 'ಪ್ರಹಾರ್: ಹಾಡುವ ಗಡಿಯಾರ' ಪುಸ್ತಕ ಕುರಿತು ಮಾತನಾಡಿದರು. ಯಾವ ಹಾಡುಗಳನ್ನು ಯಾವ ರಾಗದಲ್ಲಿ, ಯಾವ ಸಮಯದಲ್ಲಿ ಹಾಡಿದರೆ, ಜನರಿಗೆ ಇಷ್ಟವಾಗುತ್ತದೆ ಎಂಬುದನ್ನು ಎಳೆಎಳೆಯಾಗಿ ಬಿಡಿಸಿದರಲ್ಲದೆ, ಇವೆಲ್ಲಾ ನಿಭಂದನೆಗಳಿಗೆ ಶಾಸ್ತ್ರದಲ್ಲಿ ಉಲ್ಲೇಖವಿದೆ. ಹಾಗಾಗಿಯೇ ಶಾಸ್ತ್ರೀಯ ಸಂಗೀತ, ಕಲೆ, ಮ್ಯೂಸಿಕ್‌ಗಳನ್ನು ಕಲಿಯಲು ವರ್ಷಾನುಗಟ್ಟಲೇ ಸಮಯಾವಕಾಶ ಬೇಕು ಎಂದು ತಿಳಿಸಿದರು. 'ಪ್ರಹಾರ್: ಹಾಡುವ ಗಡಿಯಾರ' ಕಾದಂಬರಿಯಲ್ಲಿ ಸಂಗೀತದಿಂದ ಜನರಿಗೆ ಆಗುವ ಉಪಯೋಗಗಳ ಬಗ್ಗೆ, ಸಂಗೀತ ಥೆರಪಿ ಬಗ್ಗೆ, ರಾಗಗಳನ್ನು ಯಾವ ಸಂದರ್ಭದಲ್ಲಿ ಉಪಯೋಗಿಸುವ, ಶಾಸ್ತಗಳಲ್ಲಿ ಉಲ್ಲೇಖವಿರುವ ಕುರಿತು ಓದುಗರಿಗೆ ಸಂಕ್ಷಿಪ್ತ ಮಾಹಿತಿ ನೀಡುವ ಉದ್ದೇಶದಿಂದ ಈ ಪುಸ್ತಕ ಬರೆಯಲಾಗಿದೆ ಎಂದರು. ಇಂಗ್ಲಿಷ್ ನಿವೃತ್ತ ಪ್ರಾಧ್ಯಾಪಕಿ ಪ್ರೊ.ನಳನಿಚಂದರ್ ಪ್ರಶ್ನೋತ್ತರ ಹಾಗೂ ಸಂವಾದ ನಡೆಸಿಕೊಟ್ಟರು.

ಪಿಎಚ್.ಡಿ ಪದವೀಧರರು

ಎಂ.ಬಿ.ರವಿಕುಮಾರ್



ಡಾ.ವೈ.ಎಚ್.ನಾಯಕವಾಡಿ ಅವರ ಮಾರ್ಗ ದರ್ಶನದಲ್ಲಿ ಎಂ.ಬಿ. ರವಿಕುಮಾರ್ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಯೋಮ್ನಾ ಪಿ.ಜಾನುಲಾಬದ್ದೀನ್



ಡಾ.ಹೆಚ್.ನಾಗರಾಜ ಅವರ ಮಾರ್ಗದರ್ಶನದಲ್ಲಿ ಯೋಮ್ನಾ ಪಿ. ಜಾನುಲಾಬದ್ದೀನ್ ಅವರು ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ ಮಂಗಳವಾರ 4 ಜುಲೈ 2023

ವಿದ್ಯಾರ್ಥಿ ಅಡ್ಡಗಟ್ಟಿ ಮೊಬೈಲ್ ಕಸಿದುಕೊಂಡ ಮೂವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜು. 3– ವಿದ್ಯಾರ್ಥಿಯ ಬೈಕ್ ಅಡ್ಡಗಟ್ಟಿದ ಮೂವರು ಆತನ ಮೊಬೈಲ್ ಕಸಿದುಕೊಂಡ ಘಟನೆ ಮೈಸೂರಿನ ವಿನಾಯಕನಗರದ ಟೆಂಪಲ್ ರಸ್ತೆಯಲ್ಲಿ ನಡೆದಿದೆ.

ಮೂಲತಃ ಗುಂಡ್ಲುಪೇಟೆ ತಾಲೂಕು ಯಲಿಯೂರು ಗ್ರಾಮದ, ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದು, ಬೋಗಾದಿ ಹಾಸ್ಟೆಲ್‌ನಲ್ಲಿ ಆಶ್ರಯ ಪಡೆದಿರುವ ವಿದ್ಯಾರ್ಥಿ ಜಿ. ಅರ್ಜುನ್(19) ಮೊಬೈಲ್ ಕಳೆದುಕೊಂಡವನಾಗಿದ್ದು, ಈತ ಜೂನ್ 28ರಂದು ಸಂಜೆ 4 ಗಂಟೆ ಸುಮಾರಿನಲ್ಲಿ ಕಾಲೇಜು ಮುಗಿಸಿ ತನ್ನ ಬೈಕ್‌ನಲ್ಲಿ (ಕೆಎ 10–ಇಇ 8498) ಟೆಂಪಲ್ ರಸ್ತೆಯಲ್ಲಿ ತೆರಳುತ್ತಿದ್ದಾಗ ಡಿಯೋ ಸ್ಕೂಟರ್ (ಕೆಎ 09–ಹೆಚ್‌ಎಕ್ಸ್ 2834)ನಲ್ಲಿ ಬಂದ ಪಡುವಾರಹಳ್ಳಿಯ ಗುರು, ಆಕಾಶ್ ಮತ್ತು ಒಂಟಿಕೊಪ್ಪಲ್‌ನ ಮಹೇಶ್ ಎಂಬುವರು ವಿದ್ಯಾರ್ಥಿಯ ಬೈಕ್ ಅನ್ನು ಟೆಂಪಲ್ ರಸ್ತೆಯಲ್ಲಿ ಅಡ್ಡಗಟ್ಟಿ ಆತನ ಬಳಿ ಇದ್ದ ಮೊಬೈಲ್ ಅನ್ನು ಕಸಿದುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಅರ್ಜುನ್ ಜುಲೈ 1ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕಂಪನಿಗೆ ಗ್ರಾಹಕರು ಪಾವತಿಸಿದ 43.69 ಲಕ್ಷ ವಂಚನೆ; ಸೇಲ್ಸ್ ರೆಪ್ರಸೆಂಟೇಟಿವ್ ವಿರುದ್ಧ ಪ್ರಕರಣ

ಮೈಸೂರು, ಜು. 3– ಖಾಸಗಿ ಕಂಪನಿಯೊಂದಕ್ಕೆ ಗ್ರಾಹಕರು ಪಾವತಿಸಿದ್ದ 43.69 ಲಕ್ಷ ರೂ.ಗಳನ್ನು ಕಂಪನಿಗೆ ಜಮೆ ಮಾಡದೇ ವಂಚಿಸಿರುವ ಆರೋಪದ ಮೇರೆಗೆ ಸೇಲ್ಸ್ ರೆಪ್ರಸೆಂಟೇಟಿವ್ ವಿರುದ್ಧ ಪ್ರಕರಣ ದಾಖಲಾಗಿದೆ.

ಲಲಿತಾದ್ರಿಪುರ ನಿವಾಸಿ ಎಂ. ರವಿ(28) ಆರೋಪಕ್ಕೆ ಗುರಿಯಾದವನಾಗಿದ್ದು, ಈತ ಮೈಸೂರಿನ ಚಾಮುಂಡಿಪುರಂನ ಮನುವನ ಪಾರ್ಕ್ ಎದುರಿಗಿರುವ 'ಆಟೋ ಮಾರ್ಕ್' ಎಂಬ ಕಂಪನಿಯ ಸೇಲ್ಸ್ ರೆಪ್ರಸೆಂಟೇಟಿವ್ ಆಗಿ 2021ರ ಏಪ್ರಿಲ್ 1ರಿಂದ 2023ರ ಫೆಬ್ರವರಿ 28ರವರೆಗೆ ಕೆಲಸ ಮಾಡಿದ್ದು, ಈ ಅವಧಿಯಲ್ಲಿ ಕಂಪನಿಗೆ ಗ್ರಾಹಕರು ಪಾವತಿಸಿದ್ದ 43,69,871 ರೂ.ಗಳನ್ನು ಕಂಪನಿಗೆ ಜಮಾ ಮಾಡದೇ ವಂಚಿಸಿದ್ದಾನೆ ಎಂದು ಕಂಪನಿ ಮಾಲೀಕ ಮಂಗಳೂರಿನ ವಿ. ವಿಲಾಸ್‌ಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಕಲಿ ಮಾಲೀಕನ ಸೃಷ್ಟಿಸಿ ನಿವೇಶನ ವಂಚನೆ

ಬಯಲಾಯ್ತು ಮತ್ತೊಂದು ಮಹಾವಂಚನೆ ಜಾಲ

ಮೈಸೂರು, ಜು. 3– ಗೃಹಿಣಿಗೆ ಸೇರಿದ ನಿವೇಶನವನ್ನು ಅಕ್ರಮವಾಗಿ ರಿಜಿಸ್ಟ್ರೇಷನ್ ಮಾಡಿಕೊಂಡಿರುವ ಪ್ರಕರಣ ದಾಖಲಾಗಿದೆ.

ವಿವರ: ಎಸ್. ಪ್ಯಾಟ್ರಿಕ್ ಎಂಬುವರಿಗೆ 1977ರಲ್ಲಿ ಅಂದಿನ ಸಿಐಟಿಬಿ (ಹಾಲಿ ಮುಡಾ) ಕೆಸರೆ 2ನೇ ಹಂತದಲ್ಲಿ 404 ಸಂಖ್ಯೆಯ 60x40 ಅಡಿ ವಿಸ್ತೀರ್ಣದ ನಿವೇಶನವನ್ನು ಮಂಜೂರು ಮಾಡಿತ್ತು. ಈ ನಿವೇಶನದ ಸ್ವಾಧೀನ ಪತ್ರ ಹಾಗೂ ಮಂಜೂರಾತಿ ಪತ್ರ ಪಡೆದಿದ್ದ ಪ್ಯಾಟ್ರಿಕ್ ಅವರಿಗೆ 1978ರ ಆಗಸ್ಟ್ 18ರಲ್ಲಿ ಮೈಸೂರು ನಗರಪಾಲಿಕೆ ಖಾತೆಯನ್ನು ಸಹ ಮಾಡಿಕೊಟ್ಟಿತ್ತು. ಆರ್.ಎಸ್. ನಾಯ್ಡು ನಗರದ ನಿವಾಸಿ ಗುಲ್ನಾಜ್ ಬೇಗಂ(61) ಎಂಬುವರು ಪ್ಯಾಟ್ರಿಕ್ ಅವರಿಂದ 1999ರ ಫೆಬ್ರವರಿ 2ರಂದು ಈ ನಿವೇಶನವನ್ನು ಖರೀದಿಸಿದ್ದು, ಈ ಸಂಬಂಧ ಮೈಸೂರು ಉತ್ತರ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯೂ ಆಗಿದೆ. ಇದರ ಆಧಾರದ ಮೇರೆಗೆ ಮೈಸೂರು ನಗರಪಾಲಿಕೆಯಲ್ಲಿ ಗುಲ್ನಾಜ್ ಬೇಗಂ ಅವರ ಹೆಸರಿಗೆ ಖಾತೆ ವರ್ಗಾವಣೆಯಾಗಿದ್ದು, ಈವರೆವಿಗೂ ಅವರೇ ಕಂದಾಯವನ್ನೂ ಪಾವತಿಸುತ್ತಿದ್ದಾರೆ.

ಈ ನಡುವೆ 2023ರ ಜನವರಿ 28ರಂದು ಕೆಲವರು, ಗುಲ್ನಾಜ್ ಬೇಗಂ ಅವರ ನಿವೇಶನವನ್ನು ಸ್ವಚ್ಛ ಮಾಡುತ್ತಿದ್ದದ್ದನ್ನು ಗಮನಿಸಿದ ಅವರು, ಅನುಮಾನದ ಮೇರೆಗೆ ತಾಲೂಕು ಕಚೇರಿಯಲ್ಲಿ ಇಸಿ ತೆಗೆಸಿ ನೋಡಿದಾಗ ಅದರಲ್ಲಿ ಆಸ್ತಿ ಪ್ಯಾಟ್ರಿಕ್ ಅವರಿಂದ ರೆಹಮತ್‌ಉಲ್ಲಾ ಎಂಬುವರ ಹೆಸರಿಗೆ ವರ್ಗಾವಣೆಯಾಗಿರುವುದು ಗೊತ್ತಾಗಿದೆ. ನಂತರ ದಾಖಲೆಗಳನ್ನು ಪರಿಶೀಲಿಸಲಾಗಿ ಪ್ಯಾಟ್ರಿಕ್ ಅವರೇ 2020ರ ಜನವರಿ 21ರಂದು ರೆಹಮತ್‌ಉಲ್ಲಾ ಎಂಬುವರಿಗೆ ಸದರಿ ಆಸ್ತಿಯನ್ನು ಶುದ್ಧ ಕ್ರಯಕ್ಕೆ ಮೈಸೂರು ಪೂರ್ವ ನೋಂದಣಾಧಿಕಾರಿಗಳ ಕಚೇರಿಯಲ್ಲಿ ರಿಜಿಸ್ಟರ್ ಮಾಡಿಕೊಟ್ಟಿದ್ದು, ಇದರ ಆಧಾರದ ಮೇರೆಗೆ ರೆಹಮತ್‌ಉಲ್ಲಾ ಎಂಬಾತ 2022ರ ನವೆಂಬರ್ 17ರಂದು ಮುಡಾದಿಂದ ಈ ಆಸ್ತಿಗೆ ಟೈಟಲ್ ಡೀಡ್ ಪಡೆದಿರುವುದು ಕಂಡುಬಂದಿದೆ. ನೋಂದಣಾಧಿಕಾರಿಗಳ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗಿ ಆಸ್ತಿಯ ಅಸಲಿ ಮಾಲೀಕ ಪ್ಯಾಟ್ರಿಕ್ ಬದಲಿಗೆ ನಕಲಿ ವ್ಯಕ್ತಿಯ ಭಾವಚಿತ್ರ ಕಂಡುಬಂದಿದೆ. ಒಟ್ಟಾರೆ ನಕಲಿ ವ್ಯಕ್ತಿಯನ್ನು ಬಳಸಿಕೊಂಡು ಗುಲ್ನಾಜ್ ಬೇಗಂ ಅವರ ಆಸ್ತಿಯನ್ನು ಕಬಳಿಸಲಾಗಿದೆ. ಈ ಸಂಬಂಧ ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನರಸಿಂಹರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಭಾರೀ ಬಂದೋಬಸ್ತ್ ಇರುವ ಮೈಸೂರು ವಿಮಾನ ನಿಲ್ದಾಣದಲ್ಲೂ ಖದೀಮರ ಕೈಚಳಕ

ಸೋಲಾರ್ ಲೈಟ್ ಕಂಬದಲ್ಲಿ ಬ್ಯಾಟರಿ ಕಳವು

ಮೈಸೂರು, ಜು. 3– ವಿಮಾನ ನಿಲ್ದಾಣಗಳಿಗೆ ಸುರಕ್ಷತಾ ದೃಷ್ಟಿಯಿಂದ ಬಿಗಿ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ವಿಮಾನ ನಿಲ್ದಾಣದ ಒಳಗೆ ಪ್ರಯಾಣಿಕರೇ ಪ್ರವೇಶಿಸಬೇಕಾದರೂ ಹಲವಾರು ಹಂತದಲ್ಲಿ ತಪಾಸಣೆಗೊಳಪಟ್ಟು ಪ್ರವೇಶಿಸಬೇಕಾಗುತ್ತದೆ. ಹೀಗಿರುವಾಗ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ಒಳಭಾಗದಲ್ಲಿ ಸೋಲಾರ್ ಲೈಟ್ ಕಂಬಗಳಿಗೆ ಅಳವಡಿಸಿದ್ದ 19 ಬ್ಯಾಟರಿಗಳನ್ನು ಖದೀಮರು ಕಳವು ಮಾಡಿದ್ದಾರೆ.

ಈ ವಿಮಾನ ನಿಲ್ದಾಣಕ್ಕೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್)ಯಿಂದ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದ್ದು, ಇದರ ಉಸ್ತುವಾರಿಯನ್ನು ಅಸಿಸ್ಟೆಂಟ್ ಕಮಾಂಡೆಂಟ್ ವಹಿಸಿಕೊಂಡಿದ್ದಾರೆ. ಹೀಗಿದ್ದರೂ ವಿಮಾನ ನಿಲ್ದಾಣದ ಒಳಭಾಗದಲ್ಲಿ ಸೋಲಾರ್ ಲೈಟ್ ಕಂಬಗಳಿಗೆ ಅಳವಡಿಸಿದ್ದ 19 ಬ್ಯಾಟರಿಗಳನ್ನು ಕಳವು ಮಾಡಿರುವ ವಿಚಾರ ಜೂನ್ 28ರಂದು ವಿಮಾನ ನಿಲ್ದಾಣದ ಅಧಿಕಾರಿಗಳ ಗಮನಕ್ಕೆ ಬಂದಿದೆ ಈ ಸಂಬಂಧ ಮಂಡಕಳ್ಳಿ ವಿಮಾನ ನಿಲ್ದಾಣದ ಜೂನಿಯರ್ ಎಕ್ಸಿಕ್ಯೂಟಿವ್ (ಎಲೆಕ್ಟ್ರಿಕಲ್) ಎ. ಪ್ರವೀಣ್ ಅವರು ವಿದ್ಯಾರಣ್ಯಪುರಂ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಕೆಎಸ್‌ಐಎಸ್‌ಎಫ್ ಭದ್ರತೆಯನ್ನು ಭೇದಿಸಿ ಖದೀಮರು ವಿಮಾನ ನಿಲ್ದಾಣಕ್ಕೆ ಪ್ರವೇಶಿಸಿ ಕಳವು ಮಾಡಿರುವುದು ಅಚ್ಚರಿಯನ್ನುಂಟು ಮಾಡಿದೆ. ಪ್ರವೀಣ್ ಅವರು ನೀಡಿರುವ ದೂರಿನಲ್ಲಿ ಕಳೆದ ಐದಾರು ತಿಂಗಳ ಹಿಂದೆ ಚೆಕ್ ಮಾಡಿದಾಗ ಈ ಬ್ಯಾಟರಿಗಳು ಇದ್ದವು. ಜೂನ್ 28ರಂದು ಚೆಕ್ ಮಾಡಿದಾಗ ಅವು ಕಳುವಾಗಿರುವುದು ಗೊತ್ತಾಗಿದೆ ಎಂದು ತಿಳಿಸಿದ್ದಾರೆ. ಹಾಗಾದರೆ ಈ ಕಳವು ಯಾವಾಗ ನಡೆದದ್ದು ಎಂಬುದು ಕೂಡ ನಿಖರವಾಗಿ ತಿಳಿಯುತ್ತಿಲ್ಲ. ಪೊಲೀಸರ ತನಿಖೆಯಿಂದಷ್ಟೇ ಬ್ಯಾಟರಿಗಳು ಕಳುವಾಗಿದ್ದು ಯಾವಾಗ ಹಾಗೂ ಖದೀಮರು ಯಾರು ಎಂಬುದು ತಿಳಿಯಬೇಕಾಗಿದೆ.

ಮಹಿಳೆ ನಾಪತ್ತೆ

ಮೈಸೂರು, ಜು.3– ವರುಣದಲ್ಲಿನ ಹೆಬ್ಬಕವಾಡಿ ಗ್ರಾಮದ ನಿವಾಸಿ ಶಾರದಮ್ಮ ಎಂಬ 42 ವರ್ಷದ ಮಹಿಳೆ ಕಾಣೆಯಾಗಿದ್ದು, ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 5.3 ಅಡಿ ಎತ್ತರವಿರುವ ಕೋಲು ಮುಖ, ಗೋಧಿ ಮೈಬಣ್ಣ ಹಾಗೂ ಸಾಧಾರಣ ಮೈಕಟ್ಟನ್ನು ಹೊಂದಿದ್ದು, ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಮಹಿಳೆ ಕಾಣೆಯಾದಾಗ ನೀಲಿ ಬಣ್ಣದ ಸೀರೆ ಧರಿಸಿರುತ್ತಾರೆ. ಎಡ ತೋಳಿನಲ್ಲಿ ಶಾರದ ಎಂಬ ಹಸಿರು ಹಚ್ಚೆ ಹಾಕಿಸಿರುತ್ತಾರೆ. ಮಹಿಳೆಯ ಬಗ್ಗೆ ವಿವರ ಅಥವಾ ಮಾಹಿತಿ ತಿಳಿದು ಬಂದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ದೂ.ಸಂ.0821–2520040, ಮೈಸೂರು ಜಿಲ್ಲಾ ಕಂಟ್ರೋಲ್ ರೂಂ 0821–2444800 ಅಥವಾ ಪಿ.ಎಸ್.ಐ(ಕಾ&ಸು) ವರುಣ ಪೊಲೀಸ್ ಠಾಣೆಯ ದೂ.ಸಂ.0821–2594411 ಅನ್ನು ಸಂಪರ್ಕಿಸಬಹುದು ಎಂದು ವರುಣ ಪೊಲೀಸ್ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಹೃದಯಾಘಾತವಾಗಿ ಮುಖಂಡ ಸಿದ್ದೇಶ್ ಯಾದವ್ ನಿಧನ



ಬೆಂಗಳೂರು: ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಸಭೆ ವೇಳೆ ಹೃದಯಾಘಾತವಾಗಿ ಚಿತ್ರದುರ್ಗ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಸಿದ್ದೇಶ್ ಯಾದವ್ ಮೃತಪಟ್ಟಿದ್ದಾರೆ. ಒಬಿಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ 46 ವರ್ಷದ ಸಿದ್ದೇಶ್ ಯಾದವ್ ಜಿಲ್ಲಾ ಪ್ರಭಾರಿಗಳ ಸಭೆಗೆ ಪಾಲ್ಗೊಳ್ಳಲು ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿಗೆ ಆಗಮಿಸಿದ್ದರು. ಮಧ್ಯಾಹ್ನ ಸಭೆ ಮುಗಿಸಿ ಹೊರಗೆ ಬಂದಾಗ ಸಿದ್ದೇಶ್ ಯಾದವ್ ಕುಸಿದು ಬಿದ್ದಿದ್ದಾರೆ. ಕೂಡಲೇ ಸಿದ್ದೇಶ್ ಯಾದವ್ ಅವರನ್ನು ಕೆ.ಸಿ.ಜನರಲ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ಅಗಲಿದ ಗಣ್ಯರಿಗೆ ಸಂತಾಪ ಸೂಚನೆ ಸಮಯ

ಧ್ರುವನಾರಾಯಣರ ನೆನೆದು ಕಂಬನಿ ಮಿಡಿದ ಡಿಕೆಶಿ





ಬದುಕಿದ್ದರೆ ಅವರು ಸಚಿವರಾಗುವುದನ್ನು ಯಾರೂ ತಡೆಯಲು ಸಾಧ್ಯವಿರಲಿಲ್ಲ

ಅವರು ಪರಿಶಿಷ್ಟ ಜಾತಿ ಸಮುದಾಯದಿಂದ ಬಂದಿದ್ದರೂ, ಆತ ಜಾತಿ ವಿಚಾರವಾಗಿ ಎಂದೂ ಮಾತನಾಡಲಿಲ್ಲ. ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡ ಶ್ರೇಷ್ಠ ನಾಯಕ. ಅವರಿಗೆ ಈ ವಿಧಾನಸಭೆಯಲ್ಲಿ ಸಂತಾಪ ಸೂಚಿಸುತ್ತಿರುವುದು ನೋವು ಆಗುತ್ತಿದೆ. ಅವರ ಅಗಲಿಕೆಯಿಂದ ನನಗೆ ಹಾಗೂ ಅವರ ಸಾವಿರಾರು ಹಿಂಬಾಲಕರಿಗೆ ನೋವಾಗಿದ್ದು, ಇದನ್ನು ತಡೆದುಕೊಳ್ಳುವ ಶಕ್ತಿಯನ್ನು ಎಲ್ಲರಿಗೂ ಕರುಣಿಸಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. – ಡಿ.ಕೆ.ಶಿವಕುಮಾರ್

ಬೆಂಗಳೂರು, ಜುಲೈ 3(ಕೆಎಂಶಿ)– ಮಾಜಿ ಲೋಕಸಭಾ ಸದಸ್ಯರು, ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿವಂಗತ ಧ್ರುವನಾರಾಯಣ ಅವರನ್ನು ನೆನೆದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭೆಯಲ್ಲಿ ಕಣ್ಣೀರಿಟ್ಟರು.

ವಿಧಾನಮಂಡಲ ಅಧಿವೇಶನದ ಮೊದಲ ದಿನದ ಕಲಾಪದಲ್ಲಿ, ಇತ್ತೀಚೆಗೆ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸುವ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್, ಧ್ರುವನಾರಾಯಣ ಅವರ ಜತೆಗಿನ ಒಡನಾಟ, ಅವರ ಕೆಲಸದ ವೈಖರಿಯನ್ನು ನೆನೆದು ಭಾವುಕರಾದರು.

ಸಹೋದರನಂತಿದ್ದ ಧ್ರುವನಾರಾಯಣ ಅವರ ಅಗಲಿಕೆ ನನ್ನ ಮನಸ್ಸಿಗೆ ಬಹಳ ನೋವು ತಂದಿದೆ. ನನಗೆ ರಾಜಕಾರಣದಲ್ಲಿ ಧ್ರುವನಾರಾಯಣ್ ಸಹೋದರನಾಗಿದ್ದ. ಅವರು ನನ್ನ ಜತೆ ಕಾರ್ಯಾಧ್ಯಕ್ಷರಾಗಿದ್ದರು. ಅವರಿಗೆ ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ ಜಿಲ್ಲಾ ಜವಾಬ್ದಾರಿ ವಹಿಸಿದ್ದೆ. ಈ ಎಲ್ಲಾ ಕಡೆಗಳಲ್ಲಿ ಅವರು ಶುದ್ಧ ರಾಜಕಾರಣ ಮಾಡಿದ್ದಾರೆ. ಅವರಿಗೆ ವಹಿಸಿದ್ದ ಪ್ರದೇಶದಲ್ಲಿ ಸುಮಾರು 75% ರಷ್ಟು ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ.

ಇಂದು ನಾನು ಕೆಪಿಸಿಸಿ ಅಧ್ಯಕ್ಷನಾಗಿ ಮುಂದುವರಿಯುತ್ತಿದ್ದು, ನನ್ನ ನಂತರ ಈ ಸ್ಥಾನದಲ್ಲಿ ಧ್ರುವನಾರಾಯಣ ಅವರನ್ನು ಕೂರಿಸಬೇಕು ಎಂಬ ಆಲೋಚನೆ ನನ್ನ ತಲೆಯಲ್ಲಿತ್ತು. ನನ್ನ ಜತೆ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ ಈಶ್ವರ್ ಖಂಡ್ರೆ, ಸತೀಶ್ ಜಾರಕಿಹೊಳಿ, ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್ ಅವರು ಸಚಿವ ಸಂಪುಟದ ಸದಸ್ಯರಾಗಿ ಕೂತಿದ್ದಾರೆ.

ಧ್ರುವನಾರಾಯಣ ಅವರು ಬದುಕಿದ್ದರೆ, ಅವರು ಕೂಡ ಈ ಸದನದಲ್ಲಿ ಸಚಿವ ಸ್ಥಾನದಲ್ಲಿ ಕೂರುವುದನ್ನು ಯಾರಿಂದಲೂ ತಪ್ಪಿಸಲು ಆಗುತ್ತಿರಲಿಲ್ಲ. ಪಕ್ಷದ ಸಂಘಟನೆಯಲ್ಲಿ ಅವರಿಗೆ ಕೊಟ್ಟ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದರು. ನಮ್ಮ ಪಕ್ಷದ ವತಿಯಿಂದ ಆರೋಗ್ಯ ಹಸ್ತ ಕಾರ್ಯಕ್ರಮ ಮಾಡಿದಾಗ, ಅವರು ಬಹಳ ಜವಾಬ್ದಾರಿಯಿಂದ ಕೆಲಸ ಮಾಡಿದ್ದರು.

ಚಾಮರಾಜನಗರದಲ್ಲಿ ಆಕ್ಸಿಜನ್ ದುರಂತದಲ್ಲಿ 36 ಜನ ಸತ್ತಾಗ ಆಗಿನ ಮಂತ್ರಿಗಳು ಕೇವಲ 3 ಮಂದಿ ಸತ್ತಿದ್ದಾರೆ ಎಂದು ಹೇಳಿದ್ದರು. ಆದರೆ ಧ್ರುವನಾರಾಯಣ ಅವರು ನನ್ನನ್ನು ಹಾಗೂ ಸಿದ್ದರಾಮಯ್ಯ ಅವರನ್ನು ಕರೆದುಕೊಂಡು ಹೋಗಿ ಪರಿಶೀಲಿಸುವಂತೆ ಮಾಡಿದರು.


ನಂತರ ಈ ದುರಂತದಲ್ಲಿ 36 ಮಂದಿ ಸತ್ತಿರುವ ಬಗ್ಗೆ ಸತ್ಯಾಂಶ ಬಯಲಿಗೆ ಬಂದಿತು. ಪ್ರತಿ ಹಂತದಲ್ಲಿ ಅವರು ನಗುತ್ತಲೇ ಕೆಲಸ ಮಾಡಿದ್ದಾರೆ. ಅವರು ನಮ್ಮ ಪಕ್ಷಕ್ಕೆ ಮಾತ್ರವಲ್ಲ, ರಾಜ್ಯ ರಾಜಕಾರಣದಲ್ಲೂ ಧ್ರುವತಾರೆ. ನಮಗೆ ಅವರ ಜತೆ ಇದ್ದ ಸ್ನೇಹ ಸಂಬಂಧ ಬಣ್ಣಿಸಲಾಗುವುದಿಲ್ಲ. ಆತ ಒಂದು ದಿನ ಬೇರೆಯವರ ಮನಸ್ಸು ನೋಯಿಸಲಿಲ್ಲ. ವಿದ್ಯಾರ್ಥಿ ನಾಯಕನಾಗಿದ್ದ ಧ್ರುವನಾರಾಯಣ್ ಬಿಜೆಪಿಗೆ ಹೋಗಿದ್ದರು, ನಾನು ಅವರನ್ನು ಕರೆತಂದಿದ್ದೆ. ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ಅವರಿಗೆ ಟಿಕೆಟ್ ಕೊಡಿಸಿ ಸ್ಪರ್ಧಿಸುವಂತೆ ಮಾಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೇವಲ 1 ಮತದ ಅಂತರದಲ್ಲಿ ಗೆಲುವು ಸಾಧಿಸಿ ಇತಿಹಾಸ ನಿರ್ಮಿಸಿದರು ಎಂದರು.

ಅಂಜನಮೂರ್ತಿ ಹಾಗೂ ನಾನು ಒಟ್ಟಿಗೆ ಚುನಾವಣೆಗೆ ಸ್ಪರ್ಧೆ ಮಾಡಿದ್ದೆವು. ಅವರು ಬಹಳ ವರ್ಷಗಳ ಕಾಲ ಬೆಂಗಳೂರಿನಲ್ಲಿ ರಾಜಕಾರಣ ಮಾಡಿದ್ದಾರೆ. ಇಂದು ಅವರು ನಮ್ಮನ್ನು ಅಗಲಿದ್ದಾರೆ.

ಮೂಲತಃ ನ್ಯಾಯವಾದಿಗಳಾಗಿದ್ದ ಅಂಜನಮೂರ್ತಿ ಅವರು, ತಮ್ಮದು ಮೀಸಲು ಕ್ಷೇತ್ರವಾದರೂ ಒಂದೇ ಒಂದು ಪಿಟಿಸಿಎಲ್ ಪ್ರಕರಣಕ್ಕೆ ಅವಕಾಶ ನೀಡುತ್ತಿರಲಿಲ್ಲ. ಅವರು ಸಚಿವರಾಗಿ, ಉಪಸಭಾಪತಿಗಳಾಗಿ ಕೆಲಸ ಮಾಡಿದ್ದಾರೆ.

ಇನ್ನು, ನನ್ನ ಮತ್ತೊಬ್ಬ ಸ್ನೇಹಿತ ಇನಾಮ್ದಾರ್, ವೆಂಕಟೇಶ್ ಸ್ವಾಮಿ, ಭುಜಂಗಶೆಟ್ಟಿ, ಸಭಾಪತಿ ಅವರು ಕೂಡ ನಮ್ಮ ಜತೆ ಶಾಸಕರಾಗಿ, ಸಭಾಪತಿಯಾಗಿ ಕೆಲಸ ಮಾಡಿದ್ದಾರೆ. ಅವರು ಕೂಡ ನಮ್ಮನ್ನು ಅಗಲಿದ್ದು ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತೇನೆ ಎಂದು ಹೇಳಿದರು.

ಡಾ.ಕೆ.ಹೆಚ್.ಪ್ರಸಾದ್‌ಗೆ ಉತ್ತಮ ಡಿಹೆಚ್‌ಓ, ಡಾ.ಎಲ್.ರವಿಗೆ ಉತ್ತಮ ವೈದ್ಯ ಪ್ರಶಸ್ತಿ





ಮೈಸೂರು, ಜು.3(ಆರ್‌ಕೆ)–ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್. ಪ್ರಸಾದ್ ಅವರಿಗೆ ರಾಜ್ಯದ ಉತ್ತಮ ಡಿಹೆಚ್‌ಓ ಪ್ರಶಸ್ತಿ ಲಭಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಜುಲೈ 1ರಂದು ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಾ.ಪ್ರಸಾದ್ ಅವರಿಗೆ ರಾಜ್ಯದ ಉತ್ತಮ ಜಿಲ್ಲಾ ಆರೋಗ್ಯಾಧಿಕಾರಿ ಪ್ರಶಸ್ತಿ ಪ್ರದಾನ ಮಾಡಿದರು.

ಅದೇ ವೇಳೆ ಮೈಸೂರಿನ ಜಿಲ್ಲಾ ಆರೋಗ್ಯ ತರಬೇತಿ ಕೇಂದ್ರದ ಉಪ ನಿರ್ದೇಶಕರಾದ ಡಾ.ಎಲ್.ರವಿ ಅವರಿಗೂ ಡಾ.ಬಿ.ಸಿ.ರಾಯ್ ಪ್ರಶಸ್ತಿ (ಉತ್ತಮ ವೈದ್ಯ) ನೀಡಿ ಮುಖ್ಯಮಂತ್ರಿ ಅಭಿನಂದಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಅವರ ಅವಿರತ ಸೇವೆ ಹಾಗೂ ಕೋವಿಡ್–19 ಪರಿಸ್ಥಿತಿಯಲ್ಲಿ ಕೊರೊನಾ ನೋಡಲ್ ಅಧಿಕಾರಿಯಾಗಿ ಮಾಡಿದ ಉತ್ತಮ ಕೆಲಸವನ್ನು ಪರಿಗಣಿಸಿ, ಡಾ.ರವಿ ಅವರಿಗೆ 'ಡಾ.ಬಿ.ಸಿ.ರಾಯ್ ಉತ್ತಮ ವೈದ್ಯ' ಪ್ರಶಸ್ತಿ ನೀಡಿ ಸರ್ಕಾರ ಗೌರವಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧೆಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಯಾಗಿ, ಮೈಸೂರು, ಯಳಂದೂರು ತಾಲೂಕು ವೈದ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸಿದ ಡಾ.ಪ್ರಸಾದ್, ಮೈಸೂರು ಡಿಪಿಎಂಓ ಆಗಿ, ಚಾಮರಾಜನಗರ ಡಿಹೆಚ್‌ಓ ಆಗಿ, ಮೈಸೂರು ವಿಭಾಗದ ಡಿಜೆಡಿ ಕಚೇರಿ ಉಪ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿ ಪ್ರಸ್ತುತ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ.ಎಲ್.ರವಿ, ಹೆಚ್.ಡಿ.ಕೋಟೆ ತಾಲೂಕು ಆರೋಗ್ಯಾಧಿಕಾರಿಯಾಗಿ, ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಮುಖ್ಯ ಆಡಳಿತ ವೈದ್ಯಾಧಿಕಾರಿಯಾಗಿ ಮೈಸೂರು ಜಿಲ್ಲೆ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯಾಧಿಕಾರಿಗಳಾಗಿ ಹಾಗೂ ಕೋವಿಡ್ ವಾರ್ ರೂಂ ಮತ್ತು ವ್ಯಾಕ್ಸಿನೇಷನ್ ನೋಡಲ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಅನ್ಯರಿಗೆ ನಿವೇಶನ ಮಾರಾಟ ಆರೋಪ

ಮೈಸೂರು,ಜು.3(ಪಿಎಂ)– ಸೊಸೈಟಿಯ ಫಲಾನುಭವಿಗಳಿಗೆ ಹಂಚಿಕೆಯಾಗಬೇಕಿರುವ ನಿವೇಶನಗಳನ್ನು ಅನ್ಯರಿಗೆ ಮಾರಾಟ ಮಾಡಲಾಗುತ್ತಿದೆ ಎಂದು ಮೈಸೂರು ಧರ್ಮಪ್ರಾಂತ್ಯ ಕ್ರೈಸ್ತ ಜನರ ಅಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಸ್ಟೀಫನ್ ಸುಜೀತ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೊಸೈಟಿಯೊಂದರ ಸದಸ್ಯರಿಗೆ ಹಂಚಿಕೆಯಾಗಿದ್ದ ನಿವೇಶನಗಳನ್ನು ಸ್ಥಳೀಯ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡಿತ್ತು. ನಮ್ಮ ಸಂಘದ ನಿರಂತರ ಹೋರಾಟದ ಫಲವಾಗಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಪರ್ಯಾಯವಾಗಿ ಸದರಿ ಪ್ರಾಧಿಕಾರ ಇದೀಗ ನಿವೇಶನ ಹಂಚಿಕೆ ಪ್ರಕ್ರಿಯೆ ಆರಂಭಿಸಿದೆ ಎಂದರು.

ಆದರೆ ಸೊಸೈಟಿ ಪ್ರತಿನಿಧಿಯೊಬ್ಬರು ಫಲಾನುಭವಿಗಳಿಗೆ ವಿಚಾರ ಮುಟ್ಟಿಸದೇ, ಸೊಸೈಟಿಗೆ ನೋಂದಣಿಯಾದ ನಿವೇಶನಗಳನ್ನು ಅನ್ಯರಿಗೆ ಮಾರಾಟ ಮಾಡಲು ನಿರತವಾಗಿದ್ದಾರೆ. ಯಾವುದೇ ಕಾರಣಕ್ಕೂ ಮೂರನೇ ವ್ಯಕ್ತಿಗೆ ನಿವೇಶನ ನೋಂದಣಿ ಆಗಬಾರದೆಂದು ವಕೀಲರ ಮೂಲಕ ನೋಟಿಸ್ ನೀಡಿದ್ದರೂ ಮುಂದುವರೆದ ಹಿನ್ನೆಲೆಯಲ್ಲಿ ತಡೆಯಾಜ್ಞೆ ಕೋರಿ ಕೋರ್ಟ್ ಮೊರೆ ಹೋಗಿದ್ದೇವೆ ಎಂದು ತಿಳಿಸಿದರು. ಸಂಘದ ಪದಾಧಿಕಾರಿಗಳಾದ ಶಾಂತಪ್ಪ, ಡೊಮಿನಿಕ್, ಮರಿಜೋಸೆಫ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮೇಕೆದಾಟು ಅಣೆಕಟ್ಟು ಸಂಬಂಧ ಡಿಸಿಎಂ ಡಿಕೆ ಶಿವಕುಮಾರ್ ಸಭೆ



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ಸಮತೋಲನ ಜಲಾಶಯ ಮತ್ತು ಕುಡಿಯುವ ನೀರು ಪೂರೈಕೆ ಯೋಜನೆ ಕುರಿತು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಶಾಸಕರು ಮತ್ತು ಹಿರಿಯ ಅಧಿಕಾರಿಗಳ ಸಭೆಯನ್ನು ವಿಕಾಸಸೌಧದಲ್ಲಿ ಸೋಮವಾರ ನಡೆಸಿದರು. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸಂಸದ ಡಿ.ಕೆ.ಸುರೇಶ್, ಶಾಸಕರಾದ ಬಾಲಕೃಷ್ಣ, ಶಿವಣ್ಣ, ಶರತ್ ಬಚ್ಚೇಗೌಡ, ಇಕ್ಬಾಲ್ ಹುಸೈನ್, ಡಾ. ರಂಗನಾಥ್, ಶ್ರೀನಿವಾಸ್, ಎಂಎಲ್‌ಸಿ ಎಸ್.ರವಿ, ಜಲಸಂಪನ್ಮೂಲ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಡಿಸಿಎಂ ಆಪ್ತ ಕಾರ್ಯದರ್ಶಿ ಡಾ.ರಾಜೇಂದ್ರ ಪ್ರಸಾದ್ ಮತ್ತಿತರರು ಭಾಗವಹಿಸಿದ್ದರು.

ಇಂದಿನಿಂದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ



ಮೈಸೂರು,ಜು.3– ಜು.4 ರಿಂದ 7 ರವರೆಗೆ ಫೀಡರ್‌ಗಳ ಬ್ರೇಕರ್ ಬದಲಾವಣೆ ಕಾಮಗಾರಿ ನಿಮಿತ್ತ ಸುಭಾಷ್‌ನಗರ, ಕೆಸರೆ 1ನೇ, 2ನೇ ಹಾಗೂ 3ನೇ ಹಂತ, ನರಾ ಮೊಹಲ್ಲಾ, ಗಾಂಧಿನಗರ, ಮೊಹಮ್ಮದ್ ಸೇಠ್ ಬ್ಲಾಕ್, ವೀರನಗೆರೆ, ಉದಯಗಿರಿ, ಬನ್ನಿಮಂಟಪ, ನೆಲ್ಸನ್ ಮಂಡೇಲಾ ರಸ್ತೆ, ಎಲ್.ಐ.ಸಿ, ಹೈವೆ ವೃತ್ತ, ತಿಲಕ್‌ನಗರ, ಉಮ್ಮರ್ ಖಯ್ಯಾಂ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ರಾಜೇಂದ್ರ ನಗರ, ಮೇದರ್ ಬ್ಲಾಕ್, ಬಂಬೂ ಬಜಾರ್, ಲಯನ್ಸ್ ಕ್ಲಬ್, ಫರೂಕೀಯಾ ಡೆಂಟಲ್ ಕಾಲೇಜು, ಜೈಲ್ ವಸತಿ ಗೃಹ, ಐ.ಟಿ.ಐ ಕಾಲೇಜು, ಭಾವನಾ ಮಾರ್ಬಲ್ ರಸ್ತೆ, 'ಎ' ಬಡಾವಣೆ, ಬಿ.ಬಿ ಕೇರಿ, ಬಿ.ಟಿ ಮಿಲ್ ರಸ್ತೆ, ಈದ್ಗಾ ಮೈದಾನ, ಕಬೀರ್ ಮಠ, ಆನೆಗುಂದಿ ರಸ್ತೆ, ಹನುಮಂತನಗರ, ಕೆ.ಎಸ್. ಆರ್.ಟಿ.ಸಿ, ಎಸ್.ಎಸ್ ನಗರ, ಕಾವೇರಿ ನಗರ, ಸಿದ್ದಿಖಿನಗರ, ಬನ್ನಿಮಂಟಪ 'ಸಿ' ಬಡಾವಣೆ ಸುತ್ತ–ಮುತ್ತಲಿನ ಪ್ರದೇಶಗಳ ಗ್ರಾಹಕರಿಗೆ ಈ ಮೇಲಿನ ದಿನಗಳಲ್ಲಿ ಪರ್ಯಾಯ ವಿದ್ಯುತ್ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೂ ಯಾವುದೇ ತಾಂತ್ರಿಕ ಕಾರಣಗಳಿಂದ ವಿದ್ಯುತ್ ಅಡಚಣೆ ಉಂಟಾದಲ್ಲಿ ಸಾರ್ವಜನಿಕರು ಮತ್ತು ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಭಾರತೀಯರಲ್ಲಿ ಬೌದ್ಧಿಕ ಸಾಮರ್ಥ್ಯ ಹೆಚ್ಚಾಗಿದೆ: ಪ್ರೊ.ಕೆ.ಎಸ್.ರಂಗಪ್ಪ



ಮೈಸೂರು,ಜು.3(ಎಂಟಿವೈ)– ವಿಶ್ವದ ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಬೌದ್ಧಿಕ ಸಾಮರ್ಥ್ಯ (ಐಕ್ಯೂ) ಉತ್ತಮ ಸ್ಥಾನದಲ್ಲಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್ ರಂಗಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಆಯೋಜಿಸಿದ್ದ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರದಲ್ಲಿ ಮಾತನಾಡಿದರು.

ವಿಶ್ವದ ಬಹುತೇಕ ದೇಶಗಳಲ್ಲಿ ಭಾರತೀಯ ಮೂಲದ ವಿಜ್ಞಾನಿಗಳೇ ಹೆಚ್ಚಾಗಿದ್ದಾರೆ. ಯಾವುದೇ ಒಂದು ದೇಶ ಪ್ರಖ್ಯಾತಿಯಾಗಬೇಕಾದರೆ ಅಲ್ಲಿನ ವಿಜ್ಞಾನಿಗಳು, ಇಂಜಿನಿಯರ್‌ಗಳ ಸಾಧನೆ ಹೆಚ್ಚಾಗಿರುತ್ತದೆ. ಕೌಶಲ್ಯ ಪಡೆದುಕೊಳ್ಳುವುದು ಇಂದಿನ ಜಾಗತೀಕ ಮತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲರಿಗೂ ಅತ್ಯವಶ್ಯಕ. ಯಾರಲ್ಲಿ ಅಪಾರವಾದ ಕೌಶಲ್ಯಗಳಿರುತ್ತವೆಯೋ ಅವರು ಮಾತ್ರ ಪ್ರಪಂಚದ ಯಾವುದೇ ದೇಶದಲ್ಲಿ ಬೇಕಾದರೂ ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ. ಜಾಗತಿಕ ಮಟ್ಟದಲ್ಲಿ ಆಲೋಚನೆ ಮಾಡಿದಾಗ ಮಾತ್ರ ಇಂದಿನ ಕಾಲದಲ್ಲಿ ಮುಂದೆ ಬರಲು ಸಾಧ್ಯ ಎಂದು ಹೇಳಿದರು.

ಇಂಗ್ಲಿಷ್ ಭಾಷೆಗೆ ಜಾಗತಿಕ ಮನ್ನಣೆ ಇರುವುದರಿಂದ ಬಹುತೇಕರು ಆ ಭಾಷೆ ಕಲಿಯಲು ಬಯಸುತ್ತಾರೆ. ಕಲಿಕೆಗೆ ಯಾವುದೇ ರೀತಿಯ ತಾರತಮ್ಯ ಇರುವುದಿಲ್ಲ. ನಾವು ಪಿಯುಸಿಯನ್ನು ಕನ್ನಡ ಭಾಷೆಯಲ್ಲಿ ಕಲಿಯುವುದರಿಂದ ಬಿಎಸ್‌ಸಿ ಇಂಗ್ಲಿಷ್ ಮಾಧ್ಯಮಕ್ಕೆ ಪ್ರವೇಶವೇ ಸಿಗುವುದಿಲ್ಲ. ಸರ್ಕಾರಿ ಶಾಲೆಗಳಲ್ಲೂ ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಇಂಗ್ಲಿಷ್ ಕಲಿಸುತ್ತಿರುವುದು ಉತ್ತಮ ಬೆಳವಣಿಗೆ. ಇದರಿಂದ ಮುಂದಿನ ದಿನಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವವರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದರು.

ಇದುವರೆಗೂ ನೋಬೆಲ್ ಪ್ರಶಸ್ತಿ ಪಡೆದವರಲ್ಲಿ ಬಹುತೇಕರು ಭಾಷಾ ಸಮಸ್ಯೆಗಳನ್ನು ಎದುರಿಸಿದವರಾಗಿದ್ದಾರೆ. ಆದರೆ, ಅವರ ಸಾಧನೆಗೆ ಭಾಷೆ ಎಂದೂ ತೊಡಕಾಗಲಿಲ್ಲ. ಇಂತಹ ನೂರಾರು ಸಮಸ್ಯೆಗಳ ನಡುವೆಯೂ ಜಗತ್ತು ಮೆಚ್ಚುವಂತ ಸಾಧನೆ ಮಾಡಿದ್ದಾರೆ. ಅಂತಹವರನ್ನು ಇಂದಿನ ಯುವ ಪೀಳಿಗೆ ಮಾದರಿಯಾಗಿ ಸ್ವೀಕರಿಸಬೇಕು. ಇಂಗ್ಲಿಷ್ ಜೊತೆಗೆ ಕಂಪ್ಯೂಟರ್ ಹಾಗೂ ಇನ್ನಿತರ ಕೌಶಲ್ಯಭರಿತ ಶಿಕ್ಷಣ ಪಡೆದುಕೊಳ್ಳಲು ವಿದ್ಯಾರ್ಥಿಗಳು ಮುಂದಾಗಬೇಕು. ಮಹಿಳೆಯರ ಶಿಕ್ಷಣಕ್ಕೆ ಸರ್ಕಾರ ಸಾಕಷ್ಟು ಅನುದಾನ ನೀಡುತ್ತಿವೆ. ಅದನ್ನು ಬಳಸಿಕೊಂಡು ಉದ್ಯೋಗಸ್ಥರಾಗಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿ ಪ್ರೊ.ಎಸ್.ಎನ್ ಹೆಗ್ಡೆ ಮಾತನಾಡಿ, ಓದಿನ ಜೊತೆಗೆ ಒಂದಷ್ಟು ಕೌಶಲ್ಯಗಳನ್ನು ಮೈಗೂಡಿಸಿಕೊಂಡರೆ ಯಾರೂ ನಿರುದ್ಯೋಗಿಗಳಾಗಿ ಉಳಿಯಲು ಸಾಧ್ಯವಿಲ್ಲ. ಸಾಕಷ್ಟು ಕಂಪನಿಗಳು ದೇಶದತ್ತ ಮುಖ ಮಾಡುತ್ತಿವೆ. ಉದ್ಯೋಗ ಅವಕಾಶಗಳೂ ಹೆಚ್ಚಿವೆ. ಆದ್ದರಿಂದ ವಿದ್ಯಾರ್ಥಿಗಳು ಕೌಶಲ್ಯ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಮಹಾರಾಣಿ ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಪ್ರೊ. ಸೋಮಣ್ಣ, ನಿವೃತ್ತ ಕುಲಪತಿ ಎಸ್.ಎನ್. ರಾಮೇಗೌಡ, ಪ್ರೊ.ಎಸ್.ಶ್ರೀಕಂಠಸ್ವಾಮಿ, ಸ್ವಾಸ್ಥ್ಯ ಹಾಗೂ ಆಹಾರ ತಜ್ಞೆ ನಂದಿನಿ ಮೂರ್ತಿ ಹಾಗೂ ಇತರರು ಉಪಸ್ಥಿತರಿದ್ದರು.

ಉರುಳಿಗೆ ಸಿಲುಕಿ ಚಿರತೆ ಸಾವು

ಜಮೀನು ಮಾಲೀಕನ ಮೇಲೆ ಕೇಸ್



ಕುಶಾಲನಗರ, ಜು.3– ಸಮೀಪದ ಗುಡ್ಡೆಹೊಸೂರು–ಹಾರಂಗಿ ರಸ್ತೆಯ ಜಮೀನಿನಲ್ಲಿ ಚಿರತೆಯೊಂದು ಮೃತಪಟ್ಟಿರುವ ಘಟನೆ ನಡೆದಿದೆ.

ಮೂರರಿಂದ ನಾಲ್ಕು ವರ್ಷ ಪ್ರಾಯದ ಗಂಡು ಚಿರತೆ ಮೃತಪಟ್ಟಿದ್ದು, ಜಮೀನಿನಲ್ಲಿ ಕಾಡುಪ್ರಾಣಿಗಳ ಹಾವಳಿ ತಡೆಯಲು ಕಾನೂನುಬಾಹಿರವಾಗಿ ಅಳವಡಿಸಿದ್ದ ಉರುಳಿಗೆ ಸಿಲುಕಿ ಚಿರತೆ ಮೃತಪಟ್ಟಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಕ್ಕೆ ಮಡಿಕೇರಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್.ಎನ್.ಮೂರ್ತಿ, ಮಡಿಕೇರಿ ಉಪ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಪೂವಯ್ಯ, ಸೋಮವಾರಪೇಟೆ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚಿರತೆಯ ಸಾವಿಗೆ ಕಾರಣರಾದ ಜಮೀನಿನ ಮಾಲೀಕ ನಿಜಾಮುದ್ದೀನ್ ವಿರುದ್ಧ ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪಶುವೈದ್ಯರಾದ ಡಾ.ಚಿಟ್ಟಿಯಪ್ಪ ಹಾಗೂ ಡಾ.ರಮೇಶ್ ಅವರು ಶವ ಪರೀಕ್ಷೆ ನಡೆಸಿ ನಂತರ ಆನೆ ಕಾಡು ಅರಣ್ಯ ಪ್ರದೇಶದಲ್ಲಿ ಅರಣ್ಯ ಸಿಬ್ಬಂದಿಗಳು ಚಿರತೆಯ ಅಂತಿಮ ಸಂಸ್ಕಾರ ನೆರವೇರಿಸಿದರು. ಈ ಸಂದರ್ಭ ಆನೆಕಾಡು ವಲಯದ ಉಪ ವಲಯ ಅರಣ್ಯಾಧಿಕಾರಿ ಅನಿಲ್ ಡಿಸೋಜ ಹಾಗೂ ಸಿಬ್ಬಂದಿಗಳು ಇದ್ದರು.

ಇದು ಕೆಸರುಗದ್ದೆಯಲ್ಲ...

ಮಡಿಕೇರಿ–ವಿರಾಜಪೇಟೆ ರಸ್ತೆ

- ವಾಹನ ಸವಾರರ ಪರದಾಟ
- ಕಣ್ಮುಚ್ಚಿ ಕುಳಿತಿರುವ ಗ್ರಾಪಂ ಆಡಳಿತ

ಮಡಿಕೇರಿ, ಜು.3– ಮಳೆಯಿಂದ ರಸ್ತೆ ತುಂಬೆಲ್ಲಾ ಶೇಖರಣೆಗೊಂಡಿರುವ ಕೆಸರು ಮಿಶ್ರಿತ ನೀರು... ಕೆಸರುಮಯ ನೀರಿನಿಂದ ತಪ್ಪಿಸಿಕೊಂಡು ಹರಸಾಹಸದಿಂದ ಚಲಿಸುತ್ತಿರುವ ವಾಹನಗಳು...ಇದು ಮಡಿಕೇರಿ ಸಮೀಪದ ಮೇಕೇರಿ ಗ್ರಾಮ ಪಂಚಾಯತ್ ಮುಂಭಾಗದಲ್ಲಿ ಕಂಡು ಬರುವ ದೃಶ್ಯ..ಮೇಕೇರಿ ಗ್ರಾಮ ಪಂಚಾಯತ್‌ನ ನೂತನ ಕಟ್ಟಡ ನಿರ್ಮಾಣಕ್ಕೆಂದು ಗುರುತಿಸಲಾದ ಜಾಗದಲ್ಲಿ ಅವೈಜ್ಞಾನಿಕವಾಗಿ ಮಣ್ಣು ತೆರವು ಕಾರ್ಯ ನಡೆದಿದ್ದು, ಮಳೆ ಬಂದ ಸಂದರ್ಭ ಮಣ್ಣು ತೆಗೆದ ಸ್ಥಳದಿಂದ ಕೆಸರು ಮಿಶ್ರಿತ ನೀರು ಮಡಿಕೇರಿ–ವಿರಾಜಪೇಟೆ ಮುಖ್ಯ ರಸ್ತೆಗೆ ಹರಿದು ಬರುತ್ತಿದೆ.

ಮಣ್ಣು ತೆರವು ಸಂದರ್ಭ ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸದೆ ಹಾಗೇ ಬಿಟ್ಟಿರುವುದು ಇದಕ್ಕೆಲ್ಲ ಪ್ರಮುಖ ಕಾರಣವಾಗಿದೆ. ರಸ್ತೆಯ ಮೇಲೆ ಹರಿದು ಬರುವ ಮಣ್ಣು ಮಿಶ್ರಿತ ನೀರಿನಿಂದ ಸಮೀಪದ ಬಸ್ ತಂಗುದಾಣದ ಬಳಿಯಲ್ಲೊಂದು ಈಜುಕೊಳವೇ ನಿರ್ಮಾಣವಾಗಿದ್ದು, ರಸ್ತೆ ಸಂಪೂರ್ಣ ಕೆಸರುಮಯವಾಗಿದೆ.



ಮಡಿಕೇರಿ–ವಿರಾಜಪೇಟೆ ಹೆದ್ದಾರಿಯಲ್ಲಿ ವೇಗವಾಗಿ ಚಲಿಸುವ ವಾಹನಗಳು ಈ ಕೆಸರು ನೀರನ್ನು ತಪ್ಪಿಸಲು ಹೋಗಿ ಅಪಾಯವನ್ನು ಆಹ್ವಾನಿಸಿದಂತಿದೆ.

ಅಲ್ಲದೇ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಂದ ಚಿಮ್ಮುವ ಕೆಸರು ಮಿಶ್ರಿತ ನೀರು ಬಸ್ ತಂಗುದಾಣದಲ್ಲಿ ಬಸ್ಸಿಗೆಂದು ಕಾದುಕುಳಿತ ಪ್ರಯಾಣಿಕರ ಮೇಲೆ ಸಿಂಚನವಾಗುತ್ತಿದ್ದು, ಸಭೆ ಸಮಾರಂಭಗಳಿಗೆ ತೆರಳಲೆಂದು ಬೆಲೆಬಾಳುವ ಬಟ್ಟೆಧರಿಸಿ ಬಸ್ ತಂಗುದಾಣಕ್ಕೆ ಬರುವ ಸಾರ್ವಜನಿಕರ ಮೇಲೆ ಕೆಸರು ನೀರಿನ ಮಜ್ಜನವಾಗುವುದರಿಂದ ಪಂಚಾಯ್ತಿ ಆಡಳಿತಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ಅಲ್ಲದೇ ಮೇಕೇರಿಯ ಸರ್ಕಾರಿ ಪ್ರಾಥಮಿಕ ಶಾಲೆಯೂ ಇದೇ ಪ್ರದೇಶದಲ್ಲಿದ್ದು, ವಿದ್ಯಾರ್ಥಿಗಳು ಶಾಲೆಗೆ ಬರುವ ಸಂದರ್ಭ ಕೆಸರು ರಸ್ತೆಯನ್ನು ದಾಟಿ ಬರಬೇಕಿದೆ.

ಇನ್ನು ವಾಹನಗಳು ಕೆಸರು ಮಿಶ್ರಿತ ನೀರನ್ನು ತಪ್ಪಿಸಿಕೊಂಡು ಬರುವ ಸಂದರ್ಭ ಅಪಘಾತಗಳು ಸಂಭವಿಸುವುದನ್ನು ಅಲ್ಲಗಳೆಯುವಂತಿಲ್ಲ. ಪಂಚಾಯತ್ ಕಟ್ಟಡಕ್ಕೆ ಮಣ್ಣು ತೆಗೆಯಲಾದ ಸ್ಥಳದಲ್ಲಿ ಮರಗಳನ್ನು ಶೇಖರಿಸಿರು ವುದು ಕಂಡು ಬಂದಿದ್ದು, ಬೃಹತ್ ಗಾತ್ರದ ಕ್ರೇನ್‌ಗಳನ್ನ ಬಳಸಿ ಲೋಡ್–ಅನ್ ಲೋಡ್ ಮಾಡಲಾಗುತ್ತಿದೆ. ಇದರಿಂದ ಆ ಪ್ರದೇಶ ಕೆಸರುಮಯವಾಗಿ ನಾಟಿ ಕಾರ್ಯಕ್ಕೆ ಅಣಿಯಾದ ಗದ್ದೆಯಂತಾಗಿದೆ.

ಅಷ್ಟಕ್ಕೂ ಈ ಸ್ಥಳ ಮೇಕೇರಿ ಗ್ರಾಮ ಪಂಚಾಯತ್‌ನ ಮುಂಭಾಗದಲ್ಲೇ ಇದ್ದರೂ ಸಹ ಇದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಪಂಚಾಯತ್ ಆಡಳಿತ ಕಣ್ಮುಚ್ಚಿ ಕುಳಿತಿದೆ. ಈ ಭಾಗದ ಪಂಚಾಯತ್ ಸದಸ್ಯರೊಬ್ಬರ ಮನೆಯ ಮುಂಭಾಗದಲ್ಲೇ ಈ ಸಮಸ್ಯೆ ಕಂಡು ಬಂದರೂ ಸಹ ಕ್ರಮವಹಿಸದೇ ನಿರ್ಲಕ್ಷ್ಯ ತೋರಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಇನ್ನಾದರು ಮೇಕೇರಿ ಗ್ರಾಮ ಪಂಚಾಯತ್ ಎಚ್ಚೆತ್ತು ಕಣ್ಣಮುಂದಿರುವ ಸಮಸ್ಯೆಯನ್ನು ಬಗೆಹರಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕೆಂದು ಆಗ್ರಹ ಕೇಳಿ ಬಂದಿದೆ.

ಲಾರಿ–ಕಾರು ಮುಖಾಮುಖಿ ಡಿಕ್ಕಿ

ಮುಂಬೈ ಮೂಲದ ಮಹಿಳೆ ಸಾವು

- ಸುಂಟಿಕೊಪ್ಪ ಬಳಿ ದುರಂತ
- ಎರಡು ದ್ವಿಚಕ್ರ ವಾಹನಗಳು ಜಖಂ
- ಕಾರ್‌ಗೆ ಡಿಕ್ಕಿ ಹೊಡೆದು ಬಾರ್‌ಗೆ ನುಗ್ಗಿದ ಲಾರಿ

ಸುಂಟಿಕೊಪ್ಪ, ಜು.3– ಲಾರಿ ಮತ್ತು ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾಗಿ ಮುಂಬೈ ಮೂಲದ ಮಹಿಳೆ ಸಾವನ್ನಪ್ಪಿದ್ದು, ಆಕೆಯ ಪತಿ ಮತ್ತು ಕಾರು ಚಾಲಕ ತೀವ್ರವಾಗಿ ಗಾಯಗೊಂಡ ಘಟನೆ ಇಲ್ಲಿಗೆ ಸಮೀಪದ ಗದ್ದೆಹಳ್ಳ ಬಳಿ ಸೋಮವಾರ ರಾತ್ರಿ 9.30ರ ಸುಮಾರಿನಲ್ಲಿ ಸಂಭವಿಸಿದೆ.

ಮಡಿಕೇರಿ ಕಡೆಯಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಕಾರು ಮತ್ತು ಎದುರಿಗೆ ಬಂದ ಲಾರಿಯ ನಡುವೆ ಮುಖಾಮುಖಿ ಡಿಕ್ಕಿಯಾಗಿದ್ದು, ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಮುಂಬೈ ಮೂಲದ ಸೀಮಾ ಎಂಬವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ತೀವ್ರವಾಗಿ ಗಾಯಗೊಂಡ ಆಕೆಯ ಪತಿ ಮತ್ತು ಕಾರು ಚಾಲಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕುಶಾಲನಗರ ಕಡೆಯಿಂದ ವೇಗವಾಗಿ ಬರುತ್ತಿದ್ದ ಲಾರಿ ತಿರುವಿನಲ್ಲಿ ಕಾರಿಗೆ ಡಿಕ್ಕಿ ಹೊಡೆದ ನಂತರ ಎದುರಿನ ವಂದನಾ ಬಾರ್‌ಗೆ ನುಗ್ಗಿದೆ. ಈ ವೇಳೆ ಬಾರ್ ಮುಂದೆ ನಿಲ್ಲಿಸಿದ್ದ ಎರಡು ದ್ವಿಚಕ್ರ ವಾಹನಗಳು ಜಖಂ ಆಗಿದೆ. ಲಾರಿಯು ಬಾರ್‌ನ ಮುಂಬದಿ ಆವರಣಕ್ಕೆ ನುಗ್ಗಿದ್ದು, ಸಾಮಾನ್ಯವಾಗಿ ಈ ಸ್ಥಳದಲ್ಲಿ ಗ್ರಾಹಕರು ಇರುತ್ತಿದ್ದರು. ಇಂದು ಸಣ್ಣ ಪ್ರಮಾಣದಲ್ಲಿ ಮಳೆ ಸುರಿಯುತ್ತಿದ್ದರಿಂದ ಗ್ರಾಹಕರು ಅಲ್ಲಿ ಕೂರದೇ ಬಾರ್‌ನ ಒಳಭಾಗಕ್ಕೆ ಹೋಗಿದ್ದರಿಂದಾಗಿ ದೊಡ್ಡ ಅನಾಹುತ ತಪ್ಪಿದಂತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪಘಾತದಲ್ಲಿ ಮೃತಪಟ್ಟವರು ಮುಂಬೈ ಮೂಲದ ಮಹಿಳೆ ಎಂಬುದು ಮಾತ್ರ ಗೊತ್ತಿದ್ದು, ಈಕೆ ಮತ್ತು ಅವರ ಪತಿ ಕೊಡಗಿಗೆ ಪ್ರವಾಸಕ್ಕೆ ಬಂದಿದ್ದರೆ ಅಥವಾ ಮಂಗಳೂರಿನಿಂದ ಈ ಮಾರ್ಗವಾಗಿ ತೆರಳುತ್ತಿದ್ದರೇ ಎಂಬುದರ ಬಗ್ಗೆ ಸದ್ಯಕ್ಕೆ ಮಾಹಿತಿ ಲಭ್ಯವಿಲ್ಲ. ಅಪಘಾತದ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ದೌಡಾಯಿಸಿದ ಸುಂಟಿಕೊಪ್ಪ ಠಾಣೆ ಪೊಲೀಸರು ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಅಪಘಾತದಲ್ಲಿ ಗಾಯಗೊಂಡಿರುವ ಕಾರು ಚಾಲಕನ ಸ್ಥಿತಿ ಗಂಭೀರವಾಗಿದೆ ಹಾಗೂ ಮಹಿಳೆಯ ಪತಿ ಅಪಾಯದಿಂದ ಪಾರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅಲ್ಲದೆ, ಎರಡೂ ವಾಹನಗಳನ್ನು ತೆರವುಗೊಳಿಸಿ ಸಂಚಾರ ಮುಕ್ತಗೊಳಿಸಿದ್ದಾರೆ.

ಈ ಸಂಬಂಧ ಸುಂಟಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪಘಾತದ ಭೀಕರ ದೃಶ್ಯ ಅಲ್ಲಿನ ವಂದನಾ ಬಾರ್ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಕೇಂದ್ರ ಸರ್ಕಾರದ ವಿರುದ್ಧ, ಮಣಿಪುರ ಹಿಂಸಾಚಾರ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ



ಸಿದ್ದಾಪುರ, ಜು.3– ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಅಕ್ಕಿ ನೀಡುವಲ್ಲಿ ರಾಜಕೀಯ ಮಾಡುತ್ತಿದ್ದು ಹಾಗೂ ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರ ಖಂಡಿಸಿ ಸಿಪಿಐ(ಎಂ) ವತಿಯಿಂದ ನೆಲ್ಯಹುದಿಕೇರಿಯಲ್ಲಿ ಪ್ರತಿಭಟನೆಯನ್ನು ನಡೆಸಲಾಯಿತು.

ಈ ವೇಳೆ ಮಾತನಾಡಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಚ್. ಬಿ. ರಮೇಶ್, ರಾಜ್ಯ ಸರ್ಕಾರದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಹೆಚ್ಚುವರಿ ಆಹಾರ ಧಾನ್ಯ ನೀಡಲು ಭಾರತ ಆಹಾರ ನಿಗಮದ ಅಧಿಕಾರಿಗಳು ಒಪ್ಪಿದರೂ ಕೇಂದ್ರ ಸರ್ಕಾರದ ಸೂಚನೆ ನಂತರ ಕೊಡಲು ನಿರಾಕರಣೆ ಮಾಡಿದ್ದು ಬಡವರ ವಿರೋಧಿ ಧೋರಣೆಯಾಗಿದೆ. ರಾಜ್ಯಕ್ಕೆ ಅಗತ್ಯ ಇರುವ ಅಕ್ಕಿಯನ್ನು ಕೇಂದ್ರ ಸರ್ಕಾರ ಸರಬರಾಜು ಮಾಡಬೇಕೆಂದು ಒತ್ತಾಯಿಸಿದರು. ನೆಲ್ಯಹುದಿಕೇರಿ ಘಟಕದ ಶಾಖಾ ಕಾರ್ಯದರ್ಶಿ ಭರತ್ ಮಾತನಾಡಿ, ಮಣಿಪುರದಲ್ಲಿ ಆರಂಭವಾದ ಕೋಮುವಾದಿ ಹತ್ಯೆ ಮತ್ತು ಗಲಭೆಗಳು ಈಗಲೂ ಮುಂದುವರಿಯುತ್ತಿವೆ. ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು ನೂರಾರು ಜನ ಪ್ರಾಣ ಕಳೆದುಕೊಂಡಿದ್ದಾರೆ. ಮಣಿಪುರ ಹೊತ್ತಿ ಉರಿಯುತ್ತಿದೆ. ಪ್ರಧಾನಮಂತ್ರಿ ಈ ಕುರಿತು ಒಂದೇ ಒಂದು ಮಾತು ಸಹ ಆಡದಿರುವುದು ಅತ್ಯಂತ ದುರದೃಷ್ಟಕರ. ಶಾಂತಿ ನೆಲೆಸಲು, ಜನಜೀವನ ಮೊದಲಿನ ಸ್ಥಿತಿಗೆ ಬರಲು ಕ್ರಮ ಕೈಗೊಳ್ಳುವ ಬದಲು ಜನರ ಜೀವನದೊಂದಿಗೆ ಆಟವಾಡುವ ಮನಸ್ಥಿತಿ ಪ್ರದರ್ಶನ ಮಾಡುತ್ತಿದೆ. ಸರ್ಕಾರ ಕೂಡಲೇ ಗಲಭೆ ನಿಲ್ಲಿಸಿ ಶಾಂತಿ ಕಾಪಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರಾದ ಟಿ.ಟಿ. ಉದಯಕುಮಾರ್, ಚಂದ್ರ, ಅಬಿಬ್, ರವಿ, ಜೋಸ್, ದಿವ್ಯ, ಲಿಖಿತ, ಆಕುಣಿ ಮುಂತಾದವರು ಹಾಜರಿದ್ದರು.

ಜು.8, ಲೋಕ್ ಅದಾಲತ್

ಮಡಿಕೇರಿ, ಜು.3– ಗ್ರಾಹಕರ ವ್ಯಾಜ್ಯಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವ ನಿಟ್ಟಿನಲ್ಲಿ ಜು.8 ರಂದು ಲೋಕ್ ಅದಾಲತ್ ನಡೆಯಲಿದೆ ಆ ದಿನದಂದು ಸಂಬಂಧಪಟ್ಟವರು ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳನ್ನು ಗುರುತಿಸಿಕೊಂಡು ಇತ್ಯರ್ಥಪಡಿಸಿಕೊಳ್ಳುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸಹಾಯಕ ಆಡಳಿತಾಧಿಕಾರಿ ಹಾಗೂ ಸಹಾಯಕ ರಿಜಿಸ್ಟ್ರಾರ್ ಶಾರದ ಅವರು ತಿಳಿಸಿದ್ದಾರೆ.

ವೃದ್ಧೆ ವಾಸವಿದ್ದ ಒಂಟಿ ಮನೆಯಲ್ಲಿ ಕಳವಿಗೆ ಯತ್ನ

- ಹಾರೆಯಿಂದ ಬಾಗಿಲು ಮೀಟಲು ಮುಂದಾದ ಖದೀಮ
- ವೃದ್ಧೆಯ ಸಮಯಪ್ರಜ್ಞೆಯಿಂದ ಕಳ್ಳ ಪರಾರಿ

ಮಡಿಕೇರಿ, ಜು.3– ಒಂಟಿ ಮನೆಯಲ್ಲಿ ವೃದ್ಧೆ ಮಾತ್ರವೇ ಇರುವುದನ್ನು ಖಚಿತಪಡಿಸಿಕೊಂಡು ಖದೀಮನೋರ್ವ ಕಳ್ಳತನಕ್ಕೆ ಯತ್ನ ನಡೆಸಿ ರುವ ಘಟನೆ ಪೊನ್ನಂಪೇಟೆ ತಾಲೂಕಿನ ಕಾನೂರು ಗ್ರಾ.ಪಂ. ವ್ಯಾಪ್ತಿಯ ಬೆಕ್ಕೆಸೊಡ್ಲೂರು ಗ್ರಾಮದಲ್ಲಿ ನಡೆದಿದೆ. ಮನೆ ಒಡತಿಯ ಸಮಯಪ್ರಜ್ಞೆಯಿಂದ ಬಹುದೊಡ್ಡ ಅನಾಹುತವೊಂದು ತಪ್ಪಿದಂತಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಶ್ವಾನದಳ ಮತ್ತು ಪೊನ್ನಂಪೇಟೆ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದು, ಈ ಕುರಿತು ಪ್ರಕರಣ ದಾಖಲಾಗಿದೆ.

ವಿವರ: ಬೆಕ್ಕೆಸೊಡ್ಲೂರು ಗ್ರಾಮದಲ್ಲಿ ಎಸ್. ಗಂಗಮ್ಮ ಎಂಬವರು ಒಂಟಿ ಮನೆಯಲ್ಲಿ ಏಕಾಂಗಿಯಾಗಿ ವಾಸವಿದ್ದು, ಇವರ ಇಬ್ಬರು ಪುತ್ರರು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾನುವಾರ ರಾತ್ರಿ 11 ಗಂಟೆ ವೇಳೆಗೆ ಕಳ್ಳನೊಬ್ಬ ಮನೆಗೆ ಬಂದಿದ್ದು, ಕಾಲಿಂಗ್ ಬೆಲ್ ಒತ್ತಿದ್ದಾನೆ. ಆದರೆ ರಾತ್ರಿಯಾದ ಕಾರಣ ಗಂಗಮ್ಮ ಬಾಗಿಲು ತೆರೆಯಲು ಮುಂದಾಗಿಲ್ಲ. ಹೀಗಾಗಿ ಕಳ್ಳ ಮುಂದಿನ ಬಾಗಿಲನ್ನು ಹಾರೆ ಬಳಸಿ ಮೀಟಿ ತೆರೆಯಲು ಪ್ರಯತ್ನಿಸಿದ್ದಾನೆ. ಮುಂಬಾಗಿಲು ತೆರೆಯದ ಕಾರಣ ಹಿಂಬದಿಯ ಬಾಗಿಲನ್ನು ಮುರಿಯುವ ಪ್ರಯತ್ನ ನಡೆಸಿದ್ದಾನೆ. ಈ ಸಂದರ್ಭ ಎಚ್ಚೆತ್ತ ಗಂಗಮ್ಮ ತಮ್ಮ ಮಗಳು ಮತ್ತು ಅಳಿಯನಿಗೆ ಮೊಬೈಲ್ ಮೂಲಕ ಘಟನೆಯ ಬಗ್ಗೆ ಮಾಹಿತಿ ನೀಡಿದ್ದಾರೆ.



ವೃದ್ಧೆಯ ಸಮಯಪ್ರಜ್ಞೆ: ಕಳ್ಳ ಬಾಗಿಲು ಮುರಿದು ಮನೆಗೆ ನುಗ್ಗುವುದನ್ನು ಅರಿತ ವೃದ್ಧೆ ಗಂಗಮ್ಮ ಅವರು, ಮಗನಿಗೆ ಕೋವಿಯಿಂದ ಗುಂಡು ಹಾರಿಸುವಂತೆ ಜೋರಾಗಿ ಬೊಬ್ಬೆ ಹಾಕಿದ್ದಾರೆ. ಇದರಿಂದ ಹೆದರಿದ ಕಳ್ಳ ಸ್ಥಳದಿಂದ ಪರಾರಿಯಾಗಿದ್ದಾನೆ. ಗಂಗಮ್ಮ ಅವರ ಮನೆಗೆ ಹೊಂದಿಕೊಂಡಂತೆ ಬ್ಯಾಂಕ್ ಒಂದಿದ್ದು, ಕಳ್ಳತನ ಮಾಡುವ ಮೊದಲೇ ಅದರ ಸಿ.ಸಿ. ಕ್ಯಾಮರಾಗಳನ್ನು ಕಳ್ಳ ಹಾಳುಗೆಡವಿರುವುದು ಕಂಡು ಬಂದಿದೆ. ಮಾತ್ರವಲ್ಲದೇ ಬ್ಯಾಂಕ್‌ನ ಹಿಂಬದಿಯ ಕಿಟಕಿಯನ್ನು ಒಡೆಯಲಾಗಿದ್ದು, ಆವರಣದಲ್ಲಿದ್ದ 4 ಸಿ.ಸಿ. ಕ್ಯಾಮರಾಗಳ ಪೈಕಿ 3 ಕ್ಯಾಮರಾಗಳನ್ನು ಕಳ್ಳ ಹೊತ್ತೊಯ್ದಿದ್ದಾನೆ. ಮತ್ತೊಂದು ಕ್ಯಾಮರಾದಲ್ಲಿ ಕಳ್ಳನ 2 ಸೆಕೆಂಡ್‌ಗಳ ವಿಡಿಯೋ ಸೆರೆಯಾಗಿದ್ದು, ಈ ದೃಶ್ಯಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದು ಬಂದಿದೆ.

ಪ್ರಕರಣ ದಾಖಲು: ಮನೆ ಕಳ್ಳತನದ ವಿಫಲ ಯತ್ನ ನಡೆದ ಸ್ಥಳಕ್ಕೆ ಜಿಲ್ಲಾ ಶ್ವಾನದಳ ಮತ್ತು ಪೊನ್ನಂಪೇಟೆ ಪೊಲೀಸರು ಆಗಮಿಸಿ ಮಹಜರು ನಡೆಸಿದರು. ಬ್ಯಾಂಕ್ ಆವರಣವನ್ನು ಪರಿಶೀಲನೆ ನಡೆಸಿದ ಸಂದರ್ಭ ಸಮೀಪದಲ್ಲೇ ಕೆಂಪು ಬಣ್ಣದ ಬ್ಯಾಗ್ ಒಂದು ದೊರೆತ್ತಿದ್ದು, ಪೊಲೀಸರು ಅದನ್ನು ವಶಕ್ಕೆ ಪಡೆದಿದ್ದಾರೆ. ಈ ಘಟನೆ ಕುರಿತು ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ವಿಜೃಂಭಣೆಯ ಶ್ರೀ ಚಾಮರಾಜೇಶ್ವರಸ್ವಾಮಿ ಬ್ರಹ್ಮರಥೋತ್ಸವ



ನವದಂಪತಿಗಳ ಸಂಭ್ರಮ

ಚಾಮರಾಜನಗರ, ಜು.3– ನಗರದ ಐತಿಹಾಸಿಕ ಚಾಮರಾಜೇಶ್ವರಸ್ವಾಮಿ ರಥೋತ್ಸವವು ಸಾವಿರಾರು ಭಕ್ತರ ಹರ್ಷೋದ್ಗಾರಗಳ ನಡುವೆ ಸೋಮವಾರ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಅಂಗವಾಗಿ ಬೆಳಗ್ಗೆಯಿಂದಲೂ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು. ಮಧ್ಯಾಹ್ನ 12 ಗಂಟೆಗೆ ಕನ್ಯಾ ಲಗ್ನದಲ್ಲಿ ಶ್ರೀಚಾಮರಾಜೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ತಂದು ರಥ ಸುತ್ತಲು ಪ್ರದಕ್ಷಿಣೆ ಹಾಕಿ ನಂತರ 12.15ರ ಸುಮಾರಿನಲ್ಲಿ ರಥದಲ್ಲಿ ಕೂರಿಸಲಾಯಿತು. ಈ ವೇಳೆ ರಥದ ಸುತ್ತ ನೆರೆದಿದ್ದ ಭಕ್ತರು ಹಣ್ಣು–ಜವನ ಎಸೆದರು. ನಂತರ ಸ್ವಾಮಿ ಪೂಜೆ ಸಲ್ಲಿಸಿ, 12.40ರ ಸುಮಾರಿನಲ್ಲಿ ರಥ ಎಳೆಯುವುದಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಮಾಜಿ ಶಾಸಕ ಜಿ.ಎನ್. ನಂಜುಂಡ ಸ್ವಾಮಿ, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಕನಿಷ್ಠ ವೇತನಾ ಸಲಹ ಮಂಡಳಿ ಮಾಜಿ ಅಧ್ಯಕ್ಷ ಆರ್. ಉಮೇಶ್, ಕೆಆರ್‌ಡಿಐಎಲ್ ಮಾಜಿ ಅಧ್ಯಕ್ಷ ಆರ್. ರುದ್ರೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಹಾಗೂ ಎಲ್ಲಾ ಕೋಮುಗಳ ಮುಖಂಡರು ರಥದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಚಾಮರಾಜೇಶ್ವರಸ್ವಾಮಿಗೆ ಪೂಜೆ ಸಲ್ಲಿಸಿ, ಪ್ರಾರ್ಥಿಸಿದರು.

ತೇರು ಮುಂದೆ ಸಾಗಲು ಆರಂಭವಾಗುತ್ತಿದ್ದಂತೆಯೇ ದೇವಸ್ಥಾನದ ಆವರಣದಲ್ಲಿ ಕಿಕ್ಕಿರಿದು ಸೇರಿದ್ದ ಭಕ್ತರು ಹಣ್ಣು ಜವನ, ನಾಣ್ಯವನ್ನು ತೇರಿಗೆ ಎಸೆದು ಹರ್ಷೋದ್ಗಾರ ಮಾಡಿದರು. ನೂರಾರು ಸಂಖ್ಯೆಯ ನವ ದಂಪತಿಗಳು ಉತ್ಸವದಲ್ಲಿ ಪಾಲ್ಗೊಂಡು, ರಥೋತ್ಸವವನ್ನು ಕಣ್ತುಂಬಿಕೊಂಡರು.



ಚಾಮರಾಜೇಶ್ವರ ಸ್ವಾಮಿಯ ರಥದ ಮುಂಭಾಗದಲ್ಲಿ ಮಹಾರಾಜರ ಉತ್ಸವ ಮೂರ್ತಿ, ಗಣಪತಿ ದೇವರು ಚಿಕ್ಕ ರಥಗಳಲ್ಲಿ ಸಾಗಿದರೆ ಹಿಂಭಾಗದಲ್ಲಿ ಕೆಂಪನಂಜಾಂಬ ಪಾರ್ವತಿ ದೇವರ ರಥ ಸಾಗಿತು. ರಥವು ದೇವಸ್ಥಾನದ ಮುಂಭಾಗದಿಂದ ದಕ್ಷಿಣಾಭಿಮುಖವಾಗಿ ರಥದ ಬೀದಿ, ಎಸ್‌ಬಿಎಂ ರಸ್ತೆ, ವೀರಭದ್ರೇಶ್ವರಸ್ವಾಮಿ ದೇವಾಲಯದ ವೃತ್ತ, ಮಾರಮ್ಮ ದೇವಸ್ಥಾನದ ರಸ್ತೆ, ಹಳೆ ತರಕಾರಿ ಮಾರುಕಟ್ಟೆ ರಸ್ತೆಯಲ್ಲಿ ಸಾಗಿ ಮತ್ತೆ ದೇವಸ್ಥಾನದ ಮುಂಭಾಗ ಮಧ್ಯಾಹ್ನ 3.45ರ ಸುಮಾರಿಗೆ ಮೂಲ ಸ್ಥಾನ ತಲುಪಿತು.

ರಥೋತ್ಸವಕ್ಕೂ ಮೊದಲು ದೇವಾಲಯದ ಒಳಾಂಗಣದಲ್ಲಿ ಚಾಮರಾಜೇಶ್ವರಸ್ವಾಮಿ ಉತ್ಸವಮೂರ್ತಿ, ಕೆಂಪನಂಜಾಂಬ– ಪಾರ್ವತಿ ದೇವರು ಹಾಗೂ ಮಹಾರಾಜರ ಉತ್ಸವಮೂರ್ತಿಗಳ ಉತ್ಸವ ನಡೆಯಿತು. ಭಕ್ತರು ಉತ್ಸವ ಮೂರ್ತಿಗಳನ್ನು ಹೊತ್ತುಕೊಂಡು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದರು.

ನವದಂಪತಿಯಿಂದ ಪೂಜೆ: ಆಷಾಢ ಮಾಸದಲ್ಲಿ ಈ ರಥೋತ್ಸವ ನಡೆಯು ವುದು ವಿಶೇಷ. ದಾಂಪತ್ಯ ಜೀವನಕ್ಕೆ ಕಾಲಿಟ್ಟ ನವ ದಂಪತಿ ಗಳು ಒಟ್ಟಾಗಿ ಜಾತ್ರೆಯಲ್ಲಿ ಪಾಲ್ಗೊಳ್ಳುವುದು ಇಲ್ಲಿನ ವೈಶಿಷ್ಟ್ಯ. ಸೋಮವಾರ ನಡೆದ ರಥೋತ್ಸವದಲ್ಲಿ ಸಾವಿರಾರು ನವ ದಂಪತಿಗಳು ಪಾಲ್ಗೊಂಡಿದ್ದರು. ರಥದ ಮುಂಭಾಗ ನವ ಜೋಡಿಗಳು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಜಾನಪದ ಕಲಾ ತಂಡಗಳ ಮೆರಗು: ರಥೋತ್ಸವದಲ್ಲಿ ವೀರಗಾಸೆ, ಮಂಗಳವಾದ್ಯ, ಬ್ಯಾಂಡ್ ಸೆಟ್ ಕಲಾವಿದರು ಪಾಲ್ಗೊಂಡಿದ್ದರು. ಅಲ್ಲದೇ ನಗರದ ಯುವಕ ಗುರುರಾಜ್ ತಲೆ ಮೇಲೆ ಶಿವಲಿಂಗದ ಆಕೃತಿಯನ್ನು ಇಟ್ಟು ಕೊಂಡು ಎಲ್ಲರ ಗಮನ ಸೆಳೆದನು. ಈತನೊಂದಿಗೆ ವೆಂಕಟೇಶ್ ಎಂಬ ಯುವಕ ಕೃಷ್ಣನ ವೇಷ, ಕಿರಣ್ ಎಂಬ ಯುವಕ ಈಶ್ವರನ ವೇಷ, ವಿನಯ್ ಅರಸ್ ಎಂಬ ಯುವಕ ರಾಮಲಿಂಗೇಶ್ವರನ ಪೇಟ ಧರಿಸಿಕೊಂಡು ರಥದೊಂದಿಗೆ ಸಾಗಿದರು.

ಆಟಿಕೆಗಳ ಭರ್ಜರಿ ವ್ಯಾಪಾರ: ಜಾತ್ರೆಯ ಆವರಣದಲ್ಲಿ ಮಕ್ಕಳ ವಿವಿಧ ಆಟಿಕೆಗಳ ಮಾರಾಟ ಜೋರಾಗಿ ನಡೆಯಿತು. ಅಲ್ಲದೇ ಗೃಹಪಯೋಗಿ ವಸ್ತುಗಳು, ಮಹಿಳೆಯರ ಬ್ಯಾಂಗಲ್ಸ್ ಸೇರಿದಂತೆ ವಿವಿಧ ರೀತಿ ವಸ್ತುಗಳ ಮಾರಾಟ ಭರ್ಜರಿಯಾಗಿ ನಡೆಯಿತು. ಹಣ್ಣು–ಹೂ, ಪುರಿ–ಕಾರ, ಸಿಹಿ ತಿಂಡಿಗಳು, ತಂಪುಪಾನೀಯ, ಐಸ್‌ಕ್ರೀಂಗಳಿಗೂ ಹೆಚ್ಚಿನ ಬೇಡಿಕೆ ಕಂಡು ಬಂದಿತು.



ಅನ್ನ ಸಂತರ್ಪಣೆ: ರಥ ಸಾಗುವ ಹಾದಿಯ ಹಲವೆಡೆ ವಿವಿಧ ಸಂಘ–ಸಂಸ್ಥೆ ಹಾಗೂ ಭಕ್ತರಿಂದ ಅನ್ನಸಂತರ್ಪಣೆ ನಡೆಯಿತು. ಬಾತ್, ಬಿಸಿಬೇಳೆ ಬಾತ್, ಚಿತ್ರಾನ್ನ, ಪಾನಕ ವಿತರಿಸಲಾಯಿತು.

ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಾರಾಟ ಆರೋಪ

ನಗರಸಭೆ ಸದಸ್ಯ, ಬಿಜೆಪಿ ಮುಖಂಡ ಸೇರಿ ಐವರ ವಿರುದ್ಧ ಕ್ರಿಮಿನಲ್ ಕೇಸ್

ಚಾಮರಾಜನಗರ, ಜು.3– ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಮೀನು ಮಾರಾಟ ಮಾಡಿದ ಆರೋಪದಡಿ ಪತ್ರ ಬರಹಗಾರ, ಬಿಜೆಪಿ ಮುಖಂಡ ಸಿ.ಎನ್. ಬಾಲರಾಜು, ನಗರಸಭಾ ಸದಸ್ಯ ಸಿ.ಎಂ. ಶಿವರಾಜು ಸೇರಿದಂತೆ ಐವರ ವಿರುದ್ಧ ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಮಂಗಲ ಗ್ರಾಮದ ಗೋವಿಂದ ಶೆಟ್ಟಿ, ನಗರದ ನಿವಾಸಿಗಳಾದ ಚಂದ್ರಶೇಖರ್ ಹಾಗೂ ರಘು ಸಿ.ಎನ್. ಇತರೆ ಮೂವರು ಆರೋಪಿಗಳಾಗಿದ್ದು, ಇವರ ವಿರುದ್ಧ ಜಮೀನಿನ ಮಾಲೀಕರೂ ಆದ ಕೆಇಬಿಯ ನಿವೃತ್ತ ನೌಕರ ಗೋವಿಂದ ಶೆಟ್ಟಿ ಎಂಬುವವರು ಜೂನ್ 26ರಂದು ನೀಡಿರುವ ದೂರಿನ ಅನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇಂತಹದೇ ಪ್ರಕರಣ ಈ ವರ್ಷದ ಜನವರಿಯಲ್ಲೂ ವರದಿಯಾಗಿತ್ತು. ಆ ಸಂದರ್ಭದಲ್ಲೂ ಬಾಲರಾಜು, ಶಿವರಾಜು ಸೇರಿದಂತೆ ಏಳು ಮಂದಿಯ ವಿರುದ್ಧ ಪ್ರಕರಣ ದಾಖಲಾಗಿತ್ತು.

ಏನಿದು ಪ್ರಕರಣ: ತಾಲೂಕಿನ ಮಲ್ಲಯ್ಯನಪುರ ಗ್ರಾಮದ ಸರ್ವೆ ನಂ. 108ರಲ್ಲಿ 3 ಎಕರೆ 38 ಗುಂಟೆ ಜಮೀನನ್ನು ನಕಲಿ ದಾಖಲೆ ಸೃಷ್ಟಿಸಿ ಬೇರೆಯವರಿಗೆ ಮಾರಾಟ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ತಾಲೂಕಿನ ಹರದನಹಳ್ಳಿಯ ಗೋವಿಂದಶೆಟ್ಟಿ ಎಂಬುವವರ ಹೆಸರಿನಲ್ಲಿ ಈ ಜಮೀನು ಇದೆ. ಅವರ ಸಹಿಯನ್ನು ಫೋರ್ಜರಿ ಮಾಡಿ, ಗೋವಿಂದ ಶೆಟ್ಟಿ ಹೆಸರಿನ ಇನ್ನೊಬ್ಬರನ್ನು ಮಾಲೀಕರೆಂದು ತೋರಿಸಿ, ಕಳೆದ ವರ್ಷದ ಸೆ. 26ರಂದು ಚಂದ್ರಶೇಖರ್ ಎನ್ನುವವರಿಗೆ ಮಾರಾಟ ಮಾಡಲಾಗಿದೆ ಎಂದು ಆಪಾದಿಸಲಾಗಿದೆ.

ದೂರಿನಲ್ಲಿ ಏನಿದೆ?: 1975ರ ಮಾರ್ಚ್ 22ರಂದು ಚೆನ್ನಿಪುರವೊಳೆ ಗ್ರಾಮದ ಮಂಡೆ ಮಾದಶೆಟ್ಟಿ, ಮಕ್ಕಳಾದ ಸಿದ್ದಶೆಟ್ಟಿ, ಮಾದಶೆಟ್ಟಿ ಮತ್ತು ರಾಮಶೆಟ್ಟಿ ಅವರಿಂದ ನಾನು ಜಮೀನು ಖರೀದಿಸಿ ನೋಂದಣಿ ಮಾಡಿಕೊಂಡಿದ್ದೇನೆ. ಅಂದಿನಿಂದ ಇಲ್ಲಿಯವರೆಗೂ ವ್ಯವಸಾಯ ಮಾಡಿಕೊಂಡು ಬಂದಿದ್ದೇನೆ. 2022ರ ಸೆಪ್ಟೆಂಬರ್ 26ರಂದು ಗೋವಿಂದಶೆಟ್ಟಿ ಎಂಬ ವ್ಯಕ್ತಿ, ನನ್ನ ಸಹಿ ನಕಲು ಮಾಡಿ ಮತ್ತು ನನ್ನ ಆಧಾರ್ ಕಾರ್ಡನ್ನು ದುರುಪಯೋಗಪಡಿಸಿಕೊಂಡು ನನ್ನ ಜಮೀನನ್ನು ಚಂದ್ರಶೇಖರ್ ಎನ್ನುವವರಿಗೆ 30ಲಕ್ಷಕ್ಕೆ ಕಾನೂನುಬಾಹಿರವಾಗಿ ಮಾರಾಟ ಮಾಡಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಜಮೀನನ್ನು ಅಕ್ರಮವಾಗಿ ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಗೋವಿಂದಶೆಟ್ಟಿ, ಚಂದ್ರಶೇಖರ್, ಪತ್ರ ಬರಹಗಾರ ಸಿ.ಎನ್. ಬಾಲರಾಜು ಸಿ.ಎಂ. ಶಿವರಾಜು ಮತ್ತು ಸಿ.ಎನ್. ರಘು ಅವರು ಒಟ್ಟಾಗಿ ಸೇರಿಕೊಂಡು ಒಳಸಂಚು ನಡೆಸಿ, ನನ್ನ ಜಮೀನನ್ನು ಮೋಸದಿಂದ ಬೇರೆಯವರಿಗೆ ಮಾರಾಟ ಮಾಡಿ ವಂಚಿಸಿದ್ದಾರೆ ಎಂದು ಗೋವಿಂದಶೆಟ್ಟಿ ದೂರಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಯಾರನ್ನೂ ಬಂಧಿಸಿಲ್ಲ. ಎಫ್‌ಐಆರ್ ದಾಖಲಾಗಿರುವುದನ್ನು ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ಚಿಕ್ಕರಾಜಶೆಟ್ಟಿ ಖಚಿತಪಡಿಸಿದ್ದಾರೆ.

ಸಾಲೂರು ಮಠದ ವೇದಾಗಮ ಶಾಲೆಯಲ್ಲಿ ಗುರುಪೂರ್ಣಿಮೆ



ಹನೂರು, ಜು.3– ತಾಲೂಕಿನ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದ ವೇದಾಗಮ ಪಾಠಶಾಲೆಯಲ್ಲಿ ಗುರುಪೂರ್ಣಿಮೆ ಆಚರಿಸಲಾಯಿತು.

ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಆಶೀರ್ವಚನ ನೀಡಿ, ಶ್ರೀ ರಾಮಕೃಷ್ಣರು ಹೇಳುವಂತೆ ಭಗವತ್ಸಾಕ್ಷಾತ್ಕಾರಕ್ಕೆ ಭಕ್ತಿ ಹಾಗೂ ಜ್ಞಾನಗಳೆರಡೂ ಮಾರ್ಗಗಳೆನಿಸುತ್ತವೆ ಎಂಬಂತೆ ಪ್ರತಿ ಕ್ಷಣವೂ ಈ ನಾಣ್ನುಡಿಯಂತೆ ತಿಳಿಯಬೇಕು. ಗುರು ಮತ್ತು ಹಿರಿಯರ ಆದರ್ಶ ಮತ್ತು ಮಾರ್ಗದರ್ಶನ ಇಲ್ಲದೆ ಯಾವುದೇ ವ್ಯಕ್ತಿ ತನ್ನ ನಿಶ್ಚಿತ ಗುರಿ ಸಾಧಿಸಲು ಸಾಧ್ಯವಿಲ್ಲ. ಈ ಯಶಸ್ಸು ಅನ್ನೋದು ಮರೀಚಿಕೆಯಂತೆ. ನೀವು ಅದರ ಹಿಂದೆ ಓಡಿದಷ್ಟು ಅದು ನಿಮ್ಮಿಂದ ದೂರ ಓಡುತ್ತದೆ. ಅದಕ್ಕೇ ಏನೋ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಈರೀತಿ ಹೇಳಿದ್ದು "ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ" ಅಂತ. ಅಂದರೆ ಫಲದ ಅಪೇಕ್ಷೆ ಇಲ್ಲದೇ ನಿನ್ನ ಕರ್ಮ (ಕರ್ತವ್ಯ) ನೀನು ಮಾಡು.

ಮಾಡಿದ ಕೆಲಸಕ್ಕೆ ಯಶಸ್ಸು ಸಿಗಲಿ, ಜೀವನದಲ್ಲಿ ಸಫಲತೆ ಕಾಣಲಿ ಅಂತಾ ಎಲ್ಲರೂ ಬಯಸುತ್ತಾರೆ. ಒಂದೇ ಸಮನೆ ಕೆಲಸ ಮಾಡಿದರೆ ಸಾಲದು, ಕೆಲವೊಂದು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಮಾಡುವ ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕತೆಯಿದ್ದರೆ ಆ ಕೆಲಸ ಖಂಡಿತವಾಗಿ ಯಶಸ್ವಿಯಾಗುತ್ತದೆ. ಯಾವುದೇ ಕೆಲಸದಲ್ಲಾಗಲಿ ಶ್ರಮ ಮತ್ತು ಶಿಸ್ತು ವಹಿಸಿದರೆ, ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದರು.

ಸಂಸ್ಥೆಯ ಆಗಮ ಪಾಠಶಾಲೆಯ ಮುಖ್ಯ ಶಿಕ್ಷಕ ಮಹೇಶ್, ಕಾಲೇಜಿನ ಪ್ರಾಂಶುಪಾಲ ಮಹದೇವಪ್ರಭುಸ್ವಾಮಿ, ಮುಖ್ಯಶಿಕ್ಷಕ ಶಿವಕುಮಾರ್‌ಸ್ವಾಮಿ, ಕೆಂಪಸಿದ್ದು, ನಿವೃತ್ತ ಶಿಕ್ಷಕ ಮಾದಯ್ಯ ಸಂಸ್ಥೆಯ ಸಿಬ್ಬಂದಿ ಮತ್ತು ಗುರುಕುಲದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಟಿ.ಬಿ.ಜಯಚಂದ್ರ ರಾಜ್ಯ ಸರ್ಕಾರದ ದೆಹಲಿ ಪ್ರತಿನಿಧಿ

ಪಟ್ಟಣಶೆಟ್ಟಿ ವಿಧಾನಸಭೆ, ಸಲೀಂ ಅಹ್ಮದ್ ಪರಿಷತ್ ಮುಖ್ಯ ಸಚೇತಕರು

ಬೆಂಗಳೂರು, ಜುಲೈ 3(ಕೆಎಂಶಿ)–ಪಕ್ಷದ ಹಿರಿಯ ಸದಸ್ಯ ಟಿ.ಬಿ.ಜಯಚಂದ್ರ



ಅವರನ್ನು ರಾಜ್ಯ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕ ಮಾಡಿದ್ದಾರೆ. ಜಯಚಂದ್ರ ಅವರಿಗೆ ಸಂಪುಟದರ್ಜೆಯ ಸ್ಥಾನಮಾನ ಕಲ್ಪಿಸಿದ್ದು, ತಮ್ಮ ಬಳಗದಲ್ಲಿರುವ ಅಶೋಕ್ ಪಟ್ಟಣಶೆಟ್ಟಿ ಅವರನ್ನು ವಿಧಾನಸಭೆಯ ಆಡಳಿತಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಿಸಿದ್ದಾರೆ.

ವಿಧಾನ ಪರಿಷತ್ತಿನ ಆಡಳಿತ ಪಕ್ಷದ ಮುಖ್ಯಸಚೇತಕರಾಗಿ ಸಲೀಂ ಅಹ್ಮದ್ ಅವರನ್ನು ಮುಖ್ಯಮಂತ್ರಿ ನೇಮಕ ಮಾಡಿದ್ದಾರೆ.

ಮುರುಘಾ ಮಠಕ್ಕೆ ಜಿಲ್ಲಾ ನ್ಯಾಯಾಧೀಶರನ್ನು ಆಡಳಿತಾಧಿಕಾರಿಯಾಗಿ ನೇಮಿಸಿದ ಹೈಕೋರ್ಟ್

ಬೆಂಗಳೂರು: ಮುರುಘಾಮಠಕ್ಕೆ ತಾತ್ಕಾಲಿಕ ಆಡಳಿತಾಧಿಕಾರಿಯಾಗಿ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ನೇಮಕ ಮಾಡಿ ಹೈಕೋರ್ಟ್ ಮುಖ್ಯಪೀಠ ಆದೇಶ ಮಾಡಿದೆ.

ಮಂಗಳವಾರ ಬೆಳಗ್ಗೆ 11 ಗಂಟೆಗೆ ಅಧಿಕಾರ ವಹಿಸಿಕೊಳ್ಳಲು ಸಿಜೆ ಪ್ರಸನ್ನ ಬಿ ವರಾಳೆ, ನ್ಯಾ. ಎಂ.ಜಿ.ಎಸ್ ಕಮಲ್ ಅವರಿದ್ದ ಪೀಠ ಈ ಆದೇಶ ಹೊರಡಿಸಿದೆ. ಈ ಹಿಂದೆ ಏಕಸದಸ್ಯ ಪೀಠ ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಕ ರದ್ದುಪಡಿಸಿತ್ತು. ಇದಾದ ಬಳಿಕ ಹಿಂದಿನ ಸರ್ಕಾರ ವಸ್ತದ್ ಅವರ ನೇಮಕ ರದ್ದು ಮಾಡಿ ಆದೇಶ ಮಾಡಿತ್ತು. ಏಕ ಸದಸ್ಯ ಪೀಠದ ಆದೇಶಕ್ಕೆ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಮಂಗಳವಾರ ಮೇಲ್ಮನವಿ ವಿಚಾರಣೆ ನಡೆಸಿದ ಹೈಕೋರ್ಟ್ ಮುಖ್ಯ ಪೀಠ ಈ ಆದೇಶ ನೀಡಿದೆ. ಜುಲೈ 18 ರಂದು ಮೇಲ್ಮನವಿ ವಿಚಾರಣೆ ನಡೆಯಲಿದ್ದು ಮುಂದಿನ ಆದೇಶದವರೆಗೆ ಚಿತ್ರದುರ್ಗ ಪ್ರಧಾನ ಜಿಲ್ಲಾ ನ್ಯಾಯಾಧೀಶರು ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ನ್ಯಾಯಾಲಯ ಆದೇಶ ನೀಡಿದೆ.

ಒಂದನೇ ಪುಟದಿಂದ

ಸರ್ವ ಜನಾಂಗದ ಶಾಂತಿಯ ತೋಟ

ಕಡಿಮೆ ಮಾಡುವ ಉದ್ದೇಶದಿಂದಲೇ ಐದು ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸುತ್ತಿದೆ ಎಂದು ಸಮರ್ಥಿಸಿಕೊಂಡರು. ಹಸಿದವರಿಗೆ ಅನ್ನ ನೀಡದ ಸರ್ಕಾರ ಅತ್ಯಂತ ಜನದ್ರೋಹಿ ಸರ್ಕಾರವೆಂದು ಕರೆಸಿಕೊಳ್ಳುತ್ತದೆ. ಬಡವರು, ದುಡಿಯುವ ವರ್ಗದ ಜನರು, ವಲಸೆ ಕಾರ್ಮಿಕರು ಮುಂತಾದವರ ಹಸಿವನ್ನು ತಣಿಸಲು ನಾವು ಅನ್ನಭಾಗ್ಯ ಯೋಜನೆಯನ್ನು ವಿಸ್ತರಿಸಿರುವುದಲ್ಲದೆ, ಇಂದಿರಾ ಕ್ಯಾಂಟೀನ್‌ಗಳನ್ನು ಪುನರಾರಂಭಿಸಿರುವುದಾಗಿ ಹೇಳಿದರು.

ಗೃಹಜ್ಯೋತಿ ಯೋಜನೆಯಡಿ 200 ಯುನಿಟ್ ವಿದ್ಯುತ್ ಉಚಿತ. ಗೃಹಲಕ್ಷ್ಮಿ ಯೋಜನೆಯಡಿ ಕುಟುಂಬದ ಯಜಮಾನಿಗೆ ಮಾಸಿಕ 2000 ರೂ., ಯುವ ನಿಧಿಯಡಿ ನಿರುದ್ಯೋಗಿ ಪದವೀಧರರಿಗೆ ಹಾಗೂ ಡಿಪ್ಲೊಮಾ ದಾರರಿಗೆ ಮಾಸಿಕ ತಲಾ 3000 ಹಾಗೂ 1500 ರೂ. ಭತ್ಯೆ, ಸರ್ಕಾರಿ ಸಾರಿಗೆ ಸಂಸ್ಥೆಗಳ ಬಸ್ಸಿನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ 'ಶಕ್ತಿ' ಯೋಜನೆ ಅನುಷ್ಠಾನಗೊಳಿಸುವ ಮೂಲಕ ಉಳ್ಳವರು ಮತ್ತು ಉಳ್ಳದವರ ನಡುವಿನ ಅಂತರ ಕಡಿಮೆ ಮಾಡಲು ಸರ್ಕಾರ ಈ ಮಹತ್ತರ ಯೋಜನೆ ಹಮ್ಮಿಕೊಂಡಿದೆ.

ಜನರಿಂದಲೇ ಸೃಷ್ಟಿಯಾದ ಸಂಪತ್ತಿನಲ್ಲಿ ಒಂದುಪಾಲನ್ನು ಅವರಿಗೆ ಕೊಡುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ ಎಂದು ರಾಜ್ಯಪಾಲರು ಬಲವಾಗಿ ಸಮರ್ಥಿಸಿಕೊಂಡರು. ಹೊಸ ಸರ್ಕಾರವೊಂದನ್ನು ಆರಿಸುವಾಗ ಜನರ ನಿರೀಕ್ಷೆಗಳು ಹೊಸತಾಗಿರುತ್ತವೆ. ಹಳೆಯದಕ್ಕಿಂತ ಭಿನ್ನವಾದ ಮತ್ತು ತಮ್ಮ ಆಶೋತ್ತರಗಳನ್ನು ಪ್ರತಿಬಿಂಬಿಸುವ ಆಡಳಿತವನ್ನು ಅವರು ನಿರೀಕ್ಷಿಸಿರುತ್ತಾರೆ. ಕಳೆದ 34 ವರ್ಷಗಳಲ್ಲಿ ಯಾರಿಗೂ ನೀಡದ ಬಹುಮತದೊಂದಿಗೆ ಈ ಸರ್ಕಾರವನ್ನು ಜನರು ಆಯ್ಕೆ ಮಾಡಿದ್ದಾರೆ. ಅವರ ನಿರೀಕ್ಷೆಯನ್ನು ಹುಸಿಗೊಳಿಸುವುದಿಲ್ಲ. ಅದಕ್ಕಾಗಿ ನಾವು ಜನಕಲ್ಯಾಣ ಮತ್ತು ಆರ್ಥಿಕ ಸ್ಥಿತಿ ಎರಡನ್ನೂ ಸಮತೂಕದಲ್ಲಿ ನಿಭಾಯಿಸಿ ಕರ್ನಾಟಕದ್ದೇ ಆದ ಹೊಸ ಆಡಳಿತ ಮಾದರಿಯೊಂದನ್ನು ನನ್ನ ಸರ್ಕಾರ ರಾಷ್ಟ್ರಕ್ಕೆ ಪರಿಚಯಿಸಲಿದೆ ಎಂದು ರಾಜ್ಯಪಾಲರು ತಿಳಿಸಿದರು.

ಶಾಂತಿಯುತವಾದ, ಸಮೃದ್ಧವಾದ, ಸೌಹಾರ್ದಯುತವಾದ ಸರ್ವ ಜನಾಂಗದ ಶಾಂತಿಯ ತೋಟವನ್ನು ನಿರ್ಮಿಸಲು ನಾವು ಬದ್ಧವಾಗಿದ್ದೇವೆ. ಯಾರನ್ನೂ ಹೊರಗಿಡದೇ ಎಲ್ಲರನ್ನೂ ಒಳಗೊಂಡು ಇವ ನಮ್ಮವ.. ಇವ ನಮ್ಮವ... ಎಂದು ಕೂಡಿ ಬಾಳುವ ನಮ್ಮ ಹಿರಿಯರ ಕನಸನ್ನು ನನ್ನ ಸರ್ಕಾರ ಮಾಡಿ ತೋರಿಸುತ್ತದೆ.

ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಜನಸ್ನೇಹಿ ಮತ್ತು ನಿಷ್ಪಕ್ಷಪಾತವಾದ ಕ್ರಮಕ್ಕೆ ಬದ್ಧವಾಗಿದೆ. 2013ರಿಂದ ಐದು ವರ್ಷಗಳ ಅಂದಿನ ಸರ್ಕಾರದ ಆಡಳಿತದಲ್ಲಿ ಕೈಗೊಂಡಿರುವ ಕೆಲವು ಯೋಜನೆಗಳನ್ನು ಈ ಸರ್ಕಾರ ಮತ್ತೆ ಮುಂದುವರೆಸಲಿದೆ. ಬಾಕಿ ಉಳಿದಿರುವ ಎಲ್ಲಾ ನೀರಾವರಿ ಯೋಜನೆಗಳನ್ನು 5 ವರ್ಷದಲ್ಲಿ ಪೂರ್ಣಗೊಳಿಸುವ ಭರವಸೆಯನ್ನು ರಾಜ್ಯಪಾಲರ ಮೂಲಕ ಸದನಕ್ಕೆ ನೀಡಿರುವ ಸರ್ಕಾರ, ಇನ್ನು ಮುಂದೆ ರೈತರ ಸಹಭಾಗಿತ್ವದಲ್ಲಿ ಕೆರೆ–ಕಟ್ಟೆಗಳನ್ನು ನಿರ್ಮಿಸುವ ಘೋಷಣೆ ಮಾಡಿದೆ.

ಪ್ರವಾಸೋದ್ಯಮಕ್ಕೆ ಉತ್ತೇಜನ ಕಲ್ಪಿಸಿ, 5ಲಕ್ಷ ಉದ್ಯೋಗವನ್ನು ಇದರಡಿಯೇ ಸೃಷ್ಟಿಸಲಾಗುವುದು. ಅಲೆಮಾರಿ ಕುರಿಗಾರರ ಹಿತರಕ್ಷಣೆಗೆ ಪ್ರತ್ಯೇಕ ಕಾಯ್ದೆ ತರುವುದಾಗಿ ತಿಳಿಸಿದರು. ಗ್ರಾಮ ಮತ್ತು ನಗರಾಡಳಿತ ವ್ಯವಸ್ಥೆಯನ್ನು ಜನಸ್ನೇಹಿಯಾಗಿ ಮಾಡಲು ಈಗಾಗಲೇ ತಿಳಿಸಿರುವಂತೆ ಭ್ರಷ್ಟಾಚಾರ ನಿರ್ಮೂಲನೆಗೆ ಕಠಿಣ ಕಾನೂನು ಕ್ರಮ ಜರುಗಿಸುವುದಾಗಿ ಹೇಳಿದ್ದಾರೆ.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರು ಒದಗಿಸಲು ಯೋಜನೆ ರೂಪಿಸಿ ನಮ್ಮ ಆಡಳಿತಾವಧಿಯಲ್ಲೇ ಪೂರ್ಣಗೊಳಿಸುವುದಾಗಿ ಹೇಳಿದರು. ಒಟ್ಟಾರೆ, ನಾವು ಏನು ಮಾಡಬೇಕು ಎಂಬ ನೀಲ ನಕಾಶೆ ನಮ್ಮ ಮುಂದಿದೆ. ಸರ್ಕಾರಕ್ಕೆ ಇಚ್ಛಾಶಕ್ತಿ ಇದೆ. ಅನುಭವ ಮತ್ತು ತಾರುಣ್ಯ ಬೆರೆತ ರೀತಿಯಲ್ಲಿ ನನ್ನ ಸರ್ಕಾರ ರೂಪುಗೊಂಡಿದ್ದು, ಇದರ ಮೂಲಕ ಜನಹಿತ ಕಾಪಾಡಲಿದೆ ಎಂದರು.

ಜು.18ರಿಂದ ಸಿಇಟಿ ದಾಖಲಾತಿ ಪರಿಶೀಲನೆ

ಪರೀಕ್ಷೆಯನ್ನು ನಡೆಸಿದೆ. ಇನ್ನು ಪರೀಕ್ಷೆಯ ಫಲಿತಾಂಶವನ್ನೂ ಬಿಡುಗಡೆ ಮಾಡಿದ್ದು, ವಿದ್ಯಾರ್ಥಿಗಳು ಪಡೆದ ರ್‍ಯಾಂಕಿಂಗ್ ಪಟ್ಟಿಯನ್ನೂ ಬಿಡುಗಡೆ ಮಾಡಲಾಗಿದೆ. ಈಗ ಕೆಲವು ವೃತ್ತಿಪರ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದಡಿ ಪ್ರತಿಷ್ಠಿತ ಕಾಲೇಜುಗಳಿಗೆ ಪ್ರವೇಶ ಪಡೆಯಲು ಅನುಕೂಲ ಆಗುವಂತೆ ದಾಖಲಾತಿ ಪರಿಶೀಲನೆ ಕಾರ್ಯವನ್ನು ಮಾಡಲಾಗುತ್ತಿದೆ. ಈಗ ಇಂಜಿನಿಯರಿಂಗ್ ಸೇರಬಯಸುವ ವಿದ್ಯಾರ್ಥಿಗಳಿಗೆ ಅನುಕೂಲ ಆಗುವಂತೆ ದಾಖಲಾತಿ ಪರಿಶೀಲನೆ ಕಾರ್ಯಕ್ಕೆ ಕೆಇಎ ಮುಂದಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಜುಲೈ 18ರಿಂದ 21 ರವರೆಗೆ ದಾಖಲಾತಿ ಪರಿಶೀಲನೆ ಮಾಡಲು ದಿನಾಂಕವನ್ನು ಘೋಷಣೆ ಮಾಡಿದೆ. ಪರೀಕ್ಷೆ ಬರೆದು ಅರ್ಹರಾಗಿರುವ ಎಲ್ಲ ವಿದ್ಯಾರ್ಥಿಗಳು ತಮ್ಮ ತಮ್ಮ ಮೂಲ ದಾಖಲಾತಿಗಳೊಂದಿಗೆ ಪರೀಕ್ಷಾ ಪ್ರಾಧಿಕಾರದಂದು ನಡೆಸುವ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಸೂಚನೆ ನೀಡಲಾಗಿದೆ. ಇನ್ನು ಎಲ್ಲ ವಿದ್ಯಾರ್ಥಿಗಳು ತಮ್ಮ ರ್‍ಯಾಂಕಿಂಗ್ ಪಟ್ಟಿಗೆ ಅನುಗುಣವಾಗಿ ಪ್ರಾಧಿಕಾರದಿಂದ ನಿಗದಿ ಮಾಡಲಾದ ಸಮಯಕ್ಕೆ ಅನುಗುಣವಾಗಿ ದಾಖಲಾತಿ ಪರಿಶೀಲನೆಗೆ ವಿದ್ಯಾರ್ಥಿಗಳು ಹಾಜರಾಗಬೇಕು ಎಂದು ತಿಳಿಸಲಾಗಿದೆ.

ಯಾವ್ಯಾವ ದಾಖಲೆಗಳು ಬೇಕು: ವಿದ್ಯಾರ್ಥಿಯ ಪರೀಕ್ಷಾ ಪ್ರವೇಶಪತ್ರ ಸಂಖ್ಯೆ, ವಿದ್ಯಾರ್ಥಿಯ ರ್‍ಯಾಂಕಿಂಗ್ ಪಡೆದ ಸ್ಥಾನ, ಇಂಜಿನಿಯರಿಂಗ್ ಸೇರಲು ಬೇಕಾಗಿರುವ ದಾಖಲೆಗಳಾದ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಗ್ರಾಮೀಣ ವಿದ್ಯಾರ್ಥಿ, ಕನ್ನಡ ಮಾಧ್ಯಮ, ಎನ್‌ಸಿಸಿ, ಎನ್‌ಎಸ್‌ಎಸ್ ಪ್ರಮಾಣಪತ್ರ, ಕ್ರೀಡಾ ಸಾಧನೆ ಪ್ರಮಾಣ ಪತ್ರ, ಹೊರನಾಡು ಕನ್ನಡಿಗ, ರಕ್ಷಣಾ ಸಿಬ್ಬಂದಿ ಮಕ್ಕಳ ದಾಖಲಾತಿ ಹಾಗೂ ಕಾಲೇಜುಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ವಿದ್ಯಾರ್ಥಿಗಳು ದಾಖಲಾತಿ ಪರಿಶೀಲನೆ ವೇಳೆ ಹಾಜರುಪಡಿಸಬೇಕು. ಒಂದು ಸೆಟ್ ಮೂಲ ದಾಖಲಾತಿಗಳ ಜೆರಾಕ್ಸ್ ಪ್ರತಿ ಕಡ್ಡಾಯವಾಗಿ ತರುವಂತೆ ಸೂಚಿಸಲಾಗಿದೆ.

ನಿಮ್ಮ ದಿನಾಂಕ, ಸಮಯ ನೋಡಿಕೊಂಡು ಬನ್ನಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ನಿಗದಿ ಮಾಡಿರುವ ಸಮಯದಲ್ಲಿ ವಿದ್ಯಾರ್ಥಿಗಳು ಹಾಜರಾಗಬೇಕು. ವಿದ್ಯಾರ್ಥಿಗಳಿಗೆ ಅನುಕೂಲ ಆಗುವಂತೆ kea.kar.nic.in ವೆಬ್‌ಸೈಟ್‌ನಲ್ಲಿ ದಾಖಲಾತಿ ಪರಿಶೀಲನೆ ದಿನಾಂಕ, ಸಮಯ ಪ್ರಕಟ ಮಾಡಲಾಗಿದೆ. ಇದನ್ನು ನೋಡಿಕೊಂಡು ವಿದ್ಯಾರ್ಥಿಗಳು ಆಗ ಮಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿರ್ದೇಶಕಿ ಎಸ್. ರಮ್ಯಾ ಮಾಹಿತಿ ನೀಡಿದ್ದಾರೆ.

30 ಲಕ್ಷ ಲಂಚ ಕೊಡಬೇಕು: ಹೆಚ್‌ಡಿಕೆ

ಕಚೇರಿಯ ಸಿಬ್ಬಂದಿ, ಅಧಿಕಾರಿಗಳೇ ಡಿಮ್ಯಾಂಡ್ ಮಾಡುತ್ತಾರೆ ಎಂದರು. ಯಾವ ಶಾಸಕರ ಪತ್ರ ಎಂದು ಹೇಳದ ಕುಮಾರಸ್ವಾಮಿ, ಸಿಎಂ ಕಚೇರಿಯಲ್ಲಿ ಲಂಚ ಕೊಟ್ಟರೆ ಮಾತ್ರ ಕೆಲಸ ಆಗುತ್ತಿದೆ. ಇಂತಹವರು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ ಎಂದು ವ್ಯಂಗ್ಯವಾಡಿದರು.

ಕೋಟಿಯಾಗಿದೆ: ಅತ್ತ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಕುಮಾರಸ್ವಾಮಿ ಹೇಳಿಕೆಗೆ ಸಹಮತ ವ್ಯಕ್ತಪಡಿಸಿದ್ದು, ಅದು ಲಕ್ಷವಲ್ಲ, ಕೋಟಿಯಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ನಮ್ಮ ರಾಜ್ಯದಲ್ಲಿ ಯಾವ ಅಜಿತ್ ಪವಾರ್ ಹುಟ್ಟಿಕೊಳ್ಳುತ್ತಾರೋ ಗೊತ್ತಿಲ್ಲ: ಮಹಾ ರಾಷ್ಟ್ರದಲ್ಲಿ ದಿಢೀರ್ ರಾಜಕೀಯ ಬದಲಾವಣೆ ನೋಡಿ ಶಾಕ್ ಆಗಿದೆ. ನಮ್ಮ ರಾಜ್ಯದಲ್ಲಿ ರಾಜ್ಯದಲ್ಲಿ ಯಾವ ಅಜಿತ್ ಪವಾರ್ ಹುಟ್ಟಿಕೊಳ್ಳುತ್ತಾರೋ ಗೊತ್ತಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಸೋಮವಾರ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರ ಸ್ವಾಮಿ, ಬಿಜೆಪಿಯವರು ರಾಜ್ಯದಲ್ಲಿರುವುದು ಸಮ್ಮಿಶ್ರ ಸರ್ಕಾರ ಅಂತಾರೆ. ಮಹಾರಾಷ್ಟ್ರದಲ್ಲಿ ದಿಢೀರ್ ರಾಜಕೀಯ ಬದಲಾವಣೆ ಯಾಗಿದೆ. ನಿನ್ನೆ ಅಜಿತ್ ಪವಾರ್ ಮಹಾರಾಷ್ಟ್ರ ಸರ್ಕಾರ ಬೆಂಬಲಿಸಿದ್ದಾರೆ. ಕರ್ನಾಟಕದಲ್ಲಿ ಯಾವ ಅಜಿತ್ ಪವಾರ್ ಬರುತ್ತಾರೋ ಗೊತ್ತಿಲ್ಲ ಕರ್ನಾಟಕದ ಬಗ್ಗೆಯೂ ನನಗೆ ಆತಂಕ ಶುರುವಾಗಿದೆ ಎಂದರು.

ಕಾರ್ಖಾನೆಗಳು ಎಫ್‌ಆರ್‌ಪಿಗಿಂತಲೂ ಹೆಚ್ಚುವರಿ ದರ ನಿಗದಿ ಮಾಡಬೇಕು

ಕ್ವಿಂಟಾಲ್ ಕಬ್ಬಿಗೆ ಹೆಚ್ಚುವರಿ 10 ರೂ. ಏರಿಕೆ ಅವೈಜ್ಞಾನಿಕ; ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ



ಮೈಸೂರು,ಜು.3(ಪಿಎಂ)– ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಾಲ್ ಕಬ್ಬಿಗೆ ಹೆಚ್ಚುವರಿ 10 ರೂ. ಎಫ್‌ಆರ್‌ಪಿ ಏರಿಕೆ ಮಾಡಿರುವುದು ಅವೈಜ್ಞಾನಿಕ ಎಂದು ಆಕ್ಷೇಪಿಸಿದ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಕಾರ್ಖಾನೆಗಳು ಎಫ್‌ಆರ್‌ಪಿಗಿಂತಲೂ ಹೆಚ್ಚುವರಿ ದರ ನಿಗದಿ ಮಾಡಬೇಕು. ಕಬ್ಬು ಬೆಳೆಗಾರರ ವಿವಿಧ ಬೇಡಿಕೆ ಈಡೇರಿಸಲು ಶೀಘ್ರ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಕ್ವಿಂಟಾಲ್‌ಗೆ 305 ರೂ. ಇತ್ತು. ಇದೀಗ ಇದಕ್ಕೆ 10 ರೂ. ಹೆಚ್ಚಳ ಮಾಡಿರುವ ಹಿನ್ನೆಲೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ 315 ರೂ. ದರ ನಿಗದಿಯಾಗಿದೆ. ಆದರೆ ಕ್ವಿಂಟಾಲ್‌ಗೆ 585 ರೂ. ಕೊಡಬೇಕು. ಈಗ ಟನ್‌ಗೆ 3,150 ರೂ. ಸಿಗಲಿದೆ. ಆದರೆ ಸ್ವಾಮಿನಾಥನ್ ವರದಿ ಪ್ರಕಾರ ಟನ್‌ಗೆ 5,850 ರೂ. ಕೊಡಬೇಕು ಎಂದರು.

ಈ ಮೊದಲು ಎಫ್‌ಆರ್‌ಪಿ ದರಕ್ಕೆ ಸೀಮಿತಗೊಳ್ಳದೇ ಕಾರ್ಖಾನೆಗಳು ಹೆಚ್ಚುವರಿ ದರ ನೀಡಿದ ಉದಾಹರಣೆಗಳಿವೆ. ಇಂದು ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳವಾಗಿದೆ. ಅಲ್ಲದೆ, ಸಾಗಾಣಿಕೆ ಮತ್ತು ಕಟಾವು ವೆಚ್ಚವೂ ಹೆಚ್ಚಳವಾಗಿದೆ. ಹೀಗಾಗಿ ರೈತರು ಸಂಕಷ್ಟದಲ್ಲಿದ್ದು, ಕಾರ್ಖಾನೆಗಳು ಕಬ್ಬು ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ (ಯುಪಿಎ ಅವಧಿಯಲ್ಲಿ) ರಂಗರಾಜನ್ ವರದಿ ಅನುಮೋದಿಸಿದೆ. ಆ ಪ್ರಕಾರ ಕಾರ್ಖಾನೆ ನಿವ್ವಳ ಲಾಭಾಂಶದಲ್ಲಿ ಶೇ.70ರಷ್ಟು ರೈತರಿಗೆ ಹಾಗೂ ಶೇ.30 ಕಾರ್ಖಾನೆಗೆ ಹಂಚಿಕೆಯಾಗಬೇಕು. ಆದರೆ ಇದು ಪಾಲನೆ ಆಗುತ್ತಿಲ್ಲ ಎಂದು ದೂರಿದರು.

ತಡೆಯಾಜ್ಞೆ ತೆರವಿಗೆ ಕ್ರಮ ವಹಿಸಿ: ರೈತರ ಹೋರಾಟದ ಮೇರೆಗೆ ಅಂದಿನ ರಾಜ್ಯ ಬಿಜೆಪಿ ಸರ್ಕಾರ ಎಫ್‌ಆರ್‌ಪಿ ಜೊತೆಗೆ ಹೆಚ್ಚುವರಿಯಾಗಿ 150 ರೂ. ಗಳನ್ನು ಕಾರ್ಖಾನೆಗಳು ನೀಡಬೇಕೆಂದು ಆದೇಶ ಹೊರಡಿಸಿತ್ತು. ಆದರೆ ಈ ಸಂಬಂಧ ಸೌತ್ ಇಂಡಿಯನ್ ಶುಗರ್ ಮಿಲ್ಸ್ ಅಸೋಷಿಯೇಷನ್ (ಕಬ್ಬು ಕಾರ್ಖಾನೆ ಮಾಲೀಕರ ಸಂಘಟನೆ) ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು, ಸರ್ಕಾರ ತಡೆಯಾಜ್ಞೆ ತೆರವಿಗೆ ಕ್ರಮ ವಹಿಸಿ, ಈ ಬಾಕಿ ಪಾವತಿಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಕಾರ್ಖಾನೆಯವರೇ ರೈತರ ಜಮೀನಿನಿಂದ ಕಬ್ಬನ್ನು ಕಟಾವು ಮಾಡಿಕೊಳ್ಳುವಂತೆ ಪ್ರತಿ ಟನ್ ಕಬ್ಬಿಗೆ ಕಟಾವು ವೆಚ್ಚ ನಿಗದಿ ಮಾಡಬೇಕು. ಕಾರ್ಖಾನೆ ಆಡಳಿತ ಮಂಡಳಿಯು ಕಬ್ಬು ಬೆಳೆಗಾರರಿಂದ ಮಾಡಿಕೊಳ್ಳುತ್ತಿರುವ ಕರಾರು ಏಕಪಕ್ಷೀಯವಾಗಿದ್ದು, ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳುವಂತೆ ಕ್ರಮ ತೆಗೆದುಕೊಳ್ಳಬೇಕು. ಸಕ್ಕರೆ ಇಳುವರಿ ಲೆಕ್ಕ ಹಾಕಲು ಸರ್ಕಾರ ಮತ್ತು ಕಾರ್ಖಾನೆ ಪ್ರತಿನಿಧಿಗಳನ್ನು ಒಳಗೊಂಡಂತೆ ಪರಿವೀಕ್ಷಣಾ ಸಮಿತಿ ಇದ್ದು, ಈ ಸಮಿತಿಗೆ ರೈತ ಪ್ರತಿನಿಧಿಗಳನ್ನು ಸದಸ್ಯರಾಗಿ ಸೇರ್ಪಡೆ ಮಾಡಬೇಕು. ರಾಜ್ಯ ಸರ್ಕಾರ ಎಸ್‌ಎಪಿ ದರ ನೀಡಬೇಕು. ಕೆಲ ರಾಜ್ಯಗಳಲ್ಲಿ ಎಸ್‌ಎಪಿ ದರ ನೀಡಲಾಗುತ್ತಿದೆ. ಅದೇ ಮಾದರಿಯಲ್ಲಿ ನಮ್ಮ ರಾಜ್ಯ ಸರ್ಕಾರ ಟನ್‌ಗೆ ಕನಿಷ್ಠ 300ರಿಂದ 400 ರೂ. ಕೊಡಬೇಕೆಂದು ಆಗ್ರಹಿಸಿದರು.

ಈ ಎಲ್ಲಾ ಅಂಶಗಳನ್ನು ಇಟ್ಟುಕೊಂಡು ಜಿಲ್ಲಾಧಿಕಾರಿಗಳಿಗೆ ರೈತ ಸಂಘ ಮನವಿ ಸಲ್ಲಿಸಿದೆ. ವಾರದಲ್ಲಿ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು. ಇಲ್ಲವಾದರೆ ಕಬ್ಬು ಬೆಳೆಗಾರರನ್ನು ಸಂಘಟಿಸಿ ಚಳವಳಿ ಹಮ್ಮಿಕೊಳ್ಳುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು.

ಸಂಘದ ಮುಖಂಡರಾದ ಹೊಸಕೋಟೆ ಬಸವರಾಜು, ಪ್ರಸನ್ನ ಎನ್.ಗೌಡ, ಗುರುಲಿಂಗೇಗೌಡ, ಬೊಕ್ಕಳ್ಳಿ ನಂಜುಂಡಸ್ವಾಮಿ, ಹೆಜ್ಜಿಗೆ ಪ್ರಕಾಶ್, ಮಂಡಕಳ್ಳಿ ಮಹೇಶ್, ಮರಂಕಯ್ಯ ಗೋಷ್ಠಿಯಲ್ಲಿದ್ದರು.

ಮಹಿಳೆಯರಿಗೆ ಸರ್ಕಾರ ನೀಡುತ್ತಿರುವ ಸವಲತ್ತಿಗೆ ಟೀಕೆ ಸಲ್ಲದು

ಕರ್ನಾಟಕ ಸರ್ಕಾರದ ಉಚಿತ ಸವಲತ್ತುಗಳು ಕುರಿತ ಕಾರ್ಯಾಗಾರ



ಮೈಸೂರು,ಜು.3(ಎಂಟಿವೈ)– ರಾಜ್ಯ ಸರ್ಕಾರ ಹೆಣ್ಣು ಮಕ್ಕಳಿಗೆ ನೀಡಿರುವ ಸವಲತ್ತು ಕುರಿತಂತೆ ವ್ಯಂಗ್ಯವಾಡುವ ಹಾಗೂ ಹೀಯಾಳಿಸುವುದನ್ನು ಬಿಟ್ಟು, ಸಮಾನತೆಯಿಂದ ನೋಡುವ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದು ಫಲಾನುಭವಿ ಮಹಿಳೆ ವಸಂತಕುಮಾರಿ ಹರತಲೆ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಜನಮನ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ 'ಕರ್ನಾಟಕ ಸರ್ಕಾರದ ಉಚಿತ ಸವಲತ್ತುಗಳು' ಒಂದು ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಸಿವಿನ ಆಕ್ರೋಶದ ಮುಂದೆ ಅನ್ಯ ಪಕ್ಷಗಳು ಮಹಿಳೆಯರಿಗೆ ನೀಡುತ್ತಿರುವ ಭಾಗ್ಯಗಳ ವಿರುದ್ಧದ ಆರೋಪಗಳಿಗೆ ಕಿಂಚಿತ್ತು ಬೆಲೆ ಸಿಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕರ್ನಾಟಕದಲ್ಲಿ ಮಹಿಳೆಯರಿಗೆ ನೀಡಿರುವ ಶಕ್ತಿ ಯೋಜನೆ, ಗೃಹಲಕ್ಷ್ಮಿ ಯೋಜನೆ, ಗೃಹಜ್ಯೋತಿ ಯೋಜನೆ ಸೇರಿದಂತೆ ವಿವಿಧ ಯೋಜನೆಗಳನ್ನು ರಾಜಕೀಯಕ್ಕಾಗಿ ಟೀಕೆ ಮಾಡುತ್ತಿವೆ. ಸರ್ಕಾರ ಉಚಿತ ಸವಲತ್ತುಗಳನ್ನು ನೀಡಿದರೆ ರಾಜ್ಯ ದಿವಾಳಿ ಆಗಲ್ಲ. ಪಕ್ಷ ಅಧಿಕಾರಕ್ಕೆ ಬಂದರೆ ನೂತನ ಯೋಜನೆಗಳನ್ನು ನೀಡುತ್ತೇವೆ ಎಂದು ಕಾಂಗ್ರೆಸ್ ಭರವಸೆ ನೀಡಿತ್ತು. ಅದರಂತೆ ಮಾಡುತ್ತಿದೆ ಎಂದರು.

ಸರ್ಕಾರದಿಂದ ವಿಶೇಷ ಬೆಂಬಲ ಪಡೆಯದ ಸಣ್ಣ ಮತ್ತು ಅತಿ ಸಣ್ಣ ಕೃಷಿ, ವ್ಯಾಪಾರ, ಉದ್ದಿಮೆ ಮತ್ತು ದುಡಿಯುವವರ ಜಿಡಿಪಿ ಕೊಡುಗೆ ಶೇ.40–45ರಷ್ಟಿದೆ. ಹತ್ತಾರು ಕೆ.ಜಿ ಹಿಂಡಿ ತಿಂದು 10 ಲೀಟರ್ ಹಾಲು ಕೊಡುವ ಪರದೇಶಿ ದನ ಮತ್ತು ಹಿತ್ತಲ ಹುಲ್ಲು ಮೇದು 4 ಲೀಟರ್ ಹಾಲು ಕೊಡುವ ದೇಶಿ ದನದ ಕತೆ ಇದ್ದಂತೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ನೀಡಲಿಚ್ಛಿಸುವ ಅಕ್ಕಿ, ವಿದ್ಯುತ್, ನಿರುದ್ಯೋಗ ಭತ್ಯೆ, ಉಚಿತ ಪ್ರಯಾಣ ದಂತಹ ಯೋಜನೆಗಳು ದೇಶಿ ದನದ ರೀತಿ ದುಡಿಯುವ ನಮ್ಮ ಸಮಾಜದ ಮುಕ್ಕಾಲು ಭಾಗ ಜನರಿಗೆ ತಲುಪುವ ಸವಲತ್ತುಗಳಾಗಿವೆ. ಈ ಸವಲತ್ತುಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಂಡರೆ ಪ್ರತಿ ಕುಟುಂಬಕ್ಕೂ ಒಂದೆರಡು ಸಾವಿರ ರೂಪಾಯಿ ನೆರವು ಸಿಗಬಹುದು. ಆದರೆ ಮಾಸಿಕ 10ರಿಂದ 15 ಸಾವಿರ ರೂ. ಆದಾಯವುಳ್ಳವರಿಗೆ ಒಂದೆರಡು ಸಾವಿರ ರೂ. ದೊಡ್ಡ ಮೊತ್ತವೇ ಆಗಿರುತ್ತದೆ ಎಂದು ತಿಳಿಸಿದರು.

ಅದರಲ್ಲೂ ಇತ್ತೀಚಿನ ವರ್ಷಗಳ ಬೆಳವಣಿಗೆಗಳಿಂದ ಅನೇಕ ಸಮಸ್ಯೆ ಎದುರಾಗಿವೆ. ನೋಟು ರದ್ದತಿ, ಜಿಎಸ್‌ಟಿ, ಕೋವಿಡ್ ಹೊಡೆತ, ಆರ್ಥಿಕ ಕುಸಿತ, ನಿರುದ್ಯೋಗ, ಹಣ ದುಬ್ಬರದಂತಹ ಸಮಸ್ಯೆಗಳು ಬಡ ಹಾಗೂ ಮಧ್ಯಮ ವರ್ಗದವರ ಖರೀದಿಸುವ ಶಕ್ತಿಯನ್ನು ಕುಂದಿಸಿವೆ. ಈ ಸವಲತ್ತುಗಳು ಇಂಥವರಿಗೆ ಶಕ್ತಿ ತುಂಬುತ್ತದೆ. ಅನ್ನಭಾಗ್ಯ, ಗೃಹಲಕ್ಷ್ಮಿ ಯೋಜನೆ ಇನ್ನಿತರೆ ಯೋಜನೆ ಜಾರಿಗೆ ಬಂದಾಗ ಬಿಜೆಪಿ ಯವರು ಕಾಂಗ್ರೆಸ್ ಪಕ್ಷದ ಬಗ್ಗೆ ಆರೋಪ ಮಾಡುತ್ತಿರುವುದು ಸರಿಯಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಹಿ.ಶಿ. ರಾಮಚಂದ್ರೇಗೌಡ, ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಚುಕ್ಕಿ ನಂಜುಂಡ ಸ್ವಾಮಿ, ಮಂಜು ಕಿರಣ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು, ಜನಮನ ಪ್ರತಿಷ್ಠಾನದ ಅಧ್ಯಕ್ಷ ಲಕ್ಷ್ಮಣ ಕೊಡಸೆ, ಹಿರಿಯ ರಂಗಕರ್ಮಿ ಬಸವಲಿಂಗಯ್ಯ, ಸಾಹಿತಿ ಕಾತ ಚಿಕ್ಕಣ್ಣ, ವಿಚಾರವಾದಿ ಪ್ರೊ.ಭಗವಾನ್ ಸೇರಿದಂತೆ ಹಲವರು ಇದ್ದರು.

ಡಿ.ಇಎಲ್.ಇಡಿ ದಾಖಲಾತಿ ಪ್ರಕ್ರಿಯೆ ವಿಸ್ತರಣೆ

ಮೈಸೂರು, ಜು.1–ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ 2022–23ನೇ ಸಾಲಿನ ಡಿ.ಇಎಲ್.ಇಡಿ ದಾಖಲಾತಿ ಪ್ರಕ್ರಿಯೆಯು ಜುಲೈ 7 ರವರೆಗೆ ವಿಸ್ತರಣೆಯಾಗಿದ್ದು, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಮಾನ್ಯ ಹಾಗೂ ಇತರೆ ಅಭ್ಯರ್ಥಿಗಳು ಶೇ.50ರಷ್ಟು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಶೇ.45ರಷ್ಟು ಅಂಕಗಳನ್ನು ಗಳಿಸಿರಬೇಕು. ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳಿಗೂ ಅವಕಾಶವಿದೆ.

ಸಾಮಾನ್ಯ ವರ್ಗದವರಿಗೆ ವಾರ್ಷಿಕ ಶುಲ್ಕ ರೂ 3065/– (ವಿದ್ಯಾರ್ಥಿವೇತನ ಶುಲ್ಕ ಮರುಪಾವತಿಗೆ ಅವಕಾಶವಿದ್ದು, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ಸರ್ಕಾರದ ವತಿಯಿಂದ ಪ್ರೋತ್ಸಾಹ ಧನ ರೂ. 25000/– ದೊರೆಯುತ್ತದೆ) ಕೋರ್ಸ್ ಪೂರ್ಣಗೊಂಡ ನಂತರ ಖಾಸಗಿ ಶಾಲೆಯಲ್ಲಿ ಉದ್ಯೋಗವಕಾಶ ಕಲ್ಪಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಪಿ.ಎಸ್.ಟಿ.ಇ ನೋಡಲ್ ಅಧಿಕಾರಿಗಳಾದ ಅಮಿತ್.ಡಿ.ಆರ್ ಅವರ ಮೊಸಂ.8971265899 ಅನ್ನು ಸಂಪರ್ಕಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಜುಲೈ 7 ಕಡೆಯ ದಿನಾಂಕವಾಗಿರುತ್ತದೆ ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ(ಡಯಟ್) ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸುವಂತೆ ಮನವಿ



ಮೈಸೂರಿನ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಎಐಡಿಎಸ್‌ಒ ಕಾರ್ಯಕರ್ತರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮೈಸೂರು,ಜು.3(ಎಂಟಿವೈ)– ರಾಜ್ಯದ ವಿದ್ಯಾರ್ಥಿಗಳ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ಕಾರ್ಯಕರ್ತರು, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರ ಮೂಲಕ ಜಿಲ್ಲಾ ಉಸ್ತುವಾರಿ ಸಚಿವರಿಗೆ ಸೋಮವಾರ ಮನವಿ ಸಲ್ಲಿಸಿದರು.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಹಾಗೂ ವಿಜ್ಞಾನ ಕಾಲೇಜುಗಳಿಗೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಬೇಕು. ಕುಸಿದು ಬಿದ್ದಿರುವ ರಸಾಯನಶಾಸ್ತ್ರ ಪ್ರಯೋಗಾಲಯವನ್ನು ಪುನರ್ ನಿರ್ಮಿಸಬೇಕು. ಕಾಲೇಜಿನ ಆವರಣದೊಳಗೆ ಇಂದಿರಾ ಕ್ಯಾಂಟೀನ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕು. ಶೌಚಾಲಯ ಸ್ವಚ್ಛತೆ, ಕುಡಿಯುವ ನೀರು ಇನ್ನಿತರ ಮೂಲ ಸೌಲಭ್ಯ ಕಲ್ಪಿಸಬೇಕು. ಮಹಾರಾಣಿ ವಾಣಿಜ್ಯ ಕಾಲೇಜಿಗೆ ಸೂಕ್ತ ಬಸ್ ವ್ಯವಸ್ಥೆ ಮಾಡ ಬೇಕು. ಮೈಸೂರಿನಲ್ಲಿ ಒಂದು ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಬೇಕು ಎಂದು ಮನವಿ ಸಲ್ಲಿಸಿದ್ದಾರೆ.

ಮನವಿ ಸಲ್ಲಿಕೆ ಬಳಿಕ ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ ಮಾತನಾಡಿ, ಜು.7ಕ್ಕೆ ರಾಜ್ಯ ಸರ್ಕಾರ ಬಜೆಟ್ ಮಂಡನೆ ಮಾಡಲಿದೆ. ಈ ಬಜೆಟ್ ರಾಜ್ಯದ ಶಿಕ್ಷಣದ ಅಗತ್ಯಗಳು ಮತ್ತು ಶೈಕ್ಷಣಿಕ ಸವಾಲುಗಳಿಗೆ ಉತ್ತರವಾಗಿ, ವಿದ್ಯಾರ್ಥಿ ಪರವಾದ ಬಜೆಟ್ ಆಗಿ ರೂಪುಗೊಳ್ಳಲಿ ಎಂದು ಆಶಿಸುತ್ತೇವೆ. ರಾಜ್ಯವ್ಯಾಪಿ ವಿದ್ಯಾರ್ಥಿಗಳ ಆಗ್ರಹಗಳನ್ನು ಒಳಗೊಂಡ ಮನವಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಿದ್ದೇವೆ ಎಂದರು.

ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಬೇಕು. ವಿದ್ಯಾಸಿರಿ ವಿದ್ಯಾರ್ಥಿವೇತನ ಯೋಜನೆಯನ್ನು ಮರು ಜಾರಿಗೊಳಿಸಬೇಕು. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಅನುದಾನ ಹೆಚ್ಚಿಸಿ. ಸರ್ಕಾರದ ಅನುದಾನದಿಂದಲೇ ವಿಶ್ವವಿದ್ಯಾನಿಲಯಗಳ ಆಡಳಿತ ನಿರ್ವಹಣೆಗಾಗಿ ಎಲ್ಲಾ ಸರ್ಕಾರಿ ವಿವಿಗಳಿಗೆ ಸರಿಯಾದ ಅನುದಾನವನ್ನು ಒದಗಿಸುವಂತೆ ಒತ್ತಾಯಿಸಿದರು.



ಸೋಮವಾರ ನಡೆದ ಮೈಸೂರು ತಾಲೂಕು ಹಾಲು ಉತ್ಪಾದಕ ಸಹಕಾರ ಸಂಘಗಳ ಕಾರ್ಯದರ್ಶಿಗಳ ಸಭೆಯಲ್ಲಿ ನಿವೃತ್ತ ಕಾರ್ಯದರ್ಶಿಗಳಾದ ದೊಡ್ಡಕಾನ್ಯ ಮಹದೇವಪ್ಪ, ಮೈದನಹಳ್ಳಿ ಸೋಮೇಗೌಡರಿಗೆ ಒಕ್ಕೂಟದ ವತಿಯಿಂದ ನಾಲ್ಕು ಲಕ್ಷ ರೂ.ಗಳ ಸಹಾಯಧನದ ಚೆಕ್ ವಿತರಿಸಲಾಯಿತು. ಈ ವೇಳೆ ಒಕ್ಕೂಟದ ಮಾಜಿ ಅಧ್ಯಕ್ಷರೂ ಆದ ಹಾಲಿ ನಿರ್ದೇಶಕ ಕೆ. ಉಮಾಶಂಕರ್, ನಿರ್ದೇಶಕರಾದ ಲೀಲಾ ನಾಗರಾಜು, ಸದಾನಂದ, ವ್ಯವಸ್ಥಾಪಕ ದಿವಾಕರ್, ವಿಸ್ತರಣಾಧಿಕಾರಿಗಳಾದ ಸಂತೋಷ್, ಪರಮೇಶ್, ಪ್ರವೀಣ್, ಶಿವಕುಮಾರ್, ವಿನುತಾ, ಮೇಘನಾ ಹಾಗೂ ರಮ್ಯ ಉಪಸ್ಥಿತರಿದ್ದರು.

ಎಂಜಿನಿಯರಿಂಗ್ ಪ್ರವೇಶಾತಿ ಸಂಬಂಧ ಜು.18ರಿಂದ ದಾಖಲಾತಿ ಪರಿಶೀಲನೆ

ಬೆಂಗಳೂರು, ಜು.3(ಕೆಎಂಶಿ)– ಎಂಜಿನಿಯರಿಂಗ್ ಪ್ರವೇಶಾತಿ ಬಯಸಿ, "ಬಿ, ಸಿ, ಡಿ, ಇ, ಎಫ್, ಜಿ, ಎಚ್, ಐ, ಜೆ, ಕೆ, ಎಲ್, ಎಂ, ಎನ್ ಮತ್ತು ಓ" ಅರ್ಹತಾ ಕಂಡಿಕೆಗಳನ್ನು (ಎಲಿಜಬಿಲಿಟಿ ಕ್ಲಾಸಸ್– ಉದಾಹರಣೆಗೆ ಹೊರನಾಡು ಕನ್ನಡಿಗರು, ರಾಜ್ಯದ ಸೈನಿಕರು, ರಕ್ಷಣಾ ಸಿಬ್ಬಂದಿ ಮಕ್ಕಳು ಇತ್ಯಾದಿ) ಕ್ಲೇಮ್ ಮಾಡಿರುವ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಯು ಜುಲೈ 18ರಿಂದ 21ರವರೆಗೆ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕೇಂದ್ರ ಕಚೇರಿಯಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

ಮೇಲ್ಕಂಡ ನಾಲ್ಕೂ ದಿನ ಬೆಳಗ್ಗೆ 9.30ರಿಂದ ದಾಖಲಾತಿಗಳ ಪರಿಶೀಲನೆ ಆರಂಭವಾಗಲಿದೆ. ರ್‍ಯಾಂಕ್ ಪಡೆದಿರುವ ಅಭ್ಯರ್ಥಿಗಳು ಕ್ರಮವಾಗಿ ಯಾವ ದಿನದಂದು ಈ ಪ್ರಕ್ರಿಯೆಗೆ ಮೂಲ ದಾಖಲಾತಿಗಳು ಮತ್ತು ಒಂದು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು ಎನ್ನುವುದನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇದರಂತೆ ಅಭ್ಯರ್ಥಿಗಳು ಆಗಮಿಸಬೇಕು ಎಂದು ಮಾಹಿತಿ ನೀಡಿದ್ದಾರೆ. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗೆ ಪ್ರಾಧಿಕಾರದ ಜಾಲತಾಣ http://kea.kar.nic.in ನೋಡಬಹುದು.

ಪತ್ರಕರ್ತರು ಸಮಾಜವನ್ನು ಸರಿದಾರಿಗೆ ತರುವ ಕಾರ್ಯ ನಿರ್ವಹಿಸಬೇಕು

ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಸಿ.ಎ. ಶ್ರೀಧರ ಸಲಹೆ



ಮೈಸೂರು,ಜು.3(ಎಂಟಿವೈ)– ಪತ್ರಕರ್ತರು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಮಹತ್ತರ ಜವಾಬ್ದಾರಿಯನ್ನು ನಿಭಾಯಿಸುವುದರೊಂದಿಗೆ, ಸಮಾಜದಲ್ಲಿರುವ ನಾಗರಿಕ ಸಮಸ್ಯೆಗಳಿಗೆ ಪರಿಹಾರ ದೊರಕಿಸಿ ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಸಿ.ಎ. ಶ್ರೀಧರ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಜೂನಿಯರ್ ಬಿ.ಎ. ಹಾಲ್‌ನಲ್ಲಿ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗ ಆಯೋಜಿಸಿದ್ದ ಕನ್ನಡ ಪತ್ರಿಕಾ ದಿನಾಚರಣೆ ಹಾಗೂ ಅಂತಿಮ ಬಿ.ಎ. ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಮಾಜದ ಅವಿಭಾಜ್ಯ ಅಂಗವಾಗಿರುವ ಪತ್ರಿಕೆಗಳು ಸತ್ಯನಿಷ್ಠ ವರದಿಗಳ ಮೂಲಕ ಸಮಾಜ ಮುಖಿಯಾಗಿರಬೇಕು. ಪತ್ರಿಕೆಗಳು ಓದುಗರಿಗೆ ಎಲ್ಲಾ ಬಗೆಯ ಮಾಹಿತಿ ಒದಗಿಸುವ ವಿಶ್ವಕೋಶ ಎನಿಸಿದೆ. ಇಂತಹ ಸಂದರ್ಭದಲ್ಲಿ ಹಳಿ ತಪ್ಪುವ ಸಮಾಜವನ್ನು ಸರಿದಾರಿಗೆ ತರುವ ಸರ್ಜನ್‌ಗಳಂತೆ ಪತ್ರಕರ್ತರು ಕಾರ್ಯನಿರ್ವಹಿಸಬೇಕಾಗಿದೆ ಎಂದರು.

ಎಲ್ಲರೂ ಪ್ರತಿದಿನ ಪತ್ರಿಕೆಗಳನ್ನು ಓದುವ ಮೂಲಕ ಜ್ಞಾನ, ಶಬ್ದ ಭಂಡಾರ ಹೆಚ್ಚಿಸಿಕೊಳ್ಳಬೇಕು. ಪತ್ರಿಕೋದ್ಯಮ ವಿದ್ಯಾರ್ಥಿಗಳು ಪತ್ರಿಕೆ ಓದುವುದರ ಜೊತೆಗೆ ಬಿಡುವಿನ ವೇಳೆಯಲ್ಲಿ ಗ್ರಂಥಾಲಯಗಳಿಗೆ ಭೇಟಿ ನೀಡಿ, ವಿವಿಧ ವಿಷಯ ಕುರಿತಂತೆ ಮಾಹಿತಿ ಕಲೆ ಹಾಕಬೇಕು. ಮೈಸೂರಿನ ಪತ್ರಿಕೋದ್ಯಮಕ್ಕೆ ಎಂ. ವೆಂಕಟಕೃಷ್ಣಯ್ಯ (ತಾತಯ್ಯ), ಅಗರಂ ರಂಗಯ್ಯ ಸೇರಿದಂತೆ ಅನೇಕ ಮಹನೀಯರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹಿರಿಯರ ಮಾರ್ಗ ದರ್ಶನದಲ್ಲಿ ಹೊಸ ತಲೆಮಾರಿನ ಪತ್ರಕರ್ತರು ಕಾರ್ಯೋನ್ಮುಖರಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಆರ್.ಎನ್. ಪದ್ಮನಾಭ ಅವರು, ಪತ್ರಿಕೋದ್ಯಮ ಉನ್ನತ ಶಿಕ್ಷಣಕ್ಕೆ ಇರುವ ಸಂಸ್ಥೆಗಳು, ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿ ಸಿಗುವ ಉದ್ಯೋಗವಕಾಶಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಷಣ್ಮುಗಂ, ವಿಭಾಗದ ಪ್ರಭಾರ ಮುಖ್ಯಸ್ಥ ಪ್ರೊ.ಲ್ಯಾನ್ಸಿ ಡಿಸೋಜ, ವಿಭಾಗದ ಉಪನ್ಯಾಸಕರಾದ ಡಾ.ಆರ್. ರಾಘವೇಂದ್ರ, ಡಾ. ಶ್ವೇತಾ ಎಂ.ಹನ್ಸ್, ಡಾ.ಗೋಪಾಲ್, ಡಾ.ಕೂಡ್ಲಿ ಗುರುರಾಜ, ಕೇಶವಮೂರ್ತಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ತೇಜಸ್ವಿನಿ ಹೆಗಡೆ ಪ್ರಾರ್ಥಿಸಿದರೆ, ಎಂ. ಚೈತ್ರಾ ಸ್ವಾಗತಿಸಿದರು. ಜೆ. ಭೂಮಿಕಾ ಅತಿಥಿಗಳನ್ನು ಪರಿಚಯಿಸಿದರು. ಟಿ.ಎಸ್. ಅಕ್ಷಯ್ ವಂದಿಸಿದರು. ಆರ್. ಅರ್ಪಿತಾ ಹಾಗೂ ಜೆ.ಎಂ. ಮಧು ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ನೀಡಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

> ಹರ್ಮನ್ ಮೊಗ್ಲಿಂಗ್ ಅವರು ಮೊಟ್ಟ ಮೊದಲ ಕನ್ನಡ ಪತ್ರಿಕೆ 'ಮಂಗಳೂರು ಸಮಾಚಾರ' ಆರಂಭಿಸಿ 180 ವರ್ಷ ಕಳೆದಿದೆ. ಅದರ ನೆನಪಿಗಾಗಿ ಪ್ರತಿ ವರ್ಷ ಜು.1ರಂದು ಕನ್ನಡ ಪತ್ರಿಕಾ ದಿನ ಆಚರಿಸಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಇಲಾಖೆ ಮತ್ತು ಪತ್ರಕರ್ತರ ಸಂಘಟನೆಗಳು ಸೇರಿ ಆತ್ಮಾವಲೋಕನ ಮಾಡಿಕೊಳ್ಳುತ್ತಿವೆ. ಪತ್ರಕರ್ತರಾದವರಿಗೆ ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನಗಳ ಅರಿವು, ಆಧುನಿಕ ಕೌಶಲ್ಯ ಅಗತ್ಯ ಮುಖ್ಯವಾಗಿ ಅಧ್ಯಯನ ಹಾಗೂ ಭಾಷೆ ಮೇಲೆ ಹಿಡಿತ ಇರಬೇಕು. ಇದರಿಂದ ಪತ್ರಿಕೋದ್ಯಮ ಪದವಿ, ಸ್ನಾತಕೋತ್ತರ ಪದವಿ ಕಲಿತವರಿಗೆ ನಿರುದ್ಯೋಗ ಸಮಸ್ಯೆ ಕಾಡುವುದಿಲ್ಲ
>
> -ಅಂತಿ ಪ್ರಸನ್ನಕುಮಾರ್, ಹಿರಿಯ ಪತ್ರಕರ್ತ

ಮೈಸೂರಲ್ಲಿ ಭಕ್ತಿ ಭಾವದ ಗುರು ಪೂರ್ಣಿಮೆ

ಸಾಯಿಬಾಬಾ ಮಂದಿರಗಳಲ್ಲಿ, ಪ್ರಾರ್ಥನೆ, ಭಜನೆ, ವಿಶೇಷ ಪೂಜೆ





ಮೈಸೂರು,ಜು.3(ಬಿಎಲ್‌ಯು)– ಮೈಸೂರಿನಲ್ಲಿ ಸೋಮವಾರ ಗುರು ಪೂರ್ಣಿಮೆಯನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಮೈಸೂರಿನ ಎಲ್ಲಾ ಸಾಯಿಬಾಬಾ ಮಂದಿರಗಳಲ್ಲಿ ಗುರು ಪೂರ್ಣಿಮೆ ಹಿನ್ನೆಲೆ ಸಾಯಿನಾಥರಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ಹಿಂದೂ ಪಂಚಾಂಗದಂತೆ ಆಷಾಢ ಮಾಸದ ಹುಣ್ಣಿಮೆಯನ್ನು ಹಿಂದೂಗಳು ಸಾಂಪ್ರದಾಯಿಕವಾಗಿ ಗುರು ಪೂರ್ಣಿಮೆ ಎಂದು ಆಚರಿಸುತ್ತಾರೆ. ಗುರು ಪೂರ್ಣಿಮೆ ದಿನದಂದು ಗುರುಗಳನ್ನು ಆಹ್ವಾನಿಸಿ, ಗೌರವಿಸುವ ಸಂಪ್ರದಾಯ ಶಾಸ್ತ್ರಗಳಲ್ಲಿ ಉಲ್ಲೇಖವಾಗಿದೆ. ಗೌತಮ ಬುದ್ಧನ ಪ್ರಥಮ ಧರ್ಮೋಪದೇಶದ ಅಂಗವಾಗಿ ಬೌದ್ಧ ಧರ್ಮಿಯರು ಕೂಡ ಗುರು ಪೂರ್ಣಿಮೆಯನ್ನು ಭಕ್ತಿಭಾವದಿಂದ ಆಚರಿಸುತ್ತಾರೆ. ಗುರು ಪೂರ್ಣಿಮೆ ದಿನದಂದು ಸಾಯಿಬಾಬಾರನ್ನು ಭಕ್ತರು ವಿಶೇಷವಾಗಿ ಪೂಜಿಸುತ್ತಾರೆ. ಮೈಸೂರಿನ ತ್ಯಾಗರಾಜರಸ್ತೆಯ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ 85 ನೇ ವರ್ಷದ ಗುರು ಪೂರ್ಣಿಮೆ ಮಹೋತ್ಸವ ಅದ್ಧೂರಿಯಾಗಿ ನಡೆಯಿತು. ಮುಂಜಾನೆ 6 ಗಂಟೆಗೆ ಸಾಯಿನಾಥರಿಗೆ ಅಭಿಷೇಕ, ಮಹಾ ಲಕ್ಷಾರ್ಚನೆ ನಡೆಯಿತು. ತರುವಾಯ ಕಾಕಡ ಆರತಿ, ಮಹಾ ಗಣಪತಿ ಪೂಜೆ ಸೇರಿದಂತೆ ಹಲವು ಪೂಜಾ ಕೈಂಕರ್ಯಗಳ ನೆರವೇರಿಸಲಾಯಿತು. ಬೆಳಗ್ಗೆ 7 ಗಂಟೆಯಿಂದ ಭಕ್ತರಿಗೆ ದರ್ಶನ ಅವಕಾಶ ಕಲ್ಪಿಸಲಾಯಿತು. ಸಹಸ್ರಾರು ಭಕ್ತರು ಸಾಯಿಬಾಬಾರ ದರ್ಶನ ಪಡೆದು ಧನ್ಯತಾ ಭಾವ ಮೆರೆದರು. ಭಕ್ತರಿಗೆ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

ಮೈಸೂರಿನ ರಾಮಕೃಷ್ಣನಗರದ ಸಾಯಿಬಾಬಾ ಮಂದಿರ, ರಾಮಾನುಜ ರಸ್ತೆಯ ಸಾಯಿಬಾಬಾ ಮಂದಿರ, ಚಾಮುಂಡಿವಿಹಾರ ಸ್ಟೇಡಿಯಂ ಪಕ್ಕದ ಸಾಯಿಬಾಬಾ ಗುಡಿಯಲ್ಲೂ ಕೂಡ ಇದೇ ರೀತಿಯ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಗುರು ಪೂರ್ಣಿಮೆ ದಿನದಂದು ಗುರು ಸೂತ್ರದ ಪ್ರಭಾವ ಬೇರೆ ದಿನಗಳಿಗಿಂತ ಸಾವಿರ ಪಟ್ಟು ಹೆಚ್ಚಿರುತ್ತದೆ. ಆದ ಕಾರಣ ಗುರು ಪೂರ್ಣಿಮೆ ದಿನದಂದು ಶಿಷ್ಯ ವೃಂದ ಗುರುಗಳನ್ನು ಆರಾಧಿಸುವುದು ಸತ್ಸಂಪ್ರದಾಯವಾಗಿದೆ.

ನಮ್ಮ ಜೀವನ ಪಾವನವಾಗಲು ಗುರುವಿನ ಅನುಗ್ರಹ ಅವಶ್ಯ

ಸಮಾಜ ಸೇವಕ ರಘುರಾಮ್ ವಾಜಪೇಯಿ ಅಭಿಮತ



ಮೈಸೂರು, ಜು. 3– ಮಾನವ ಜನ್ಮವನ್ನು ಸದುಪಯೋಗಪಡಿಸಿಕೊಳ್ಳಬೇಕಾದರೆ ಗುರುವಿನ ಅನುಗ್ರಹಬೇಕು ಎಂದು ಹಿರಿಯ ಸಮಾಜ ಸೇವಕರಾದ ಕೆ ರಘುರಾಮ ವಾಜಪೇಯಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ರಾಮಾನುಜ ರಸ್ತೆಯಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಗುರುಗಳನ್ನು ಸ್ಮರಿಸುತ್ತಾ ಗುರು ಪೂರ್ಣಿಮೆ ಅಂಗವಾಗಿ ನಡೆದ ಗೋಪೂಜೆ ಹಾಗೂ ಶಾಲಾ ಮಕ್ಕಳಿಗೆ ಪುಸ್ತಕ ಮತ್ತು ಸಸಿ ನೆಡುವ ಮೂಲಕ ಗುರುವಂದನಾ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಬಳಿಕ ಮಾತನಾಡಿದ ಅವರು, ನಮ್ಮಲ್ಲಿರುವ ಚಂಚಲ ಬುದ್ಧಿ ಹೋಗಲಾಡಿಸಲು ಗುರುಗಳ ಧ್ಯಾನ ಮಾಡುತ್ತಾ ಆತ್ಮ ಚಿಂತನೆಯನ್ನು ಮಾಡಬೇಕು. ನಮ್ಮ ಸಂಸ್ಕೃತಿಯಲ್ಲಿ ಗುರುವಿನ ಸಂಪ್ರದಾಯಕ್ಕೆ ವಿಶಿಷ್ಟ ಸ್ಥಾನ ಇದೆ. ಗುರು ವ್ಯಕ್ತಿ ಅಲ್ಲ ಶಕ್ತಿ. ಗುರುವಿನ ಸನ್ಮಾರ್ಗದಲ್ಲಿ ನಡೆದು ಉತ್ತಮ ಸಮಾಜ ನಿರ್ಮಿಸಬೇಕು ಎಂದರು.

ಮೈಸೂರು ಜಿಲ್ಲಾ ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ ಮಾತನಾಡಿ, ಭಾರತ ಸಂಸ್ಕೃತಿಯಲ್ಲಿ ಗುರು ಶಿಷ್ಯ ಪರಂಪರೆ ಮಹತ್ವವನ್ನು ಪಡೆದುಕೊಂಡಿದೆ. ಗುರುಗಳಿಗೆ ಗೌರವ, ಪೂಜ್ಯ ಭಾವನೆ ಇತ್ತು. ಜತೆಗೆ ಗುರುವನ್ನು ದೇವರ ಸಮಾನ ಎಂದು ಪೂಜಿಸಿದ್ದ ಸಂಸ್ಕೃತಿ ನಮ್ಮದಾಗಿದೆ. ಇಂತಹ ಪರಂಪರೆಯನ್ನು ಉಳಿಸಿ ಬೆಳೆಸುತ್ತಿರುವ ಈ ಯುವಕರ ಕಾರ್ಯ ಮಹತ್ವವಾಗಿದೆ ಎಂದರು.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷರಾದ ಎಚ್‌ಎನ್ ಶ್ರೀಧರ್ ಮೂರ್ತಿ ಮಾತನಾಡಿ, ತಂದೆ–ತಾಯಿ ನಮ್ಮನ್ನು ಹೆತ್ತು ಹೊತ್ತು ಬೆಳೆಸಿದರೆ, ಮಾನವ ಜನ್ಮ ಸಾರ್ಥಕತೆ ಮಾಡಿಕೊಳ್ಳಲು ಸದ್ಗುರುಗಳು ನಮಗೆ ಮೋಕ್ಷದ ದಾರಿಯನ್ನು ತೋರಿಸುತ್ತಾರೆ. ಆಧ್ಯಾತ್ಮಿಕತೆಯಲ್ಲಿ ಕಾಲ ಕಳೆದರೆ ಅದರಲ್ಲಿ ಸಿಗೋ ನೆಮ್ಮದಿಯೇ ಬೇರೆ ಎಂದರು.ಶಾಸ್ತ್ರ ಪ್ರವಚನ ಕೇಳುವುದರಿಂದ ನಮ್ಮ ಮನಸ್ಸು ದೇವನ ಕಡೆಗೆ ಒಲಿಯುತ್ತದೆ. ಆಡಂಬರದ ಜೀವನ ಬಿಟ್ಟು ಸಂತ ಶರಣರ ದರ್ಶನ ಪಡೆದು ಪಾರಮಾರ್ಥದಲ್ಲಿ ಪರಮಾನಂದ ಸವಿಯಬೇಕು ಎಂದರು.

ವಿಪ್ರ ಮಹಿಳಾ ಸಂಗಮದ ಅಧ್ಯಕ್ಷರಾದ ಡಾ.ಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಗೋ ಪರಿವಾರ ಸಂಚಾಲಕರು, ರಾಕೇಶ್ ಭಟ್, ವಿನಯ್ ಕಣಗಾಲ್, ಸುಚಿಂದ್ರ, ಮಿರ್ಲೆ ಫಣೀಶ್, ನಾಗಶ್ರೀ ಸುಚಿಂದ್ರ, ವಿದ್ಯಾ, ಚಿತ್ರ ಸುಚೀಂದ್ರ, ಶಾರದಾ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಚಮಯ್ಯ, ಮುಖ್ಯ ಶಿಕ್ಷಕರಾದ ಡಿ.ಶಿವಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಶ್ರೀ ಮಾಯಾಕಾರ ಗುರುಕುಲ ಪಂಚಾಂಗ ಆ್ಯಪ್ ಬಿಡುಗಡೆ



ಮೈಸೂರು,ಜು.3(ಬಿಎಲ್‌ಯು)– ಗುರು ಪೂರ್ಣಿಮಾ ಆಚರಣೆ ಅಂಗವಾಗಿ ಮೈಸೂರಿನ ಶ್ರೀ ಮಾಯಾಕಾರ ಗುರುಕುಲ ಪಂಚಾಂಗ ಆ್ಯಪ್ ಅನ್ನು ಬಿಡುಗಡೆ ಮಾಡಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗುರುಕುಲ ಸಂಸ್ಥಾಪಕ ಅಧ್ಯಕ್ಷ ಡಾ.ಮೂಗೂರು ಮಧುದೀಕ್ಷಿತ್ ಅವರು ಪಂಚಾಂಗದ ನೂತನ ಆ್ಯಪ್ ಬಿಡುಗಡೆ ಮಾಡಿದರು.

ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ಜಾತಕ ಹೊಂದಾಣಿಕೆ, ಸಾಲಾವಳಿ, ನಿತ್ಯ ಪಂಚಾಂಗ ಸೇರಿದಂತೆ ಹಲವು ಮಾಹಿತಿಗಳು ಆ್ಯಪ್‌ನಲ್ಲಿದೆ ಎಂದು ಇದೇ ವೇಳೆ ಅವರು ತಿಳಿಸಿದರು.

ಗುರುಕುಲದ ಶಿಷ್ಯರೆಲ್ಲಾ ಸೇರಿ ಈ ಸಂದರ್ಭದಲ್ಲಿ ಡಾ.ಮೂಗೂರು ಮಧುದೀಕ್ಷಿತ್ ಅವರನ್ನು ಸನ್ಮಾನಿಸಿ, ಗುರುವಂದನೆ ಸಲ್ಲಿಸಿದರು. ಗುರುಕುಲದ ವತಿಯಿಂದ ಸಾಧಕರಾದ ದಿವ್ಯ ಚಕ್ಷು ಆ್ಯಪ್ ಮುಖ್ಯಸ್ಥ ಅಭಿನಂದನ್ ನರೇಂದ್ರ, ಎಸ್‌ಬಿಯು ವಿಷ್ ಲೈಫ್ ಕೇರ್‌ನ ಮುಖ್ಯಸ್ಥ ಸಿ.ರಘು ಅವರನ್ನು ಸನ್ಮಾನಿಸಲಾಯಿತು. ಎಂಎನಲ್ಲಿ ವಿದ್ವತ್ ಮಾಡಿರುವ 10 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಗುರುಕುಲದ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

ನಾಳೆ ಸಮನ್ವಯ ಸಮಿತಿ ವಿಶೇಷ ಸಭೆ

ಮೈಸೂರು, ಜು. 3(ಆರ್‌ಕೆ)–ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗ (ಡೆಂಗ್ಯೂ, ಚಿಕುನ್‌ಗುನ್ಯಾ, ಮಲೇರಿಯಾ)ಗಳ ನಿಯಂತ್ರಣ ಸಂಬಂಧ ಜು.5ರಂದು ಬೆಳಗ್ಗೆ 11.30 ಗಂಟೆಗೆ ಮೈಸೂರಿನ ಸಿದ್ದಾರ್ಥನಗರದ ಜಿಲ್ಲಾ ಮಟ್ಟದ ಕಚೇರಿಗಳ ಸಮುಚ್ಛಯದಲ್ಲಿ ಅಂತರ ಇಲಾಖಾ ಸಮನ್ವಯ ಸಮಿತಿ ವಿಶೇಷ ಸಭೆ ಆಯೋಜಿಸಲಾಗಿದೆ. ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿಗಳು, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ಇತರ ಇಲಾಖೆಗಳ ಅಧಿಕಾರಿಗಳು ಭಾಗವಹಿಸಲಿದ್ದು, ಜಿಲ್ಲೆಯಲ್ಲಿ ಡೆಂಗ್ಯೂ, ಚಿಕುನ್‌ಗುನ್ಯಾ, ಮಲೇರಿಯಾದಂತಹ ರೋಗಗಳ ನಿಯಂತ್ರಿಸುವ ಬಗ್ಗೆ ಚರ್ಚೆ ನಡೆಯಲಿದೆ.

ಜಮ್ಮು ಮತ್ತು ಕಾಶ್ಮೀರ: 370ನೇ ವಿಧಿ ರದ್ದು ಪ್ರಶ್ನಿಸಿದ ಅರ್ಜಿಗಳ ವಿಚಾರಣೆ ಜು.11ಕ್ಕೆ

ನವದೆಹಲಿ: ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ ಸಂವಿಧಾನದ 370ನೇ ವಿಧಿ ರದ್ದತಿ ಹಾಗೂ ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಜುಲೈ 11ರಂದು ನಡೆಸಲಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಸೇರಿದಂತೆ ಐವರು ನ್ಯಾಯಾದೀಶರನ್ನೊಳಗೊಂಡ ಪೀಠ ಈ ಅರ್ಜಿಗಳ ವಿಚಾರಣೆ ನಡೆಸಲಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ ಸಂವಿಧಾನದ 370ನೇ ವಿಧಿಯನ್ನು 2019ರ ಆ.5ರಂದು ರದ್ದುಪಡಿಸಿದ್ದ ಕೇಂದ್ರ ಸರ್ಕಾರ, ರಾಜ್ಯವನ್ನು 'ಜಮ್ಮು ಮತ್ತು ಕಾಶ್ಮೀರ' ಹಾಗೂ 'ಲಡಾಖ್' ಎಂದು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿದೆ. ರಾಜ್ಯ ವಿಭಜನೆಗೂ ಮುನ್ನ ಇಲ್ಲಿ ಪಿಡಿಪಿ–ಬಿಜೆಪಿ ಮೈತ್ರಿ ಸರ್ಕಾರ ಅಸ್ತಿತ್ವದಲ್ಲಿತ್ತು. ಆದರೆ, ಬಿಜೆಪಿಯು 2018ರ ಜೂನ್ 19ರಂದು ಬೆಂಬಲ ಹಿಂಪಡೆಯುವುದರೊಂದಿಗೆ ಸರ್ಕಾರ ಪತನಗೊಂಡಿತ್ತು. ಮುಖ್ಯಮಂತ್ರಿ ಸ್ಥಾನಕ್ಕೆ ಮುಫ್ತಿ ರಾಜೀನಾಮೆ ನೀಡಿದ್ದರು. ಇದಾದ ಬಳಿಕ ರಾಜ್ಯದಲ್ಲಿ ಯಾವುದೇ ಚುನಾಯಿತ ಸರ್ಕಾರ ರಚನೆಯಾಗಿಲ್ಲ.


ಪ್ರತಿಯೊಂದು ಸತ್ಕಾರ್ಯದ ಹಿಂದೆ ಗುರುವಿನ ಪ್ರೇರಣೆ ಇದ್ದೇ ಇರುತ್ತದೆ

ಮೈಸೂರು ಬ್ರಾಹ್ಮಣ ಸಮಾಜದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅಭಿಮತ



ಮೈಸೂರು, ಜು. 3– ಭಾರತೀಯ ಸಂಸ್ಕೃತಿಯಲ್ಲಿ ಅನಾದಿಕಾಲದಿಂದ ಗುರುಪೂರ್ಣಿಮೆ ಆಚರಿಸಲಾಗುತ್ತಿದೆ. ನಮ್ಮ ಪ್ರತಿಯೊಂದು ಸತ್ಕಾರ್ಯದ ಹಿಂದೆ ಗುರುವಿನ ಪ್ರೇರಣೆ ಇದ್ದು, ಗುರುವಿನ ಆಶೀರ್ವಾದವಿದ್ದರೆ ಎಲ್ಲವನ್ನೂ ಸಾಧಿಸಬಹುದು ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ.ಟಿ.ಪ್ರಕಾಶ್ ಹೇಳಿದರು.

ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ಶ್ರೀ ಸುಶಮಿಂದ್ರತೀರ್ಥ ಸೇವಾ ಸಮಿತಿ ವತಿಯಿಂದ ಗುರುಪೂರ್ಣಿಮೆ ಅಂಗವಾಗಿ ಸಾವಿರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತೀಯ ಪರಂಪರೆಯಲ್ಲಿ ಮಠಗಳ ಪಾತ್ರ ಅಮೋಘವಾಗಿದ್ದು, ಪ್ರತಿಯೊಂದು ಮಠಗಳಿಗೆ ಭಕ್ತರೇ ಆಧಾರ ಸ್ತಂಭ, ಧರ್ಮ ಪರಂಪರೆ ಉಳಿಸಿಕೊಂಡು ಬರುವಲ್ಲಿ ಮಠಮಾನ್ಯಗಳ ಸೇವೆ ಅಮೋಘ, ಹೆತ್ತ ತಂದೆ ತಾಯಿ ಮತ್ತು ಗುರುವಿನ ಋಣ ತೀರಿಸಲು ಸಾಧ್ಯವಿಲ್ಲ ಎಂದರು. ಶ್ರೀ ಸುಶಮಿಂದ್ರತೀರ್ಥ ಸೇವಾ ಸಮಿತಿ ಅಧ್ಯಕ್ಷರಾದ ನಾಗರಾಜು, ಉಪಾಧ್ಯಕ್ಷ ವರುಣ ಮಹದೇವ್, ಗೌರವಾಧ್ಯಕ್ಷ ಓಂಕಾರ್ ಆನಂದ್, ಕಾರ್ಯದರ್ಶಿ ಮಹದೇವ್, ಅರಮನೆ ಆಡಳಿತ ಮಂಡಳಿಯ ನಿರ್ದೇಶಕರಾದ ಸುಬ್ರಮಣ್ಯ, ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಗಿರೀಶ್ ಗೌಡ, ಮಹದೇವ್, ಸಂತೋಷ್ ಶಂಭು, ಪರಮೇಶ್‌ಗೌಡ, ರವಿಚಂದ್ರ, ಸಂದೀಪ್, ನವೀನ್, ಸುಬ್ಬಣ್ಣ ಹಾಗೂ ಇನ್ನಿತರರು ಭಾಗಿಯಾಗಿದ್ದರು



ಮೈಸೂರಿನಲ್ಲಿ ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ 36 ನೇ ಚಾತುರ್ಮಾಸ್ಯ ವ್ರತದ ಸ್ವಾಗತ ಸಮಾರಂಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ನಂ.ಶ್ರೀಕಂಠ ಕುಮಾರ್, ಕಾರ್ಯಕಾರಿ ಸದಸ್ಯರಾದ ಎಸ್. ರವಿಕುಮಾರ್, ಶಂಕರನಾರಾಯಣ ಫಲಪುಷ್ಪ ಸಮರ್ಪಿಸಿದರು. ಕೃಷ್ಣರಾಜ ಕ್ಷೇತ್ರದ ಶಾಸಕರಾದ ಟಿ.ಎಸ್.ಶ್ರೀವತ್ಸ ಈ ವೇಳೆ ಉಪಸ್ಥಿತರಿದ್ದರು.

ಎನ್‌ಟಿಟಿ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು, ಜು.3–ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮೈಸೂರು ವಿಭಾಗವು ರಾಷ್ಟ್ರೀಯ ಶಿಕ್ಷಣ ಸಮಿತಿಯ ಸಹಯೋಗದೊಂದಿಗೆ 2023–24ನೇ ಸಾಲಿನ ಪೂರ್ವ ಪ್ರಾಥಮಿಕ ಶಿಕ್ಷಕರ ಪ್ರಶಿಕ್ಷಣ ತರಬೇತಿ, ನರ್ಸರಿ ಟೀಚರ್ ಟ್ರೈನಿಂಗ್ ತರಬೇತಿಯ (ಎನ್‌ಟಿಟಿ) ಡಿಪ್ಲೊಮೊ ಕೋರ್ಸ್‌ಗಳಿಗಾಗಿ ಅರ್ಜಿಯನ್ನು ಆಹ್ವಾನಿಸಿದೆ.

ದ್ವಿತೀಯ ಪಿಯುಸಿ ನಂತರದ ವಿದ್ಯಾಭ್ಯಾಸ ಮುಗಿಸಿರುವ ಅಭ್ಯರ್ಥಿಗಳು ಡಿಪ್ಲೊಮಾ ನರ್ಸರಿ ಟೀಚರ್ ಟ್ರೈನಿಂಗ್ ಕೋರ್ಸ್ ಹಾಗೂ ಎಸ್‌ಎಸ್‌ಎಲ್‌ಸಿ ಮುಗಿಸಿರುವ ಅಭ್ಯರ್ಥಿಗಳು ನರ್ಸರಿ ಟೀಚರ್ ಟ್ರೈನಿಂಗ್ ಕೋರ್ಸ್ ತರಬೇತಿಗೆ ಅರ್ಹರಾಗಿರುತ್ತಾರೆ. ಹತ್ತು ತಿಂಗಳ ಈ ಅವಧಿಯಲ್ಲಿ ಮಕ್ಕಳ ಮಾನಸಿಕ ಬೆಳವಣಿಗೆ, ಆರೋಗ್ಯ, ಪ್ರಾಥಮಿಕ ಶಿಕ್ಷಣ ನ್ಯುಟ್ರೀಷಿಯನ್, ಮುಂತಾದ ವಿಷಯಗಳ ಕುರಿತು ನುರಿತ ಉಪನ್ಯಾಸಕರಿಂದ ತರಬೇತಿ ನೀಡಲಾಗುತ್ತದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಪದವಿ, ಡಿಪ್ಲೋಮಾ ವಿದ್ಯಾಭ್ಯಾಸ ಮುಗಿಸಿರುವ 18ರಿಂದ 50ರ ವಯೋಮಾನದ ಅರ್ಹ ಫಲಾನುಭವಿಗಳು ಇದರ ಲಾಭವನ್ನು ಪಡೆದುಕೊಳ್ಳಬಹುದಾಗಿದೆ. ಅಭ್ಯರ್ಥಿಗಳು ಎಸ್‌ಎಸ್‌ಎಲ್‌ಸಿಯಲ್ಲಿ ಕನಿಷ್ಠ ಶೇ.45 ಅಂಕಗಳನ್ನು ಗಳಿಸಿರಬೇಕು.

ಆಸಕ್ತರು ಅರ್ಜಿಗಳನ್ನು ಇದೇ ಜು.5ರಿಂದ ಜಯಲಕ್ಷ್ಮಿದೇವಿ ಕಾಲೇಜು, ರಾಮಕೃಷ್ಣನಗರ ಇಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 8310306882, 9964790442

ಮಹಾಜನ ಕಾಲೇಜಿನಲ್ಲಿ ಇಂದು ಉದ್ಯೋಗ ಮೇಳ

ಪ್ರತಿಷ್ಠಿತ ಕಂಪನಿಗಳಿಂದ ಉದ್ಯೋಗಾಕಾಂಕ್ಷಿಗಳ ಸಂದರ್ಶನ

ಮೈಸೂರು, ಜು. 3–ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಮಹಾಮ್ 2023 ಫೆಸ್ಟ್ ಅಂಗವಾಗಿ ನಾಳೆ (ಜು.4) ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಪ್ರತಿಷ್ಠಿತ ಕಂಪನಿಗಳಾದ ICICI,AXIS, Kotak Mahindra ಬ್ಯಾಂಕುಗಳು, Saint Gobain, Wistron, QUESS, Big Basket, Lenskart, NEXT, Clean Fanatics, Greet Technologies, We-Tech, Simba Group, Grassroots & CASA Grand ನಂತಹ ಸುಮಾರು 17 ಕಂಪನಿಗಳು ಉದ್ಯೋಗಾಕಾಂಕ್ಷಿಗಳಿಗೆ ಅವಕಾಶ ನೀಡಲಿವೆ. ಉದ್ಯೋಗ ಮೇಳವು ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ, ಬಿಬಿಎ, ಎಂಎಸ್ಸಿ, ಎಂಕಾಂ ಮತ್ತು ಎಂಎಸ್‌ಸಿ ವಿದ್ಯಾರ್ಥಿಗಳಿಗೆ Relationship Manager, Assistant Manager, Back Office Executive, Telecalling Executive, HR Recruiter, Branch Relationship Executives, Business Development Executive ಸ್ಥಾನಗಳಿಗೆ ಉದ್ಯೋಗ ಅವಕಾಶ ನೀಡಲಿವೆ ಈವರೆಗೂ 700 ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿರುತ್ತಾರೆ. ಸ್ಥಳದಲ್ಲೇ ಹೆಸರು ನೋಂದಾಯಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ಪ್ಲೇಸ್‌ಮೆಂಟ್ ಸಂಚಾಲಕರಾದ ಹೆಚ್.ಎಲ್. ಸೌಮ್ಯ ಅವರನ್ನು 8197889596ಗೆ ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಮಹಾಜನ ವಿದ್ಯಾ ಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ ಭಾಗವತ್, ಗೌ.ಕಾರ್ಯ ದರ್ಶಿಗಳಾದ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್,ರಮೇಶ್, ಶೈಕ್ಷಣಿಕ ಡೀನ್ ಡಾ.ಹೆಚ್. ಶ್ರೀಧರ ಮತ್ತು ಮಹಾಮ್ 2023ರ ಸಂಚಾಲಕರಾದ ಡಾ.ಎಚ್.ಆರ್. ತಿಮ್ಮೇಗೌಡ ಉದ್ಯೋಗ ಮೇಳದಲ್ಲಿ ಉಪಸ್ಥಿತರಿರುತ್ತಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ನಿಗದಿಗಿಂತ ಹೆಚ್ಚು ಟೋಲ್ ಸಂಗ್ರಹ

ಟ್ಯಾಕ್ಸಿಗಳ ಬಾಡಿಗೆ ಕೂಡ ದುಬಾರಿ, ಕಂಗಾಲಾದ ಜನಸಾಮಾನ್ಯರು



ಮೈಸೂರು, ಜು.3 (ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್‌ಗಳಲ್ಲಿ ಹಗಲು ದರೋಡೆ ನಡೆಯುತ್ತಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿಗದಿ ಮಾಡಿದ್ದ ಶುಲ್ಕ ಒಂದಾದರೆ, ಈಗ ವಸೂಲಿ ಮಾಡುತ್ತಿರುವ ಶುಲ್ಕ ಒಂದಾಗಿದೆ. ದುಬಾರಿ ಶುಲ್ಕ ಭರಿಸಲಾಗದೆ ವಾಹನ ಸವಾರರು ಕಂಗಾಲಾಗಿದ್ದಾರೆ.

ಎಕ್ಸ್‌ಪ್ರೆಸ್ ವೇನಲ್ಲಿ 2 ಟೋಲ್‌ಗಳಿವೆ. ಒಂದು ಶ್ರೀರಂಗಪಟ್ಟಣದ ಗಣಂಗೂರು ಟೋಲ್ ಪ್ಲಾಜಾ, ಮತ್ತೊಂದು ಬಿಡದಿಯ ಶೇಷಗಿರಿಹಳ್ಳಿ ಟೋಲ್ ಪ್ಲಾಜಾ. ನಿನ್ನೆಯಿಂದ ಗಣಂಗೂರು ಟೋಲ್ ಪ್ಲಾಜಾದಲ್ಲಿ ಕೂಡ ಟೋಲ್ ಸಂಗ್ರಹ ಆರಂಭಿಸಲಾಗಿದೆ.

ಮೈಸೂರಿನಿಂದ ಬೆಂಗಳೂರಿಗೆ ಹೋಗಲು ಗಣಂಗೂರು ಟೋಲ್ ಪ್ಲಾಜಾದಲ್ಲಿ 155 ರೂ. ಹಾಗೂ ಶೇಷಗಿರಿಹಳ್ಳಿ ಟೋಲ್ ಪ್ಲಾಜಾದಲ್ಲಿ 165 ರೂ. ನಿಗದಿ ಮಾಡಲಾಗಿದೆ. ಒಂದೇ ದಿನದಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರುತ್ತೇವೆ ಅಂದರೆ 235 ಮಾತ್ರ ಭರಿಸಬೇಕಾಗುತ್ತದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹೇಳಿತ್ತು.

ಆದರೆ ಈಗ ಟೋಲ್ ಪ್ಲಾಜಾದಲ್ಲಿ ವಸೂಲಿ ಮಾಡುತ್ತಿರುವ ಶುಲ್ಕವೇ ಬೇರೆಯಾಗಿದೆ. ಈಗ ಮೈಸೂರಿನಿಂದ ಬೆಂಗಳೂರಿಗೆ ಒಂದೇ ದಿನದಲ್ಲಿ ಹೋಗಿ ಬರುತ್ತೇವೆ ಅಂದರೆ ಗಣಂಗೂರು ಟೋಲ್ ಪ್ಲಾಜಾದಲ್ಲಿ 155 ರೂ. ಪಾವತಿ ಮಾಡಬೇಕು, ಶೇಷಗಿರಿಹಳ್ಳಿ ಟೋಲ್ ಪ್ಲಾಜಾದಲ್ಲಿ 165 ರೂ. ಪಾವತಿಸಬೇಕು. ಮತ್ತೆ ಬೆಂಗಳೂರಿನಿಂದ ಮೈಸೂರಿಗೆ ಬರಬೇಕೆಂದರೆ ಕಣ್ಮಿಣಿಕೆ ಟೋಲ್ ಪ್ಲಾಜಾದಲ್ಲಿ 85 ರೂ. ಹಾಗೂ ಗಣಂಗೂರು ಟೋಲ್‌ನಲ್ಲಿ 80 ರೂ. ಪಾವತಿ ಮಾಡಬೇಕು. ಈ ಮೂಲಕ ಒಂದೇ ದಿನದಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರಲು 485 ರೂ.ಗಳನ್ನು ಟೋಲ್‌ಗಾಗಿ ನೀಡಬೇಕಾಗಿದೆ.

ಒಂದು ವೇಳೆ ಮಾರನೇ ದಿನ ಬರುತ್ತೇವೆ ಅಂದರೆ 640 ರೂ.ಗಳಾಗುತ್ತದೆ. ಫಾಸ್ಟ್ ಟ್ಯಾಗ್ ಇದ್ದರೆ ಇಷ್ಟು ಹಣ ಆಗುತ್ತದೆ, ಅದೇ ಫಾಸ್ಟ್ ಟ್ಯಾಗ್ ಇಲ್ಲವೆಂದರೆ ಎಲ್ಲಾ ದರಗಳು ದುಪ್ಪಟ್ಟು ಆಗುತ್ತದೆ. ಒಂದು ದಿನಕ್ಕೆ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರಲು 235 ರೂ. ನಿಗದಿ ಮಾಡಲಾಗಿದೆ ಎಂದು ಹೇಳಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಈಗ ದುಬಾರಿ ಶುಲ್ಕ ವಸೂಲಿ ಮಾಡುತ್ತಾ ಹಗಲುದರೋಡೆಗೆ ಇಳಿದಿದೆ. ಇದರಿಂದ ಮೈಸೂರು–ಬೆಂಗಳೂರು ನಡುವಿನ ಟ್ಯಾಕ್ಸಿಗಳ ಬಾಡಿಗೆ ಕೂಡ ದುಬಾರಿಯಾಗಿದೆ.

ಈ ಮೊದಲು ಮೈಸೂರು ಬೆಂಗಳೂರಿಗೆ ಹೋಗಿ ಬರಲು ಕನಿಷ್ಠ 1 ಕಿಲೋ ಮೀಟರ್‌ಗೆ 10 ರೂ.ನಂತೆ 385 ಕಿಲೋ ಮೀಟರ್‌ಗೆ 3,850 ರೂ. ದರವಿತ್ತು. ಆದರೆ ಈಗ ಟೋಲ್ ಸಂಗ್ರಹ ಮಾಡುತ್ತಿರುವ ಕಾರಣ 1 ಕಿಲೋಮೀಟರ್‌ಗೆ 10ರಿಂದ 12 ರೂ. ಟ್ಯಾಕ್ಸಿ ಬಾಡಿಗೆ ಹೆಚ್ಚಳ ಮಾಡಲಾಗಿದೆ. 1 ದಿನಕ್ಕೆ ಕನಿಷ್ಠ 385 ಕಿಲೋ ಮೀಟರ್‌ಗೆ 4620 ರೂ. ದರ ಆಗಲಿದೆ. ಜೊತೆಗೆ 485 ರೂ. ಟೋಲ್ ಶುಲ್ಕವನ್ನು ಪ್ರಯಾಣಿಕನೇ ಭರಿಸಬೇಕು. ಇದರಿಂದ ಈಗ ಟೋಲ್ ಸಂಗ್ರಹ ಸೇರಿದಂತೆ ಟ್ಯಾಕ್ಸಿಗೆ ಒಂದು ದಿನಕ್ಕೆ 5105 ರೂ. ಆಗಲಿದೆ. ಅಪಘಾತ ತಡೆಗಟ್ಟುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಜೊತೆಗೆ ಎಕ್ಸ್‌ಪ್ರೆಸ್ ವೇ ಮಧ್ಯೆ ಪೆಟ್ರೋಲ್ ಬಂಕ್, ವಿಶ್ರಾಂತಿ ಕೊಠಡಿ, ಶೌಚಾಲಯ ಸೇರಿದಂತೆ ಯಾವುದೇ ಸೌಲಭ್ಯವಿಲ್ಲ. ವಾಹನಗಳು ಕೆಟ್ಟು ನಿಂತರೆ ಟೋಯಿಂಗ್ ವ್ಯವಸ್ಥೆ ಕೂಡ ಇಲ್ಲ. ಆದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದುಬಾರಿ ಶುಲ್ಕ ವಸೂಲಿಗಿಳಿದಿದೆ. ಅಪಘಾತ ತಡೆಗಟ್ಟುವ ಹಲವು ಕ್ರಮ, ಸೂಕ್ತ ಸೌಲಭ್ಯ ಕಲ್ಪಿಸದೆ ಟೋಲ್ ಸಂಗ್ರಹ ಮಾಡಬಾರದೆಂದು ಸಚಿವರು, ಶಾಸಕರು ಆಗ್ರಹ ಮಾಡುತ್ತಿದ್ದರೂ ಯಾರ ಮಾತಿಗೂ ಕವಡೆ ಕಾಸಿನ ಕಿಮ್ಮತ್ತು ಇಲ್ಲ. ನಾವು ಯಾರಿಗೂ ಕೇರ್ ಮಾಡುವುದಿಲ್ಲ ಎಂದರು.

ತಮ್ಮ ಬದುಕಿನ ಪುಟಗಳ ತೆರೆದಿಟ್ಟ 'ಥಟ್ ಅಂತ ಹೇಳಿ' ರಸಪ್ರಶ್ನೆ ಕಾರ್ಯಕ್ರಮ ಖ್ಯಾತಿಯ ಡಾ. ನಾ. ಸೋಮೇಶ್ವರ



ಮೈಸೂರು, ಜು.3(ಎಸ್‌ಬಿಡಿ)– 'ಥಟ್ ಅಂತ ಹೇಳಿ' ರಸಪ್ರಶ್ನೆ ಕಾರ್ಯಕ್ರಮ ಖ್ಯಾತಿಯ ಡಾ.ನಾ.ಸೋಮೇಶ್ವರ ಅವರು ತಮ್ಮ ಬದುಕಿನ ಪುಟಗಳನ್ನು ಮೈಸೂರು ಸಾಹಿತ್ಯೋತ್ಸವದಲ್ಲಿ ಪ್ರೇಕ್ಷಕರ ಮುಂದೆ ತೆರೆದಿಟ್ಟರು.

ಗಾರ್ಡೇನಿಯಾ ವೇದಿಕೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ವಿಜ್ಞಾನಿ, ಲೇಖಕ ಕೊಳ್ಳೆಗಾಲ ಶರ್ಮಾ ಹಾಗೂ ಪ್ರೇಕ್ಷಕರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ತಮ್ಮ ಬಾಲ್ಯ, ಓದು, ವಿಜ್ಞಾನ ಸಾಹಿತ್ಯದ ಮೇಲಿನ ಆಸಕ್ತಿ ಇನ್ನಿತರ ವಿಚಾರಗಳನ್ನು ಮುಕ್ತವಾಗಿ ತಿಳಿಸಿದರು. ವಿಜ್ಞಾನದ ಬಗ್ಗೆ ಆಸಕ್ತಿ ಮೂಡಲು ಎರಡು ಪ್ರಮುಖ ಕಾರಣಗಳಿವೆ. ಎದುರು ಮನೆ ಗೆಳೆಯ ಪುರುಷೋತ್ತಮನ ತಂದೆ ಬೀರು ತುಂಬಾ ಪುಸ್ತಕ ಇಟ್ಟಿದ್ದರು. ಜೋರು ಮಳೆಯಲ್ಲಿ ಹೆಂಚು ಸೋರಿ ನೆನೆದಿದ್ದ ಪುಸ್ತಕಗಳನ್ನು ಬಿಸಿಲಲ್ಲಿಟ್ಟಿದರು. ಅವುಗಳ ಮೇಲೆ ಕಣ್ಣಾಯಿಸಿದಾಗ ಮೇಡಂ ಕ್ಯೂರಿ ಹಾಗೂ ಥಾಮಸ್ ಆಳ್ವ ಎಡಿಸನ್ ಅವರ ಆತ್ಮಚರಿತ್ರೆ ಪುಸ್ತಕಗಳು ಆಕರ್ಷಿಸಿದವು. ಹೇಗೋ ಅವುಗಳನ್ನು ಸಂಪಾದಿಸಿ ಓದಿದೆ. ಆ ಇಬ್ಬರು ಅತ್ಯಂತ ಬಡವು, ವಿಜ್ಞಾನದ ಬಗ್ಗೆ ಅತೀವ ಕುತೂಹಲವಿದ್ದವರು. ನಿರಂತರ ಕಷ್ಟ ಎದುರಿಸಿ ಸಾಧಿಸಿದವರು. ಈ ಇಬ್ಬರು ಸಾಧಕರನ್ನು ಆದರ್ಶವಾಗಿ ಇಟ್ಟುಕೊಂಡು ಈವತ್ತಿನ ವರೆಗೂ ನಡೆದಿದ್ದೇನೆ ಎಂದರು.

ನಮ್ಮ ತಾಯಿ, ನನ್ನ ತಂದೆಗೆ 2ನೇ ಹೆಂಡತಿ. ತಾಯಿ ಎದೆನೋವು ಎಂದಾಗ ಯಾರದೋ ಮಾತು ಕೇಳಿ ಪವಾಡ ಪುರುಷರೊಬ್ಬರ ಆಶ್ರಮದಲ್ಲಿ ಮೂರು ದಿನ ಇದ್ದೆವು. ಅವರು ನೀಡಿದ ಬೂದಿಯಿಂದ ಸಮಸ್ಯೆ ಉಲ್ಬಣವಾಯಿತು. ಆಗ ಯಾರೋ ಹೇಳಿದ್ದು ಸರ್ವಶ್ರೇಷ್ಠ ಎಂದು ಭಾವಿಸದೆ ಪ್ರಶ್ನೆ ಕೇಳಬೇಕು ಎನ್ನಿಸಿತು. ವ್ಯವಸ್ಥಿತವಾಗಿ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡುವ ಸಾಮರ್ಥ್ಯವಿರುವ ವಿಜ್ಞಾನ ಆಕರ್ಷಿಸಿತು ಎಂದು ಹೇಳಿದರು.

ಕನ್ನಡದಲ್ಲಿ 60 ಪುಸ್ತಕ ಬರೆದಿದ್ದೀಯಾ, ಯಾರು ಗುರುತಿಸುತ್ತಾರೆ. ಅದೇ ಇಂಗ್ಲಿಷ್‌ನಲ್ಲಿ ಬರೆದಿದ್ದರೆ ಹಣ, ಕೀರ್ತಿ ಜೊತೆಗೆ ಜಗತ್ತಿನೆಲ್ಲೆಡೆ ಪ್ರಚಾರವಾಗುತ್ತಿತ್ತು ಎಂದು ಹಲವರು ಹೇಳಿದರು. ಆದರೆ ಇಂಗ್ಲಿಷ್‌ನಲ್ಲಿ ಸಿಗುವಷ್ಟು ಮಾಹಿತಿ ಕನ್ನಡದಲ್ಲಿ ಸಿಗುವುದಿಲ್ಲ. ಅದರಲ್ಲೂ ಆರೋಗ್ಯದ ಸೂಕ್ಷ್ಮ ವಿಚಾರಗಳಿಗೆ ನಿಖರ ಮಾಹಿತಿ ಇಂದಿಗೂ ಲಭ್ಯವಿಲ್ಲ. ಶೇ.90ರಷ್ಟು ಹಸಿ ಸುಳ್ಳು ಹರಿಬಿಡಲಾಗುತ್ತದೆ. ಇಂತಹ ಪರಿಸ್ಥಿತಿ ಇರುವಾಗ ಮೊದಲು ನಮ್ಮ ಮನೆಗೆ ದುಡಿಯಬೇಕು ಎಂದು ನನ್ನ ಹೃದಯದ ಭಾಷೆ ಕನ್ನಡದಲ್ಲಿ ಬರೆಯಲು ಶುರು ಮಾಡಿದೆ ಎಂದರು.

ಎಸ್‌ಎಸ್‌ಎಲ್‌ಸಿ ಓದುವ ವೇಳೆಗೆ ನಾನು ಕತೆ, ಕಾದಂಬರಿ, ಲೇಖನ, ಕವನ, 16 ನಾಟಕ ಬರೆದಿದ್ದೆ. ಎಲ್ಲವನ್ನೂ ಬಿಟ್ಟು, ವಿಜ್ಞಾನದ ಕೆಲಸ ಮಾಡಬೇಕೆಂಬ ಸ್ಪಷ್ಟ ನಿರ್ಧಾರ ಮಾಡಿದೆ. ಅಂತಿಮ ಎಂಬಿಬಿಎಸ್ ಓದುವಾಗ ತಾಯಿಗೆ ಕ್ಯಾನ್ಸರ್ ಇದೆ ಎಂದು ಗೊತ್ತಾಯಿತು. ಹಾಗಾಗಿ ಉನ್ನತ ಶಿಕ್ಷಣದ ಹುಮ್ಮಸ್ಸು ಕುಗ್ಗಿತ್ತು. ತಾಯಿಯ ಆರೋಗ್ಯ ಸ್ಥಿತಿ ಬಿಗಡಾಯಿಸಿದಾಗ ಅನಿವಾರ್ಯವಾಗಿ ನಾನು ವಿವಾಹವಾಗಬೇಕಾಯಿತು. ಕಷ್ಟಪಟ್ಟು ಹಣ ಹೊಂದಿಸಿ ಕಿಮೋತೆರಪಿ ಮಾಡಿಸಿದರೂ ಅವರು ಬದುಕುಳಿಯಲಿಲ್ಲ. ಅದರಿಂದ ತೀವ್ರ ಆಘಾತ ಉಂಟಾಯಿತು. ಸರ್ವಸ್ವವೇ ಆಗಿದ್ದ ತಾಯಿಯನ್ನು ಉಳಿಸಿಕೊಳ್ಳಲಾಗಲಿಲ್ಲ ಎಂಬ ನೋವು ಈಗಲೂ ಕಾಡುತ್ತದೆ ಎಂದು ಭಾವುಕರಾಗಿ ನುಡಿದರು.

ಬರಹ ಕ್ಷೇತ್ರಕ್ಕೆ ಬರಲು ತಾಯಿ ಸಾವು ಪ್ರಮುಖ ಕಾರಣ. ಇವರ ಸ್ಥಿತಿ ಬೇರೊಬ್ಬರಿಗೆ ಬರಬಾರದು ಎಂಬ ಉದ್ದೇಶದಿಂದ ವಿಜ್ಞಾನ, ಆರೋಗ್ಯದ ಕಾಳಜಿ ಮಾರ್ಗಕ್ಕೆ ಬಂದೆ. ವಾಸ್ತವವಾಗಿ ವೈದ್ಯನಾಗಿ ರೋಗಿಯನ್ನು ಪರೀಕ್ಷಿಸಿ ಔಷಧಿ ಬರೆದುಕೊಡುವ ಆಸಕ್ತಿ ನನಗಿಲ್ಲ. ಸಂಶೋಧನಾ ಕ್ಷೇತ್ರದ ಬಗ್ಗೆ ಅತೀವ ಆಸಕ್ತಿ. ದೇಹ ಮತ್ತು ಮನಸ್ಸುಗಳ ನಡುವೆ ಇರುವ ಸಂಕೀರ್ಣ ಸಂಬಂಧಗಳ ತಿಳಿಯಬೇಕೆನ್ನುವುದು ನನ್ನ ಅದಮ್ಯ ಆಸೆ. ಆದರೆ ಸಂಶೋಧನೆ ಹಾದಿಯಲ್ಲಿ ಮುಂದುವರೆಯಲು ಸಾಧ್ಯವಾಗಲಿಲ್ಲ. ಹಾಗಾಗಿ ಒಂದು ಸಂಸ್ಥೆಯಲ್ಲಿ ನಿಷ್ಠವಾಗಿ ಕೆಲಸ ಮಾಡಿ, ಉಳಿದ ಸಮಯವನ್ನು ಸಾಹಿತ್ಯದಲ್ಲಿ ತೊಡಗಿಸಿದೆ ಎಂದರು.

ನಮಗೆ ಓದುವ ಸರಿಯಾದ ಕ್ರಮ ಹಾಗೂ ವೈಜ್ಞಾನಿಕ ವಿಧಾನದ ಬಗ್ಗೆ ಯಾರೂ ಹೇಳಿಕೊಡಲಿಲ್ಲ. ಹಾಗಾಗಿ ಕಷ್ಟಪಟ್ಟು ಓದಿದೆವು. ಸ್ನೇಹಿತ ಕಲಬುರ್ಗಿಯ ಹಿರೇಮಠ್ ಓದುವ ವಿಧಾನವನ್ನು ಮಕ್ಕಳಿಗೆ ಕಲಿಸುವ ಆಶಯವನ್ನು ವ್ಯಕ್ತಪಡಿಸಿದಾಗ ತಿಂಗಳಲ್ಲಿ ಒಂದು ಶನಿವಾರ ಹಾಗೂ ಭಾನುವಾರ ಕಲಬುರ್ಗಿಗೆ ಬರುವುದಾಗಿ ತಿಳಿಸಿದೆ. ದಿನಕ್ಕೆ 3 ಶಾಲೆಗಳಲ್ಲಿ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಿದ್ದೆ. ಇದು ಒಬ್ಬರಿಂದೊಬ್ಬರಿಗೆ ತಿಳಿದು ಹಲವರು ತಮ್ಮ ಶಾಲೆಗಳಿಗೆ ಆಹ್ವಾನಿಸಿದರು. 'ಓದಿದ್ದನ್ನು ನಾವು ಹೇಗೆ ಮರೆಯುತ್ತೇವೆ' ಪುಸ್ತಕವನ್ನೂ ಬರೆದೆ. ಈ ಕಾರ್ಯ 15 ವರ್ಷದಿಂದ ನಡೆದು ಬಂದಿದೆ ಎಂದು ತಿಳಿಸಿದರು. 'ಥಟ್ ಅಂತ ಹೇಳಿ' ರಸಪ್ರಶ್ನೆ ಕಾರ್ಯಕ್ರಮ ಭಾಷೆ, ಸಂಸ್ಕೃತಿ ಬಗ್ಗೆ 4,800 ಸಂಚಿಕೆ ಪ್ರಸಾರವಾಗಿರುವುದು ದಾಖಲೆಯಾಗಿದೆ. ಇದರ ಹಿಂದೆ ಸೋಮೇಶ್ವರ ಅವರ ಪರಿಶ್ರಮ, ಶ್ರದ್ಧೆ, ಬದ್ಧತೆ ಅಡಗಿದೆ ಎಂದು ಕೊಳ್ಳೇಗಾಲ ಶರ್ಮಾ ಪ್ರೇಕ್ಷಕರಿಗೆ ತಿಳಿಸಿದರು.

ಮುಡುಕುತೊರೆ ಶ್ರೀ ಭ್ರಮರಾಂಬ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ

ದೇವಾಲಯ ಪುನರ್ ನಿರ್ಮಾಣಕ್ಕೆ ಸರ್ಕಾರದಿಂದ ಶೀಘ್ರ ಅನುದಾನ



- ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಬದ್ಧ
- ಜಿಲ್ಲಾ ಉಸ್ತುವಾರಿ ಸಚಿವ ಡಾ. ಮಹದೇವಪ್ಪ ಭರವಸೆ
- ಮೂಲ ವಿನ್ಯಾಸದಲ್ಲೇ ದೇವಾಲಯ ನಿರ್ಮಿಸುವಂತೆ ಸಲಹೆ


ತಿ.ನರಸೀಪುರ, ಜು.3– ಧಾರ್ಮಿಕ ಪುಣ್ಯಕ್ಷೇತ್ರ ಮುಡುಕುತೊರೆಯಲ್ಲಿ ನನೆಗುದಿಗೆ ಬಿದ್ದಿರುವ ಲಕ್ಷಾಂತರ ಭಕ್ತರ ಆರಾಧ್ಯ ದೈವ ಶ್ರೀ ಭ್ರಮರಾಂಬ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರದಿಂದ ಅಗತ್ಯ ಅನುದಾನ ಮಂಜೂರು ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಭರವಸೆ ನೀಡಿದರು.

ತಾಲೂಕಿನ ಮುಡುಕುತೊರೆಗೆ ಭೇಟಿ ನೀಡಿ, ದೇವಾಲಯ ನಿರ್ಮಾಣ ಕಾಮಗಾರಿ ಪರಿಶೀಲಿಸಿ, ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಂದ ಮಾಹಿತಿ ಪಡೆದು ಮಾತನಾಡಿದ ಅವರು, ಜನರ ಧಾರ್ಮಿಕ ಆಚರಣೆ ಮೇಲೆ ಅಪಾರ ಗೌರವವಿರುವುದರಿಂದ ಶ್ರೀ ಭ್ರಮರಾಂಬ ಶ್ರೀ ಮಲ್ಲಿಕಾರ್ಜುನಸ್ವಾಮಿಯವರ ನೂತನ ದೇವಾಲಯ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ, ಮಾಹಿತಿ ಪಡೆದು ದೇವಾಲಯ ನಿರ್ಮಾಣಕ್ಕೆ ಸರ್ಕಾರದಿಂದ ನೆರವು ನೀಡಲಾಗುವುದು ಎಂದರು.

ದೇವಾಲಯ ವಿನ್ಯಾಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಮಹದೇವಪ್ಪ, ಮೂಲ ಸ್ವರೂಪ, ಹಿಂದಿನ ವಿನ್ಯಾಸದ ಮಾದರಿಯಲ್ಲೇ ಮುಡುಕುತೊರೆ ದೇವಾಲಯ ನಿರ್ಮಾಣ ಮಾಡಬೇಕು. ಇಂತಹ ಧಾರ್ಮಿಕ ಪುಣ್ಯಕ್ಷೇತ್ರದಲ್ಲಿ ಮಂದಗತಿಯಲ್ಲಿ ಸಾಗುತ್ತಿರುವ ಶ್ರೀಭ್ರಮರಾಂಬ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಮಹದೇವಪ್ಪನೇ ಶಾಸಕನಾಗಿ, ಸಚಿವನಾಗಿ ಬಂದಿರುವುದು ಹೆಮ್ಮೆಯ ಸಂಗತಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮುಜರಾಯಿ ಸಚಿವರ ಜೊತೆ ಚರ್ಚಿಸಿ ಕಾಮಗಾರಿ ಯೋಜನಾ ವೆಚ್ಚದ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಿಸುತ್ತೇನೆ ಎಂಬ ಭರವಸೆ ನೀಡಿದರು.

ಗುತ್ತಿಗೆದಾರ ರಾಜಶೇಖರ್ ಹೆಬ್ಬಾರ್ ಮಾತನಾಡಿ, ಮುಡುಕುತೊರೆಯಲ್ಲಿ ಗಂಗರ ಕಾಲದಲ್ಲಿ ನಿರ್ಮಾಣಗೊಂಡಿರುವ ಪುರಾತನ ಪ್ರಸಿದ್ಧ ಶ್ರೀಭ್ರಮರಾಂಬ ಸಮೇತ ಶ್ರೀಮಲ್ಲಿಕಾರ್ಜುನಸ್ವಾಮಿ ದೇವಾಲಯವನ್ನು ಚಾಲುಕ್ಯರು ಮತ್ತು ಚೋಳರು ಅವರವರ ಶೈಲಿಯಲ್ಲಿ ಅಭಿವೃದ್ಧಿಪಡಿಸಿಕೊಂಡು ಬಂದಿದ್ದಾರೆ. ಸರ್ಕಾರದಿಂದ ಯೋಜನಾ ವೆಚ್ಚದ ಅನುದಾನ ಬಿಡುಗಡೆಯಾಗದಿರುವ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿದೆ ಎಂದರು.

ದೇವಾಲಯ ನಿರ್ಮಾಣಕ್ಕೆ ಸುಮಾರು 40 ರಿಂದ 50 ಕೋಟಿ ರೂ. ಅಗತ್ಯವಿದೆ. ಮಲ್ಲಿಕಾರ್ಜುನಸ್ವಾಮಿ ಮತ್ತು ಭ್ರಮರಾಂಬ ಅಮ್ಮನವರ ಗುಡಿ ನಿರ್ಮಾಣಕ್ಕೆ ತಲಾ 8 ಕೋಟಿಯಂತೆ 16 ಕೋಟಿಯನ್ನು ಸರ್ಕಾರ ಮಂಜೂರು ಮಾಡಿತ್ತು. ದೇವಾಲಯದ 2.5 ಕೋಟಿ ಹಣವನ್ನು ಕಾಮಗಾರಿಗೆ ಬಳಸಿಕೊಳ್ಳಲಾಗಿದೆ. ಮುಂದುವರೆದ ಕಾಮಗಾರಿಗೆ ಸರ್ಕಾರದಿಂದ ಅನುದಾನ ಮಂಜೂರಾದರೆ ಸುಂದರವಾದ ದೇವಾಲಯ ಕಂಗೊಳಿಸಲಿದೆ.
- ಶಬರೀಶ್, ಲೋಕೋಪಯೋಗಿ ಇಲಾಖೆ ಸಹಾಯಕ ಇಂಜಿನಿಯರ್.



ಇದೇ ವೇಳೆ ಸಚಿವ ಡಾ.ಮಹದೇವಪ್ಪ ಶ್ರೀಮಲ್ಲಿಕಾರ್ಜುನಸ್ವಾಮಿ ಹಾಗೂ ಶ್ರೀ ಭ್ರಮರಾಂಬ ಅಮ್ಮನವರ ದರ್ಶನ ಪಡೆದರು. ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಿ.ಎನ್.ಜುಂಡಸ್ವಾಮಿ, ಅಭಿವೃದ್ಧಿ ಸಮಿತಿ ಸದಸ್ಯರಾದ ಪಿ.ಎಂ. ಪರಶಿವಮೂರ್ತಿ, ಕೆ.ನಾಗಮ್ಮ, ಕಾರ್ಯನಿರ್ವಾಹಕ ಅಧಿಕಾರಿ ವೆಂಕಟೇಶ್ ಪ್ರಸಾದ್, ನಿವೃತ್ತ ಇಒ ರಾಜಶೇಖರ್, ಸಹಾಯಕ ಎಂ.ಎಸ್.ವಿಕಾಸ್, ಅರ್ಚಕರಾದ ಎಂ.ಎನ್.ವಿಶ್ವನಾಥ್, ಎಂ.ಡಿ. ಲೋಕೇಶ್, ಗ್ರಾಪಂ ಅಧ್ಯಕ್ಷ ನಾಗರಾಜು, ಸದಸ್ಯ ಸುಂದರನಾಯಕ, ಅನಿಲ್ ಬೋಸ್, ತಾಪಂ ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಸ್ವಾಮಿ, ಮಾಜಿ ಸದಸ್ಯ ಕುಕ್ಕೂರು ಗಣೇಶ್, ನಿವೃತ್ತ ಮುಖ್ಯ ಇಂಜಿನಿಯರ್ ಎನ್.ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು, ಲೋಕೋಪಯೋಗಿ ಎಇಇ ಸತೀಶ್ ಚಂದ್ರ, ಸಹಾಯಕ ಇಂಜಿನಿಯರ್‌ಗಳಾದ ಶಿವಸ್ವಾಮಿ, ಮೋಹನ್, ಮುಖಂಡರಾದ ಮೇಗಡ ಹಳ್ಳಿ ಶಿವಮೂರ್ತಿ, ಮಲ್ಲೇಶ್, ಕುಕ್ಕೂರು ಶಂಬುಲಿಂಗ, ಎಂ.ಎಸ್.ಸಿದ್ದಲಿಂಗಸ್ವಾಮಿ, ಪೂರಿಗಾಲಿ ಅಕ್ಕಿ ಬಸವ ಇನ್ನಿತರರಿದ್ದರು.

ಟಾಟಾ ಏಸ್ ಡಿಕ್ಕಿ: ಪಾದಚಾರಿ ಸಾವು



ಹುಣಸೂರು, ಜು.3– ಟಾಟಾ ಏಸ್ ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ಪಾದಚಾರಿ ಸಾವನ್ನಪ್ಪಿರುವ ಘಟನೆ ನಗರದ ಹೊಸ ಬಸ್ ನಿಲ್ದಾಣದ ಬಳಿ ಸೋಮವಾರ ಸಂಜೆ ಸಂಭವಿಸಿದೆ.

ತಾಲೂಕಿನ ಮಧುಗಿರಿಕೊಪ್ಪಲು ಗ್ರಾಮದ ನಿವಾಸಿ ಪುಟ್ಟಸ್ವಾಮಿಗೌಡ(80) ಸಾವನ್ನಪ್ಪಿದವರು. ಈತ ಇಂದು ಮಧ್ಯಾಹ್ನ ಸ್ವಗ್ರಾಮದಿಂದ ಹುಣಸೂರಿಗೆ ಆಗಮಿಸಿದ್ದು, ಬಸ್ ನಿಲ್ದಾಣದಲ್ಲಿರುವ ಖಾಸಗಿ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆದು ಪಕ್ಕದಲ್ಲೇ ಇದ್ದ ಮೆಡಿಕಲ್ ಸ್ಟೋರ್‌ನಲ್ಲಿ ಔಷಧ ಖರೀದಿಸಿ ರಸ್ತೆ ದಾಟಿ ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದ ವೇಳೆ ಕಲ್ಪತರು ಸರ್ಕಲ್ ಕಡೆಯಿಂದ ಬಂದ ಟಾಟಾ ಏಸ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಪುಟ್ಟಸ್ವಾಮಿಗೌಡರಿಗೆ ನಗರದ ವಿಕ್ರಂ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಧರ್ಮೇಂದ್ರ ಪರಿಶೀಲನೆ ನಡೆಸಿದರು. ಬಳಿಕ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆ ಬಳಿಕ ಟಾಟಾ ಏಸ್ ವಾಹನ ಚಾಲಕ ಸ್ಥಳದಿಂದ ಪರಾರಿಯಾಗಿದ್ದು, ವಾಹನ ವಶಕ್ಕೆ ಪಡೆದಿರುವ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಂಜನಗೂಡಿನಲ್ಲಿ ಗುರು ಪೂರ್ಣಿಮೆ ಹಿನ್ನೆಲೆ

ಶ್ರೀಕಂಠೇಶ್ವರನ ದರ್ಶನಕ್ಕೆ ಹರಿದು ಬಂದ ಭಕ್ತಸಾಗರ

ನಂಜನಗೂಡು, ಜು.3– ಗುರು ಪೂರ್ಣಿಮೆ ಹಿನ್ನೆಲೆಯಲ್ಲಿ ದಕ್ಷಿಣಕಾಶಿ ಶ್ರೀಕಂಠೇಶ್ವರ ದೇವಾಲಯಕ್ಕೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದು ಪುನೀತರಾದರು.

ಭಾನುವಾರ ಸಂಜೆಯಿಂದಲೇ ಆಗಮಿಸಿದ ಭಕ್ತರು ಕಪಿಲಾ ನದಿಯಲ್ಲಿ ಮಿಂದು ಮುಂಜಾನೆ 4 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅಲ್ಲದೇ ತುಲಾಭಾರ ಸೇವೆ, ಉರುಳು ಸೇವೆ, ಈಡುಗಾಯಿ ಸೇವೆ, ದೇವಿಗೆ ಕುಂಕುಮಾರ್ಚನೆ, ಶ್ರೀಕಂಠೇಶ್ವರ ಸ್ವಾಮಿಗೆ ಬೆಳ್ಳಿ ಅಂಗಾಂಗಳ ಹರಕೆಯನ್ನು ಹುಂಡಿಗೆ ಹಾಕಿ ಶ್ರದ್ಧಾ–ಭಕ್ತಿಯಿಂದ ಸೇವೆ ಸಲ್ಲಿಸಿದರು.



ವಿಶೇಷವಾಗಿ ಶ್ರೀಕಂಠೇಶ್ವರಸ್ವಾಮಿ ಅವರಿಗೆ ಚಿನ್ನದ ಕೊಳಗ ತೊಡಿಸಿ, ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು ಗುರು ಪೂರ್ಣಿಮೆ ಅಂಗವಾಗಿ ಶ್ರೀ ಶ್ರೀಕಂಠೇಶ್ವರಸ್ವಾಮಿಗೆ ಪಂಚ ತೀರ್ಥಗಳ ಅಭಿಷೇಕ, ಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಶಾಲಾನ್ನ ಅರ್ಪಣೆ, ಕಲ್ಲು ಸಕ್ಕರೆ ಪೂಜೆಗಳನ್ನು ಸಾಂಗೋಪವಾಗಿ ನೆರವೇರಿಸಲಾಯಿತು. ನಂತರ ಮಹಾಮಂಗಳಾರತಿ ಮಾಡಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ದೇವಾಲಯದ ದಾಸೋಹ ಭವನದಲ್ಲಿ ಹುಣ್ಣಿಮೆ ಅಂಗವಾಗಿ ಭಕ್ತರಿಗೆ ಪಾಯಸ, ಅನ್ನ, ಸಾಂಬರ್, ಪಲ್ಯ ಒಳಗೊಂಡ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಹಡಪದ ಅಪ್ಪಣ್ಣನವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ



ಗ್ರೇಡ್–2 ತಹಸೀಲ್ದಾರ್ ಭೈರಯ್ಯ

ನಂಜನಗೂಡು, ಜು.3– ಶಿವಶರಣ ಹಡಪದ ಅಪ್ಪಣ್ಣನವರು 12ನೇ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಸಾಮಾಜಿಕ ಅಸಮಾನತೆ, ಮೌಢ್ಯತೆ, ಮೂಢನಂಬಿಕೆಗಳನ್ನು ಹೋಗಲಾಡಿಸಲು ಶ್ರಮಿಸಿದವರು ಎಂದು ಗ್ರೇಡ್–2 ತಹಸೀಲ್ದಾರ್ ಭೈರಯ್ಯ ತಿಳಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯಿಂದ ನಡೆದ ಹಡಪದ ಅಪ್ಪಣ್ಣನವರ 889ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣನವರು ತಮ್ಮ ಅನುಭವ ಮಂಟಪದ ಮೂಲಕ ಎಲ್ಲಾ ವರ್ಗದ ಶರಣರಿಗೂ ಅವಕಾಶ ನೀಡಿ ಇಡೀ ವಿಶ್ವವೇ ನೋಡುವಂತೆ ಸಾಮಾಜಿಕ ಕ್ರಾಂತಿಗೆ ಮುಂದಾದರು. ಎಲ್ಲಾ ಶರಣರು ಸಹ ತಮ್ಮ ವಚನ ಸಾಹಿತ್ಯದ ಮೂಲಕ ಜನರಿಗೆ ಅರಿವು ಮೂಡಿಸಿ ಸಾಮಾಜಿಕ ಅಸಮಾನತೆ ತೊಡೆದು ಹಾಕಲು ಶ್ರಮಿಸಿದರು. ಆದರೆ 21ನೇ ಕಾಲಘಟ್ಟದಲ್ಲೂ ಸಹ ಸಮಾಜದಲ್ಲಿ ಜಾತೀಯತೆ, ಮೌಢ್ಯತೆ ಬೇರೂರಿರುವುದು ದುರ್ದೈವದ ಸಂಗತಿ. ಸಾಮಾಜಿಕ ಕ್ರಾಂತಿಗೆ ಮುಂದಾದ ಶಿವಶರಣರನ್ನು ಕೇವಲ ಒಂದೇ ಜಾತಿಗೆ ಸೀಮಿತಗೊಳಿಸುವುದು ಸರಿಯಲ್ಲ. ಎಲ್ಲಾ ಜಾತಿ ಜನಾಂಗಗಳು ಕೂಡ ಒಂದಾಗಿ ಇಂತಹ ಮಹನೀಯರ ಜಯಂತಿ ಆಚರಿಸುವಂತಾಗಬೇಕು. ಅಲ್ಲದೇ ಎಲ್ಲರೂ ಶರಣರು ಹಾಕಿಕೊಟ್ಟ ದಾರಿಯಲ್ಲಿ ಸಾಗುವ ಮೂಲಕ ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದರು.

ತಾಲೂಕು ಕೇಶಾಲಂಕಾರಿ ಸಂಘದ ಅಧ್ಯಕ್ಷ ಪುಟ್ಟರಾಜು ಮಾತನಾಡಿ, ಸವಿತಾ ಸಮಾಜ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಬಹಳ ಹಿಂದುಳಿದಿದೆ. ಇದಕ್ಕೆ ಕಾರಣ ಸಮಾಜದಲ್ಲಿ ಒಗ್ಗಟ್ಟಿನ ಕೊರತೆ ಇರುವುದು. ಶೋಷಿತ ಸಮಾಜಗಳು ಸಮಾಜದ ಮುಖ್ಯವಾಹಿನಿಗೆ ಬರಲು ಶಿಕ್ಷಣ ಪ್ರಮುಖ ಅಸ್ತ್ರ ಆದ್ದರಿಂದ ಸಮಾಜದ ಮುಖಂಡರು ಕಡ್ಡಾಯವಾಗಿ ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದರು. ಕಾರ್ಯಕ್ರಮದಲ್ಲಿ ಶಿರಸ್ತೇದಾರ್ ಶ್ರೀನಾಥ್, ಮಹೇಶ್, ನಯನಜ ಕ್ಷತ್ರಿಯ ಮಂಡಳಿ ತಾಲೂಕು ಅಧ್ಯಕ್ಷ ರಾಚಪ್ಪ, ವೇಣುಗೋಪಾಲ್, ಮಧು, ಮಹೇಶ್, ಮುಖಂಡರಾದ ಕೆಂಪರಾಜು, ಡಿ.ಮಹೇಶ್, ಸಿದ್ದರಾಜು, ಚೇತನ, ಬಸವಣ್ಣ, ಆರ್.ರವಿ, ಎನ್.ಮಹೇಶ್ ಸೇರಿದಂತೆ ಇತರರಿದ್ದರು.



ತಿ.ನರಸೀಪುರದ ಗ್ರಾಮ ವಿದ್ಯೋದಯ ಸಂಘದ ಅಧೀನದಲ್ಲಿ ನಡೆಯುತ್ತಿರುವ ಎಂ.ಸಿ.ಶಿವಾನಂದ ಶರ್ಮಾ ಸ್ಮಾರಕ ವಿದ್ಯೋದಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 2023–24ನೇ ಸಾಲಿನ ಶಾಲಾ ಮಂತ್ರಿ ಮಂಡಲ ಚುನಾವಣೆ ನಡೆಯಿತು. ಎಲ್ಲಾ ವಿದ್ಯಾರ್ಥಿಗಳು ಉತ್ಸಾಹದಿಂದ ಮತದಾನ ಮಾಡಿದರು. ಈ ವೇಳೆ ಶಿಕ್ಷಕಿಯರಾದ ಜ್ಯೋತಿ, ಪ್ರಮೀಳಾ ವಿದ್ಯಾರ್ಥಿಗಳಿಗೆ ಮತದಾನದ ಮಹತ್ವ ತಿಳಿಸಿಕೊಟ್ಟರು. ಈ ವೇಳೆ ಮುಖ್ಯಶಿಕ್ಷಕ ನಂದೀಶ್, ಸಹ ಶಿಕ್ಷಕಿಯರಾದ ಸುಲೋಚನಾ, ಆಶಾ, ನಂದನ, ರೇಖಾ, ತೇಜಸ್ವಿನಿ, ಸುಮಿತ್ರ, ನಾಗಮ್ಮ ಮತ್ತು ದೈಹಿಕ ಶಿಕ್ಷಕಿ ಶ್ರುತಿ ಉಪಸ್ಥಿತರಿದ್ದರು.

ಅನಾರೋಗ್ಯದಿಂದ ಪತಿ ಸಾವು; ದಿಗ್ಭ್ರಾಂತಳಾದ ಪತ್ನಿ ಆತ್ಮಹತ್ಯೆ

ಹುಣಸೂರು, ಜು. 3– ಅನಾರೋಗ್ಯದಿಂದ ಪತಿ ಸಾವನ್ನಪ್ಪಿದ್ದರಿಂದ ದಿಗ್ಭ್ರಾಂತಳಾಗಿ ಪತ್ನಿ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾದ ಮನಕಲಕುವ ಘಟನೆ ತಾಲೂಕಿನ ರತ್ನಪುರಿ ಸಮೀಪದ ಕೊಯಮತ್ತೂರು ಕಾಲೋನಿಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ದೊರೆ(55) ಅನಾರೋಗ್ಯದಿಂದ ಮೃತಪಟ್ಟವರಾಗಿದ್ದು, ಇವರ ಪತ್ನಿ ಸಾವಿತ್ರಿ(47) ಆತ್ಮಹತ್ಯೆಗೆ ಶರಣಾದವರು.



ವಿವರ: ಕೂಲಿ ಕಾರ್ಮಿಕನಾಗಿದ್ದ ದೊರೆ ಕಳೆದ 3 ತಿಂಗಳ ಹಿಂದೆ ಕೆಲಸದ ನಿಮಿತ್ತ ಕೆ.ಆರ್.ನಗರಕ್ಕೆ ಹೋಗಿದ್ದ ವೇಳೆ ಅಪಘಾತಕ್ಕೆ ಒಳಗಾಗಿ ತೀವ್ರವಾಗಿ ಗಾಯಗೊಂಡಿದ್ದರು. ಮೂಲತಃ ತಮಿಳುನಾಡಿನ ಕೊಯಮತ್ತೂರಿನವರಾದ ಇವರು ಅಲ್ಲಿಗೆ ತೆರಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪತಿಯ 3 ತಿಂಗಳ ಸುದೀರ್ಘ ಚಿಕಿತ್ಸೆಗಾಗಿ ಪತ್ನಿ ಸಾವಿತ್ರಿ ಐಡಿಎಫ್‌ಸಿ ಮತ್ತು ಇಕ್ವಿಟ್ಯಾಕ್ಸ್ ಬ್ಯಾಂಕ್‌ಗಳಲ್ಲಿ ಮಾತ್ರವಲ್ಲದೇ ವಿವಿಧ ಸಂಘಗಳಿಂದಲೂ ಸಾಲ ಮಾಡಿಕೊಂಡಿದ್ದರು.

ಕಳೆದ ವಾರವಷ್ಟೇ ಸಾವಿತ್ರಿಯವರು ಪತಿಯನ್ನು ಕೊಯಮತ್ತೂರು ಕಾಲೋನಿಗೆ ಕರೆತಂದು ಮನೆಯಲ್ಲೇ ಔಷಧೋಪಚಾರ ಮಾಡುತ್ತಿದ್ದರು. ಅನಾರೋಗ್ಯದಿಂದಾಗಿ ದೊರೆ ಯಾವುದೇ ಕೆಲಸಕ್ಕೆ ಹೋಗಲು ಸಾಧ್ಯವಾಗದೇ ಮಲಗಿದ್ದಲ್ಲೇ ಮಲಗಿದ್ದರು. ಸಾವಿತ್ರಿ ಕೂಲಿ ಕೆಲಸಕ್ಕೆ ಹೋಗುವ ಮುನ್ನ ಪತಿಗೆ ಊಟ ಮಾಡಿಸಿ, ಔಷಧಿ ನೀಡಿ ತೆರಳುತ್ತಿದ್ದರು. ಇಂದು ಮಧ್ಯಾಹ್ನ ಪತಿಗೆ ಊಟ ಕೊಡಲು ಸಾವಿತ್ರಿ ಮನೆಗೆ ಬಂದಾಗ ಪತಿ ದೊರೆ ಸಾವನ್ನಪ್ಪಿರುವುದು ಕಂಡುಬಂದಿದೆ. ಇದರಿಂದ ದಿಗ್ಭ್ರಾಂತಳಾದ ಸಾವಿತ್ರಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾಳೆ.

ಇಂದು ಸಂಜೆ ಮನೆಯ ಬಾಗಿಲು ತೆರೆದಿದ್ದರೂ ಸಾವಿತ್ರಿ ಹೊರಗೆ ಬರುತ್ತಿಲ್ಲವಲ್ಲ ಎಂದು ಅನುಮಾನದಿಂದ ಪಕ್ಕದ ಮನೆಯವರು ನೋಡಿದಾಗ ದಂಪತಿ ಸಾವನ್ನಪ್ಪಿರುವುದು ಕಂಡು ಬಂದಿದೆ. ವಿಷಯ ತಿಳಿಯುತ್ತಿದ್ದಂತೆಯೇ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಗ್ರಾಮಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಮದುವರೆಸಿದ್ದಾರೆ. ಮೃತ ದಂಪತಿಗೆ ಪುತ್ರ ಹಾಗೂ ಪುತ್ರಿ ಇದ್ದು, ಅವರಿಬ್ಬರಿಗೂ ಈ ದಂಪತಿ ಮದುವೆ ಮಾಡಿಸಿದ್ದಾರೆ.

ಐದು ಗ್ಯಾರಂಟಿಗಳನ್ನು ಜಾರಿಗೊಳಿಸಲು


ಅಭಿವೃದ್ಧಿ ಯೋಜನೆಗಳಿಗೆ ಅನುದಾನ ನೀಡದ ಸರ್ಕಾರ

ಶಾಸಕ ಜಿ.ಡಿ.ಹರೀಶ್‌ಗೌಡ ಆರೋಪ

ಹುಣಸೂರು, ಜು.3– ರಾಜ್ಯ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಲು ಅಭಿವೃದ್ಧಿ ಯೋಜನೆಗಳಿಗೆ ಅನುದಾನ ತಡೆ ಹಿಡಿದಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಆರೋಪಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ರೈತ ಸಂಘ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಚುನಾವಣೆ ವೇಳೆ ಜನರಿಗೆ ನೀಡಿದ ಭರವಸೆಯಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಲು ಗ್ರಾಪಂನಿಂದ ಹಿಡಿದು ಎಲ್ಲಾ ಇಲಾಖೆಗಳಲ್ಲಿ ನಡೆದಿರುವ ಕಾಮಗಾರಿಗಳ ಬಿಲ್ ತಡೆ ಹಿಡಿಯಲಾಗಿದೆ. ಅಲ್ಲದೇ ಸ್ವಪಕ್ಷದ ಶಾಸಕರಿಗೆ ಅಭಿವೃದ್ಧಿ ಕಾಮಗಾರಿಗಳಿಗೆ ಒತ್ತಡ ಹೇರದಂತೆ ಮನವಿ ಮಾಡಿದ್ದಾರೆ ಎಂದರು.

ಹುಣಸೂರು ಕ್ಷೇತ್ರದಲ್ಲಿ ಸಮಸ್ಯೆಗಳು ಅಗಾಧವಾಗಿದ್ದು, ಈ ಪೈಕಿ ಕೆಲ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನಗಳು ನಡೆದಿವೆ. ಶಾಸಕ ಜಿ.ಟಿ.ದೇವೇಗೌಡರ ಅವಧಿಯಲ್ಲಿ ಕ್ಷೇತ್ರಕ್ಕೆ ಕುಡಿಯುವ ನೀರು ತರಲಾಯಿತು. ಇನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್



ಅವಧಿಯಲ್ಲಿ ಕೆಲವು ಕೆರೆಗಳು ಅಭಿವೃದ್ಧಿಯಾಗಿದ್ದು, ಪೂರ್ಣ ಪ್ರಮಾಣದಲ್ಲಿ ಆಗಬೇಕಿದೆ ಎಂದರು.

ರೈತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ತಮ್ಮ ಕಚೇರಿಯಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ದಿನಾಂಕ ಮತ್ತು ವೇಳಾಪಟ್ಟಿಯನ್ನು ಪ್ರಕಟಿಸಬೇಕು. ತಹಸೀಲ್ದಾರ್ ಅಧಿಕಾರಿಗಳ ಜೊತೆಗೆ ಸಭೆ ನಡೆಸಿ ಮಂಜೂರಾಗಿರುವ ಸಾಗುವಳಿ ಪತ್ರವನ್ನು ರೈತರಿಗೆ ವಿತರಿಸುವಂತೆ ಸೂಚಿಸಲಾಗಿದೆ. ಖಾತೆ, ಪೋಡಿ ದುರಸ್ತಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ರೈತರ ಮನೆ ಬಾಗಿಲಿಗೆ ಅಧಿಕಾರಿಗಳು ತೆರಳಿ ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸಬೇಕು ಎಂದರು. ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷನಾದ ಬಳಿಕ 1 ಲಕ್ಷ ರೈತರಿಗೆ 16 ಸಾವಿರ ಕೋಟಿ ಸಾಲ ವಿತರಿಸಿದ್ದೇನೆ. ಎಂಸಿಡಿಸಿಸಿ ಬ್ಯಾಂಕ್ ಆರಂಭವಾಗಿ 62 ವರ್ಷ ಕಳೆದರೂ ಈ ಪ್ರಮಾಣದಲ್ಲಿ ಸಾಲ ವಿತರಿಸಿರಲಿಲ್ಲ. ಸಹಕಾರಿ ಸಂಘದ ಮೂಲಕ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಸೇರಿದಂತೆ ಹತ್ತು ಹಲವು ಆರ್ಥಿಕ ಶಕ್ತಿ ತುಂಬುವ ಕೆಲಸಗಳನ್ನು ನಿರಂತರವಾಗಿ ಮಾಡಿದ್ದೇನೆ ಎಂದರು.

ರೈತ ಸಂಘದ ಅಧ್ಯಕ್ಷ ಕುಮಾರ್ ಮಾತನಾಡಿದರು. ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಹಲವು ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದರು. ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಣ್ಣ, ಶಿವಣ್ಣ, ರಾಮೇಗೌಡ ಸೇರಿದಂತೆ ಇನ್ನಿತರರಿದ್ದರು.

ಹೆಡಿಯಾಲ ಡೈರಿಗೆ ಕೋಮಲ ಅಧ್ಯಕ್ಷೆ




ಮಲ್ಕುಂಡಿ, ಜು.3– ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷೆಯಾಗಿ ಕೋಮಲ, ಉಪಾಧ್ಯಕ್ಷೆ ನಾಗಮ್ಮ ಅವಿರೋಧ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಕೋಮಲ, ಉಪಾಧ್ಯಕ್ಷ ಸ್ಥಾನಕ್ಕೆ ನಾಗಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕೆ.ಪ್ರಭಾಕರ್ ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಿದರು.

ಗ್ರಾಪಂ ಸದಸ್ಯ ಗೋವಿಂದರಾಜು ಮಾತನಾಡಿ, ಸಂಘ ಲಾಭ ಕಾಣಲು ಸಂಘದ ಸದಸ್ಯರ ಸಹಕಾರ ಮುಖ್ಯ. ಹಾಲು ಉತ್ಪಾದಕರು ಸಂಘಕ್ಕೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಗ್ರಾಪಂ ಸದಸ್ಯ ನಾಗೇಶ್, ಮುಖಂಡರಾದ ಸುಬ್ರಹ್ಮಣ್ಯ, ಹುಚ್ಚೆಗೌಡ, ಪಟೇಲ್, ಎಂ.ರವಿ, ಚನ್ನರಾಜು ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಡೆಂಗ್ಯೂಗೆ ಟೈಗರ್ ಬ್ಲಾಕ್ ಯುವಕ ಸಾವು



ಹೆಚ್.ಡಿ.ಕೋಟೆ, ಜು.3– ಆಯುರ್ವೇದಿಕ್ ಗಿಡಮೂಲಿಕೆ ವ್ಯಾಪಾರಕ್ಕಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದ್ದ ಯುವಕನೋರ್ವ ಡೆಂಗ್ಯೂಗೆ ಬಲಿಯಾಗಿದ್ದಾನೆ.

ತಾಲೂಕಿನ ಟೈಗರ್ ಬ್ಲಾಕ್ ಗ್ರಾಮದ ಎಫ್ರಾಯಿಂ(19) ಸಾವನ್ನಪ್ಪಿದ ಯುವಕ. ಈತ ಕೆಲ ದಿನಗಳ ಹಿಂದೆ ಆಯುವೇದಿಕ್ ಗಿಡಮೂಲಿಕೆ ವ್ಯಾಪಾರಕ್ಕಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದ್ದ ಎನ್ನಲಾಗಿದೆ. ಕಳೆದ 2 ದಿನಗಳಿಂದ ತೀವ್ರ ಜ್ವರದಿಂದ ಬಳಲುತ್ತಿದ್ದ ಎಫ್ರಾಯಿಂ ಅಲ್ಲಿನ ಆಸ್ಪತ್ರೆಗೆ ತೆರಳಿ ತಪಾಸಣೆಗೊಳಪಟ್ಟಾಗ ಡೆಂಗ್ಯೂವಿನಿಂದ ಬಳಲುತ್ತಿರುವುದು ತಿಳಿದು ಬಂದಿದೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಆತ ಸಾವನ್ನಪ್ಪಿದ್ದಾನೆ ಎಂದು ಎಫ್ರಾಯಿಂ ದೊಡ್ಡಪ್ಪ ಬಿಲ್ಲ ತಿಳಿಸಿದ್ದಾರೆ.

ಗ್ರಾಮದ ಮುಖಂಡ ಮೀನರಾಜು ಮಾತನಾಡಿ, ಆಫ್ರಿಕಾದ ಅಮೆಜಾನ್‌ನ ಐವರಿಕೋಸ್ಟ್‌ನ ಅಬಿಡ್ಜಾನ್‌ನಲ್ಲಿರುವ ಮೃತ ಯುವಕನ ಶವವನ್ನು ವಾರಸುದಾರರಿಗೆ ತಲುಪಿಸುವ ಕೆಲಸವನ್ನು ಭಾರತ ಸರ್ಕಾರ ಮಾಡಬೇಕು ಎಂದು ಒತ್ತಾಯಿಸಿದರು. ಮೃತನ ತಂದೆ ಅಮಿತ್, ತಾಯಿ ಮುಮುಟಿ ಮಾತನಾಡಿ, ಇದ್ದ ಓರ್ವ ಪುತ್ರನನ್ನು ಕಳೆದುಕೊಂಡಿದ್ದೇವೆ. ಹೀಗಾಗಿ ಪುತ್ರನ ಅಂತಿಮ ದರ್ಶನ ಪಡೆಯಲು ಸರ್ಕಾರ ನಮ್ಮ ಮಗನ ಶವವನ್ನು ಭಾರತಕ್ಕೆ ಕರೆತರಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಡಿ.ದೇವರಾಜ್ ನಿಧನ



ಹುಣಸೂರು, ಜು.3– ದಲಿತ ಹೋರಾಟಗಾರ, ಕಟ್ಟೆಮಳಲವಾಡಿ ಗ್ರಾಮದ ನಿವಾಸಿ ಡಿ.ದೇವರಾಜ್(62) ಸೋಮವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೀದಿ ನಾಯಿಗಳ ದಾಳಿ: ಮೇಕೆ, ಮೂರು ಕುರಿ ಬಲಿ



ಮೈಸೂರು, ಜು.3(ಎಸ್‌ಬಿಡಿ)– ಬೀದಿ ನಾಯಿಗಳ ದಾಳಿಯಿಂದ ಮೇಕೆ ಹಾಗೂ ಮೂರು ಕುರಿ ಬಲಿಯಾಗಿವೆ. ಮೈಸೂರಿನ ಅಗ್ರಹಾರದಲ್ಲಿ ಸೋಮವಾರ ಈ ಘಟನೆ ನಡೆದಿದೆ.

ಅಗ್ರಹಾರದ ವೀಣೆ ಶೇಷಣ್ಣ ರಸ್ತೆ, ಒಂದನೇ ಕ್ರಾಸ್ ನಿವಾಸಿ ಮುದಾಸಿರ್ ಅಹಮದ್ ಬೀದಿಬದಿ ವ್ಯಾಪಾರಿಯಾಗಿದ್ದು, ಖಾಲಿ ನಿವೇಶನದಲ್ಲಿ ಕಾಂಪೌಂಡ್ ನಿರ್ಮಿಸಿಕೊಂಡು ಜೀವನೋಪಾಯಕ್ಕಾಗಿ ಮೇಕೆ–ಕುರಿಗಳನ್ನು ಸಾಕಿದ್ದರು.

ಸೋಮವಾರ ಬೆಳಗ್ಗೆ ಗೇಟ್‌ನಲ್ಲಿ ನುಸುಳಿದ ಬೀದಿ ನಾಯಿಗಳ ಹಿಂಡು, ಹಠಾತ್ತನೆ ಮೇಕೆ–ಕುರಿಗಳ ಮೇಲೆ ದಾಳಿ ನಡೆಸಿವೆ. ಕಾಡಿನಲ್ಲಿ ವ್ಯಾಘ್ರಗಳು ಬೇಟೆಯಾಡುವ ರೀತಿಯಲ್ಲಿ ಕತ್ತನ್ನು ಕಚ್ಚಿ ಸಾಯಿಸಿವೆ. ಮೇಕೆಗಳು ಒಂದೇ ಸಮನೆ ಕಿರುಚುತ್ತಿದ್ದರಿಂದ ಅಕ್ಕಪಕ್ಕದ ಮನೆಯವರು ಹೊರಬಂದಿದ್ದಾರೆ. ನಾಯಿಗಳ ಹಿಂಡು ಕಂಡು ಗದರಿದ್ದರಿಂದ ಅವು ಅಲ್ಲಿಂದ ಓಡಿ ಹೋಗಿವೆ. ಆದರೆ ರಕ್ತಸ್ರಾವದಿಂದ ನಾಲ್ಕು ಪ್ರಾಣಿಗಳು ಸಾವನ್ನಪ್ಪಿವೆ. ಇವುಗಳಲ್ಲಿ ಎರಡು ಗರ್ಭ ಧರಿಸಿದ್ದವು. ಸದ್ಯ ಒಂದು ಕುರಿ ನಾಯಿಗಳ ದಾಳಿಯಿಂದ ಬಚಾವಾಗಿದೆ.

ಸಾಕು ಪ್ರಾಣಿಗಳನ್ನು ಕಳೆದುಕೊಂಡು ಕಂಗಾಲಾಗಿರುವ ಮುದಾಸಿರ್ ಅಹಮದ್, ಪರಿಹಾರ ಕಲ್ಪಿಸಿಕೊಡುವಂತೆ ಕೋರಿ ನಗರ ಪಾಲಿಕೆಗೆ ಮನವಿ ಸಲ್ಲಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಸ್ಥಳೀಯ ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದ್ದಾರೆ.

ಈ ಬಡಾವಣೆಯಲ್ಲಿ ನಾಯಿಗಳ ದಾಳಿ ಹೊಸದಲ್ಲ. ಈ ಹಿಂದೆಯೂ ಮನೆಯೊಳಗೆ ನುಗ್ಗಿ ಬೆಕ್ಕುಗಳ ಮೇಲೆ ದಾಳಿ ನಡೆಸಿದ್ದವು. ರಸ್ತೆಯಲ್ಲಿ ಪುಟ್ಟ ಮಕ್ಕಳನ್ನು ಕಂಡರೆ ಬೊಗಳುತ್ತಾ ಕಚ್ಚಲು ಹತ್ತಿರಕ್ಕೆ ಧಾವಿಸುತ್ತವೆ ಯಾರಾದರೂ ಗದರಿದರೆ ಹಿಂದೆ ಸರಿಯುತ್ತವೆ ಯಾರೂ ನೋಡದಿದ್ದರೆ ಖಂಡಿತವಾಗಿ ಮಕ್ಕಳ ಮೇಲೂ ದಾಳಿ ನಡೆಸುತ್ತವೆ. ಮಕ್ಕಳು ಮಾತ್ರವಲ್ಲ ಎಲ್ಲರೂ ಬೀದಿ ನಾಯಿಗಳ ಹಾವಳಿಯಿಂದ ಭಯಭೀತರಾಗಿದ್ದಾರೆ ಎಂದು ಸ್ಥಳೀಯ ಯುವಕ ತಿಳಿಸಿದ್ದಾರೆ.

ಬೀದಿ ನಾಯಿಗಳ ಬಗ್ಗೆ ಪಾಲಿಕೆಯ ಪ್ರತಿ ಕೌನ್ಸಿಲ್ ಸಭೆಯಲ್ಲೂ ಚರ್ಚೆಯಾಗುತ್ತದೆ. ಸದಸ್ಯರಲ್ಲಿ ಒಬ್ಬರಾದರೂ ಬೀದಿ ನಾಯಿಗಳ ಹಾವಳಿ ನಿಯಂತ್ರಿಸಲು ಒತ್ತಾಯಿಸುತ್ತಾರೆ. ಆಗ ಅಧಿಕಾರಿಗಳು, ಬೀದಿ ನಾಯಿಗಳ ಸಂಖ್ಯೆ ಹೆಚ್ಚಾದಂತೆ ಶಸ್ತ್ರ ಚಿಕಿತ್ಸೆ ಮಾಡಿ, ಮತ್ತೆ ಅದೇ ಸ್ಥಳಕ್ಕೆ ಬಿಡಬೇಕು. ಒಂದೆಡೆ ಕೂಡಿ ಹಾಕುವುದಕ್ಕೆ ಅಥವಾ ಪುನರ್ವಸತಿ ಕಲ್ಪಿಸಲು ಅವಕಾಶವಿಲ್ಲ ಎಂದು ಉತ್ತರಿಸುತ್ತಾರೆ. ಅದರೊಂದಿಗೆ ಆ ವಿಷಯಕ್ಕೇ ಇತಿಶ್ರೀ ಹಾಡಲಾಗುತ್ತದೆ. ಮುಂದುವರೆದು ಪರ್ಯಾಯ ಕ್ರಮದ ಬಗ್ಗೆ ಚರ್ಚಿಸುವುದೇ ಇಲ್ಲ. ಶ್ವಾನಗಳ ಸಂತಾನಹರಣ ಶಸ್ತ್ರಚಿಕಿತ್ಸೆಯ ಸಾಧಕ–ಬಾಧಕಗಳ ಬಗ್ಗೆಯೂ ಮಾತನಾಡುವುದಿಲ್ಲ. ನಗರದೆಲ್ಲೆಡೆ ಈ ಸಮಸ್ಯೆಯಿದೆ. ಈಗಲಾದರೂ ಸೂಕ್ತ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಪಾಲಿಕೆ ಮುಂದಾಗಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ತಪ್ಪಿಸಿಕೊಳ್ಳುವಾಗ ಬಿದ್ದು ಬಾಲಕನಿಗೆ ಗಾಯ



ಮೇಕೆ ಹಾಗೂ ಕುರಿಗಳ ಮೇಲೆ ದಾಳಿ ನಡೆಸಿದ್ದ ನಾಯಿಗಳನ್ನು ಜನ ಓಡಿಸುತ್ತಿದ್ದರು. ಈ ವೇಳೆ ನಾಯಿಗಳು ಗೇಟ್ ಬಳಿ ನಿಂತಿದ್ದ ಬಾಲಕನ ಮೇಲೆರಗಲು ಮುಂದಾಗಿವೆ. ನಾಯಿಗಳ ಹಿಂಡು ದಾವಿಸುವುದನ್ನು ಗಮನಿಸಿದ ಬಾಲಕ ತಪ್ಪಿಸಿಕೊಳ್ಳಲು ಓಡಿಹೋಗುವಾಗ ಆಯತಪ್ಪಿ ಕೆಳಗೆ ಬಿದ್ದಿದ್ದಾನೆ. ಇದರಿಂದ ಆತನ ಮೊಣಕೈ ಹಾಗೂ ಸೊಂಟದಲ್ಲಿ ಗಾಯಗಳಾಗಿವೆ. ಜನ ಬಾಲಕನ ನೆರವಿಗೆ ಹೋಗದಿದ್ದರೆ ಆತನಿಗೂ ಕಚ್ಚುತ್ತಿದ್ದವು. ಅದೃಷ್ಟವಶಾತ್ ಬಚಾವಾಗಿದ್ದಾನೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಮೇಯರ್ ವಾರ್ಡ್‌ನಲ್ಲೇ ಮರಗಳಿಗೆ ಕಂಟಕ!

ಚರಂಡಿ ಕಾಮಗಾರಿಗೆ ಗುತ್ತಿಗೆದಾರರ ಮಾಸ್ಟರ್ ಮೈಂಡ್, ಮರಗಳ ಬೇರಿಗೆ ಕತ್ತರಿ



ಮೈಸೂರು, ಜು.3(ಎಸ್‌ಬಿಡಿ)– ಇತ್ತ ಗುಣಮಟ್ಟದ ಕಾಮಗಾರಿಯೂ ಸಾಧ್ಯವಿಲ್ಲ, ಅತ್ತ ಮರಗಳನ್ನೂ ಉಳಿಸಿದಂತಲ್ಲ. ಇದು ಮೈಸೂರು ಮೇಯರ್ ಶಿವಕುಮಾರ್ ಅವರ ವಾರ್ಡ್‌ನ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಯ ಅವಸ್ಥೆ.

ಕುವೆಂಪುನಗರ ಬಡಾವಣೆ, ಅನಿಕೇತನ ಮುಖ್ಯರಸ್ತೆಯಲ್ಲಿ ಮಳೆ ನೀರು ಚರಂಡಿ ಕಾಮಗಾರಿ ಪ್ರಗತಿಯಲ್ಲಿದೆ. ಆದರೆ ಪಾಲಿಕೆ ಅಧಿಕಾರಿಗಳು ಹಾಗೂ ಗುತ್ತಿಗೆದಾರ ಮರಗಳನ್ನು ಉಳಿಸಲು ನಾಜೂಕಿನ ಯೋಜನೆ ಮಾಡಿದ್ದಾರೆ. ಮನೆ ಕಾಂಪೌಂಡ್ ಕಡೆಗೆ ದಪ್ಪವಾದ ತಡೆಗೋಡೆ ನಿರ್ಮಿಸಿ, ರಸ್ತೆ ಕಡೆಗೆ ಮರಗಳ ಬೇರುಗಳನ್ನು ತೆಗೆದು, ತಳಭಾಗ ಕೊರೆದು ಗೋಡೆ ನಿರ್ಮಿಸುತ್ತಿದ್ದಾರೆ. ಮರದ ತಳವನ್ನು ಸ್ವಲ್ಪಭಾಗ ಕತ್ತರಿಸಿರುವುದರಿಂದ ಅವು ಯಾವಾಗಲಾದರೂ ಉರುಳಿ ಬೀಳಬಹುದು. ಸೈಜುಗಲ್ಲು ಜೋಡಿಸಿ, ಸಿಮೆಂಟ್ ಮೆತ್ತಿದರೆ ಮರಗಳು ಗಟ್ಟಿಯಾಗಿ ನಿಲ್ಲುತ್ತವೆ ಎಂಬ ಅವೈಜ್ಞಾನಿಕ ಯೋಜನೆ ಅವರಿಗಿರಬಹುದು. ಆದರೆ ಸಿಮೆಂಟ್‌ನಿಂದ ಮರಗಳಿಗೆ ತೊಂದರೆಯೇ ಹೊರತು ಅನುಕೂಲವಾಗುವುದಿಲ್ಲ.

ಮಳೆ ನೀರು ಚರಂಡಿ ಅತ್ಯವಶ್ಯಕ. ಹಾಗೆಯೇ ರಸ್ತೆ ಬದಿಯ ಗಟ್ಟಿಮುಟ್ಟಾದ ಮರಗಳನ್ನೂ ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಇಂಜಿನಿಯರ್‌ಗಳು ವೈಜ್ಞಾನಿಕವಾಗಿ ಚಿಂತನೆಯೊಂದಿಗೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ. ಬಿರುಗಾಳಿ ಹೆಚ್ಚಾಗಿರುವುದರಿಂದ ಬೇರು ಕತ್ತರಿಸಿರುವ ಮರಗಳು ಯಾವಾಗಲಾದರೂ ನೆಲಕ್ಕುರುಳಬಹುದು ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ. ಸದಾ ವಾಹನ ಸಂಚಾರವಿರುವ ಈ ರಸ್ತೆಯಲ್ಲಿ ಮರ ಬಿದ್ದರೆ ಪ್ರಾಣಾಪಾಯ ಸಂಭವಿಸುವ ಸಾಧ್ಯತೆ ಇದೆ. ಕೂಡಲೇ ಮೇಯರ್ ಅವರು ಸ್ಥಳ ಪರಿಶೀಲನೆ ನಡೆಸಿ, ಸೂಕ್ತ ಕ್ರಮಕ್ಕೆ ಸೂಚಿಸಬೇಕೆಂದು ಆಗ್ರಹಿಸಿದ್ದಾರೆ.



ಹಸಿರು ನಮ್ಮ ಉಸಿರು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು